ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 9 ಭಾನುವಾರ 2025

₹4

ಸಂಪುಟ: 45 | ಸಂಚಿಕೆ: 319 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಭಾನುವಾರ 9 ಮಾರ್ಚ್ 2025

ಹಿಂದಿನ ಲೋಪ-ದೋಷ ಸರಿಪಡಿಸಿಕೊಂಡು ಮೈಸೂರನ್ನು ಕ್ಲೀನ್ ಸಿಟಿ ಮಾಡೋಣ!

ಸ್ವಚ್ಛ ಸರ್ವೇಕ್ಷಣಾ ಸಭೆಯಲ್ಲಿ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಮಾಜಿ ಮೇಯರ್‌ಗಳ ಸಲಹೆ

ಮೈಸೂರು, ಮಾ.8(ಆರ್‌ಕೆ)–ಈವರೆಗೆ ಆಗಿರುವ ಲೋಪ-ದೋಷಗಳನ್ನು ಸರಿಪಡಿಸಿಕೊಂಡು, ಸಂಘಟಿತವಾಗಿ ಮೈಸೂರು ನಗರವನ್ನು ಸ್ವಚ್ಛತೆಯಲ್ಲಿ ಪ್ರಥಮ ಸ್ಥಾನಕ್ಕೆ ತರಲು ಸಂಕಲ್ಪ ಮಾಡೋಣ ಎಂದು ಮಾಜಿ ಮೇಯರ್‌ಗಳು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ.



ಮೈಸೂರು ಮಹಾನಗರಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದ ಮಾಜಿ ಮೇಯರ್‌ಗಳು.

2025–26ನೇ ಸಾಲಿನ ಸ್ವಚ್ಛ ಸರ್ವೇಕ್ಷಣಾ ಅಭಿಯಾನದ ಹಿನ್ನೆಲೆಯಲ್ಲಿ ಮೈಸೂರು ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಮಾಜಿ ಮೇಯರ್‌ಗಳೊಂದಿಗೆ ಸಭೆ ನಡೆಸಿ, ಅಭಿಪ್ರಾಯ, ಸಲಹೆ, ಮಾರ್ಗದರ್ಶನಗಳನ್ನು ಪಡೆದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಆಯುಕ್ತ ಆಸಿಫ್ ಅವರು, ರಾಷ್ಟ್ರೀಯ ಸ್ವಚ್ಛತಾ ಅಭಿಯಾನದಲ್ಲಿ ಈ ವರ್ಷ ಮೈಸೂರು ದೇಶದ ಮೊದಲ ಸ್ವಚ್ಛ ನಗರವನ್ನಾಗಿ ಮಾಡಲು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸಲಹೆ-ಅಭಿಪ್ರಾಯ ನೀಡುವಂತೆ ತಿಳಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಮಾಜಿ ಮೇಯರ್ ಆರ್.ಲಿಂಗಪ್ಪ ಮಾತನಾಡಿ, ಮೈಸೂರು ಆರಂಭದಲ್ಲಿ ಪ್ರಥಮ ಸ್ವಚ್ಛ ನಗರ ಎಂಬ ಬಿರುದು ಬರಲು ತಮ್ಮ ಅವಧಿಯಲ್ಲಿ ಕೈಗೊಂಡಿದ್ದ ಕಾರ್ಯಗಳ ಬಗ್ಗೆ ವಿವರಿಸಿದರು. ನಗರದಾದ್ಯಂತ ಇರುವ ಅನಧಿಕೃತ ಫ್ಲೆಕ್ಸ್‌ಗಳನ್ನು ತೆರವುಗೊಳಿಸಿ ಜಾಹೀರಾತು ಫಲಕ ಅಳವಡಿಸಲು ಅನುಮತಿ ನೀಡಬಾರದು. ಲಾರಿ ಮಾಲೀಕರ ಸಂಘದ ನೆರವಿನಿಂದ ಲಾರಿಗಳಲ್ಲಿ ಎಲ್ಲಾ ರೀತಿಯ ತ್ಯಾಜ್ಯ ತೆರವುಗೊಳಿಸಲಾಗಿತ್ತು. ಪಾರ್ಕ್ ನಿರ್ವಹಣೆ ಮತ್ತು ಸೌಂದರ್ಯೀಕರಣದ ಜವಾಬ್ದಾರಿಯನ್ನು ಸಂಘ-ಸಂಸ್ಥೆಗಳಿಗೆ ವಹಿಸಿದ್ದೆವು ಎಂದ ಅವರು, ಕಸ ವಿಂಗಡಣೆ ಬಗ್ಗೆ ಕರಪತ್ರಗಳನ್ನು ಹಂಚುವ ಮೂಲಕ ಜಾಗೃತಿ ಮೂಡಿಸಿ ಸ್ವಚ್ಛತೆ ಬಗ್ಗೆ ಫೀಡ್‌ಬ್ಯಾಕ್ ತೆಗೆದುಕೊಂಡು ಅದರಂತೆ ಕ್ರಮ ವಹಿಸಿದ್ದರಿಂದ ಸ್ವಚ್ಛನಗರವೆಂಬ ಬಿರುದು ಬಂದಿತ್ತು ಎಂದ ಲಿಂಗಪ್ಪ, ಈಗಲೂ ಪ್ರಯತ್ನಿಸಿದಲ್ಲಿ ಗುರಿ ತಲುಪಬಹುದು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಸಂದೇಶ್ ಸ್ವಾಮಿ, ನಿವೃತ್ತ, ಮೃತಪಟ್ಟಿರುವ ಪೌರಕಾರ್ಮಿಕರ ಸ್ಥಾನಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಬೇಕು. ಸ್ವಚ್ಛತಾ ಕೆಲಸದಲ್ಲಿ ನಿರತರಾದವರನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳಬಾರದು. ತ್ಯಾಜ್ಯ ವಿಲೇವಾರಿಯ ಲೋಪ ಸರಿಪಡಿಸಿ ಇಚ್ಛಾಶಕ್ತಿಯಿಂದ ಕೆಲಸ ಮಾಡಬೇಕು. ಒಳಚರಂಡಿ ವ್ಯವಸ್ಥೆ ಸುಧಾರಣೆಯಾಗದೆ ಸ್ವಚ್ಛತೆ ಸಾಧ್ಯವಿಲ್ಲ ಎಂದರು.

ಮನೆ-ಮನೆಯಿಂದ ಸಂಗ್ರಹ ಮಾಡುವ ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಪ್ಲಾಸ್ಟಿಕ್ ನಿಷೇಧ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಹಸಿ ಕಸದಿಂದ ಅನಿಲ ಉತ್ಪಾದನೆ ಮಾಡಬೇಕು. ಸ್ವಚ್ಛತೆ ಬಗ್ಗೆ ಆ್ಯಪ್ ಮೂಲಕ ಸಾರ್ವಜನಿಕರಿಂದ ದೂರು ಸ್ವೀಕರಿಸಿ ಕ್ರಮ ವಹಿಸಬೇಕೆಂದು ಎಂ.ಶಿವಕುಮಾರ್ ಸಲಹೆ ನೀಡಿದರು.

ಈಗಿರುವ ಪೌರಕಾರ್ಮಿಕರಿಂದ ಖಂಡಿತಾ ಸ್ವಚ್ಛತೆ ಸಾಧ್ಯವಾಗುವುದಿಲ್ಲ. ಹೊರಗುತ್ತಿಗೆ ಆಧಾರದಲ್ಲಿ ಹೆಚ್ಚುವರಿ ಪೌರಕಾರ್ಮಿಕರನ್ನು ನೇಮಿಸಿಕೊಂಡು ಹೆಚ್ಚಿನ ಅನುದಾನ ಪಡೆದು, ಸ್ವಚ್ಛತಾ ಕಾರ್ಯ ಮಾಡಿದಲ್ಲಿ ನಾವೆಲ್ಲರೂ ಕೈಜೋಡಿಸುತ್ತೇವೆ. ಸಾರ್ವಜನಿಕರ ಸಹಕಾರವೂ ಬೇಕಾಗುತ್ತದೆ ಎಂದು ಬಿ.ಎಲ್.ಭೈರಪ್ಪ ಅಭಿಪ್ರಾಯಪಟ್ಟರು.

ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬಗಳನ್ನು ದುರಸ್ತಿಗೊಳಿಸಿ ನಗರದ ಹೃದಯ ಭಾಗದಲ್ಲಿ ಕಸ ವಿಲೇವಾರಿಗೆ ಡಸ್ಟ್‌ಬಿನ್ ಅಳವಡಿಸಿ, ಪೌರಕಾರ್ಮಿಕರ ಕೆಲಸದ ಮೇಲೆ ನಿಗಾ ಇರಿಸಿ ಎಂದು ಎಂ.ಜೆ.ರವಿಕುಮಾರ್ (ಚಿನ್ನಿ ರವಿ) ಸಲಹೆ ನೀಡಿದ್ದಾರೆ.

ಮೋದಾಮಣಿ ಮಾತನಾಡಿ, ಮೊದಲು ಕಟ್ಟಡ ತ್ಯಾಜ್ಯ, ಒಣಗಿದ ಮರದ ರೆಂಬೆ, ಮೋರಿಗಳಲ್ಲಿ ಶೇಖರಣೆಯಾಗಿರುವ ಎಲೆಗಳನ್ನು ತೆರವುಗೊಳಿಸಬೇಕು. ಹಸಿ ಮತ್ತು ಒಣಗಿದ ಕಸ ಬೇರ್ಪಡಿಸಿ, ಪ್ರತೀ ಮನೆಗಳಿಗೆ ಡಸ್ಟ್‌ಬಿನ್‌ಗಳನ್ನು ಕೊಟ್ಟು ಸಾರ್ವಜನಿಕರಿಗೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಬೇಕಲ್ಲದೆ, ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಹೋಟೆಲ್, ಕಲ್ಯಾಣಮಂಟಪ, ಆಸ್ಪತ್ರೆ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಿ ವಿವಿಧ ಸಂಘ-ಸಂಸ್ಥೆಗಳ ನೆರವು ಪಡೆಯಬೇಕು ಎಂದು ಸಲಹೆ ನೀಡಿದರು.

ಮೈಸೂರು ನಗರದಲ್ಲಿ 10 ಲಕ್ಷ ಜನಸಂಖ್ಯೆ ಇದ್ದಾಗ ಕಾರ್ಯನಿರ್ವಹಿಸುತ್ತಿದ್ದ ಸಂಖ್ಯೆಯಷ್ಟೇ ಪೌರಕಾರ್ಮಿಕರೇ 16 ಲಕ್ಷ ಜನಸಂಖ್ಯೆ ಇರುವ ಈಗಲೂ ಸ್ವಚ್ಛತೆ ಮಾಡುತ್ತಿದ್ದಾರೆ. ವಾಣಿಜ್ಯ, ಕೈಗಾರಿಕಾ ತ್ಯಾಜ್ಯ ಹೆಚ್ಚಾಗಿರುವುದರಿಂದ ಹೆಚ್ಚುವರಿ ಪೌರಕಾರ್ಮಿಕರನ್ನು ನೇಮಿಸಿ ಅವರಿಗೆ ಮತ್ತಷ್ಟು ಸೌಲಭ್ಯ ನೀಡಿ ಕೆಲಸ ಮಾಡಿಸಿಕೊಳ್ಳಬೇಕೆಂದು ನಾರಾಯಣ ಅಭಿಪ್ರಾಯಪಟ್ಟರು.

ಮಾಜಿ ಮೇಯರ್‌ಗಳಾದ ಅಯೂಬ್ ಖಾನ್, ಹೆಚ್.ಎನ್.ಶ್ರೀಕಂಠಯ್ಯ, ಆರಿಫ್ ಹುಸೇನ್, ಟಿ.ಬಿ.ಚಿಕ್ಕಣ್ಣ, ಪುರುಷೋತ್ತಮ್, ಪುಷ್ಪಲತಾ ಚಿಕ್ಕಣ್ಣ, ಪುಷ್ಪಲತಾ ಜಗನ್ನಾಥ್, ದಕ್ಷಿಣಾಮೂರ್ತಿ ಸಹ ಸಭೆಯಲ್ಲಿ ಪಾಲ್ಗೊಂಡು ಈ ಬಾರಿಯ ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರಿಗೆ ಮೊದಲ ಸ್ಥಾನ ಗಳಿಸಲು ಪ್ರಯತ್ನಿಸಿದರೆ, ತಾವೂ ಕೈಜೋಡಿಸುವುದಾಗಿ ಭರವಸೆ ನೀಡಿದರು. ನಗರಪಾಲಿಕೆ ಹೆಚ್ಚುವರಿ ಆಯುಕ್ತರಾದ ಕುಸುಮ ಕುಮಾರಿ, ಉಪ ಆಯುಕ್ತೆ(ಅಭಿವೃದ್ಧಿ) ಕೆ.ಜೆ.ಸಿಂಧು, ಉಪ ಆಯುಕ್ತ (ಆಡಳಿತ) ದಾಸೇಗೌಡ, ಉಪ ಆಯುಕ್ತ (ಕಂದಾಯ) ಸೋಮಶೇಖರ್, ಹಿರಿಯ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಪೌರಕಾರ್ಮಿಕರಿಂದ ಸರಿಯಾಗಿ ಕೆಲಸ ತೆಗೆದುಕೊಳ್ಳುತ್ತಿಲ್ಲ

ಪಾಲಿಕೆ ಅಧಿಕಾರಿಗಳಿಗೆ ಮಾಜಿ ಮೇಯರ್ ಅಯೂಬ್ ಖಾನ್ ತರಾಟೆ

ಮೈಸೂರು, ಮಾ.8(ಆರ್‌ಕೆ)–ಪೌರಕಾರ್ಮಿಕರಿಂದ ಸರಿಯಾಗಿ ಸ್ವಚ್ಛತಾ ಕೆಲಸ ತೆಗೆದುಕೊಳ್ಳುತ್ತಿಲ್ಲ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರೂ ಆದ ಮಾಜಿ ಮೇಯರ್ ಅಯೂಬ್ ಖಾನ್ ಇಂದಿಲ್ಲಿ ಪಾಲಿಕೆ ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸ್ವಚ್ಛ ಸರ್ವೇಕ್ಷಣಾ ಅಭಿಯಾನ ಕುರಿತು ಆಯೋಜಿಸಿದ್ದ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪೌರಕಾರ್ಮಿಕರು ಕೇಳಿದಂತೆ ಎಲ್ಲಾ ಸೌಲಭ್ಯಗಳನ್ನೂ ಕೊಡಲಾಗುತ್ತಿದೆ. ಪೌರಕಾರ್ಮಿಕರ ಹಲವು ಸಂಘಟನೆಗಳು ಮುಂದಿಟ್ಟ ಎಲ್ಲಾ ಬೇಡಿಕೆಗಳನ್ನು ಈಡೇರಿಸುತ್ತಿರುವ ಪಾಲಿಕೆಯು, ಅವರಿಂದ ಸಮರ್ಪಕವಾಗಿ ಸ್ವಚ್ಛತಾ ಕೆಲಸ ತೆಗೆಯುತ್ತಿಲ್ಲವೇಕೆ ಎಂದು ಪ್ರಶ್ನಿಸಿದರು.


ಆರೋಗ್ಯ ಇಲಾಖೆ ಪರಿಸರ ಇಂಜಿನಿಯರ್‌ಗಳು ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ? ಎಷ್ಟು ಮಂದಿ ಪೌರಕಾರ್ಮಿಕರು ವಾರ್ಡ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರತೀ ದಿನ ಯಾವ ಯಾವ ವಾರ್ಡ್‌ಗಳಿಂದ ಎಷ್ಟೆಷ್ಟು ಕಸ ಸಂಗ್ರಹವಾಗುತ್ತಿದೆ ಎಂಬುದರ ಮಾಹಿತಿ ದಾಖಲಿಸುತ್ತಿದ್ದೀರಾ ಎಂದು ಅವರು ಪ್ರಶ್ನಿಸಿದರು.

6 ತಿಂಗಳು ಸ್ವಚ್ಛತಾ ಕೆಲಸ ಮಾಡಿದ ಕಾರ್ಮಿಕ, ನಂತರ ವಾಕಿ-ಟಾಕಿ ಹಿಡಿದು ಓಡಾಡುತ್ತಿರುತ್ತಾನೆ. ಪ್ರತಿಯೊಬ್ಬರ ಹಾಜರಾತಿ ತೆಗೆದುಕೊಳ್ಳುತ್ತಿಲ್ಲ. ಅವರು ಕೇಳಿದಂತೆ ಎಲ್ಲಾ ಸೌಲಭ್ಯಗಳನ್ನು ಕೊಟ್ಟ ಮೇಲೆ ಅವರಿಂದ ಸರಿಯಾಗಿ ಕೆಲಸ ತೆಗೀಬೇಕಲ್ಲಾ ಎಂದ ಅಯೂಬ್ ಖಾನ್, ಮೊದಲು ಅಂತಹ ಸಂಘ-ಸಂಸ್ಥೆಗಳಿಗೆ ಮನ್ನಣೆ ನೀಡುವುದನ್ನು ಬಿಡಿ ಎಂದು ಪಾಲಿಕೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಕೆಲಸ ಮಾಡದ ಪೌರಕಾರ್ಮಿಕರನ್ನು ತೆಗೆದು ಹಾಕಿ, ನಿಷ್ಠೆಯಿಂದ ಕೆಲಸ ಮಾಡಲು ಹೊರಗೆ ಸಾಕಷ್ಟು ಜನ ಸಿಗುತ್ತಾರೆ. ಸಂಬಳ, ಸಾರಿಗೆ, ಸಮವಸ್ತ್ರ, ಸುರಕ್ಷತಾ ಸಾಮಗ್ರಿಗಳು ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಿದಾಗ ಪೌರಕಾರ್ಮಿಕರಿಂದ ಅದೇ ರೀತಿ ಕೆಲಸ ತೆಗೆಯುವಂತಾಗಬೇಕೆಂದು ಅಯೂಬ್ ಖಾನ್ ಒತ್ತಾಯಿಸಿದರು. ಅದಕ್ಕೆ ಧನಿಗೂಡಿಸಿದ ಮಾಜಿ ಮೇಯರ್ ಎಂ.ಶಿವಕುಮಾರ್, ಪೌರಕಾರ್ಮಿಕರ ಕೆಲಸದ ಮೇಲೆ ನಿಗಾ ವಹಿಸಿ ಮೇಲ್ವಿಚಾರಣೆ ನಡೆಸುತ್ತಿಲ್ಲ. ಯಾರೂ ಯಾರ ನಿಯಂತ್ರಣದಲ್ಲಿರದ ಕಾರಣ, ಮೈಸೂರು ನಗರದಲ್ಲಿ ಸ್ವಚ್ಛತಾ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಡಾದಿಂದ 14 ನಿವೇಶನ ಮರಳಿ ಪಡೆಯಲು ನಮ್ಮ ತಾಯಿ ನಿರ್ಧರಿಸಿದ್ದಾರೆ....!

● ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಮಾಧ್ಯಮಕ್ಕೆ ಮಾಹಿತಿ ● ನಮ್ಮ ತಂದೆ-ತಾಯಿಯ ವಿನಾಕಾರಣ ಆರೋಪಿ ಸ್ಥಾನದಲ್ಲಿ ನಿಲ್ಲಿಸಿದರು: ವಿಷಾದ



ಮೈಸೂರು, ಮಾ.8(ಆರ್‌ಕೆ)–ಯಾವುದೇ ತಪ್ಪು ಮಾಡದಿದ್ದರೂ ನಮ್ಮ ತಂದೆ-ತಾಯಿಯ ಮೇಲೆ ಗೂಬೆ ಕೂರಿಸಿ, ವಿನಾಕಾರಣ ಆರೋಪಿ ಸ್ಥಾನದಲ್ಲಿ ನಿಲ್ಲಿಸಿದರು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ವಿಷಾದಿಸಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಅನಗತ್ಯ ಆರೋಪ ಮಾಡಿದ ಹಿನ್ನೆಲೆಯಲ್ಲಿ ಮಾನಸಿಕವಾಗಿ ನೊಂದಿದ್ದ ನಮ್ಮ ತಾಯಿಯವರು ಮುಡಾ ನೀಡಿದ್ದ 14 ನಿವೇಶನಗಳನ್ನು ವಾಪಸ್ ಕೊಟ್ಟಿದ್ದರು. ನ್ಯಾಯಯುತವಾಗಿ ಆ ನಿವೇಶನಗಳು ನಮಗೆ ಬರಬೇಕಾಗಿದೆ. ತನಿಖಾ ಪ್ರಕ್ರಿಯೆ ಮುಗಿದ ಮೇಲೆ ಕೋರ್ಟ್ ಮೂಲಕವೇ ಅವುಗಳನ್ನು ವಾಪಸ್ ಪಡೆಯಲು ನಮ್ಮ ತಾಯಿ ನಿರ್ಧರಿಸಿದ್ದಾರೆ ಎಂದರು.

ಆವತ್ತಿನ ಸಂದರ್ಭದಲ್ಲಿ ನಾವು ನಿವೇಶನಗಳನ್ನು ವಾಪಸ್ ನೀಡಬೇಕಾದ ವಾತಾವರಣ ನಿರ್ಮಾಣ ಮಾಡಿದ್ದರು. ವಿನಾಕಾರಣ ವ್ಯಾಪಕ ಟೀಕೆಗಳ ಹಿನ್ನೆಲೆಯಲ್ಲಿ ನಿವೇಶನಗಳನ್ನು ಮುಡಾಗೆ ವಾಪಸ್ ಕೊಟ್ಟಿದ್ದೆವು. ತನಿಖೆಯಿಂದ ನಮ್ಮದೇನು ತಪ್ಪಿಲ್ಲ ಎಂದು ಈಗ ಕಂಡುಬರುತ್ತಿದೆ. ಹಾಗಾಗಿ ಅವುಗಳನ್ನು ಮತ್ತೆ ವಾಪಸ್ ಪಡೆಯಲು ನಮ್ಮ ತಾಯಿ ನಿರ್ಧರಿಸಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಾದರಿಯಲ್ಲಿ ರೂಪಿಸುವ ಬಗ್ಗೆ ನಮ್ಮ ಸರ್ಕಾರ ನಿರ್ಧರಿಸಿದೆ. ಇನ್ನು ಮುಂದೆ ಮೈಸೂರು ಜನಪ್ರತಿನಿಧಿಗಳೆಲ್ಲಾ ಅದರ ಸದಸ್ಯರಾಗಿರುವುದಿಲ್ಲ. ಸರ್ಕಾರದಿಂದ ನಾಮನಿರ್ದೇಶನಗೊಂಡವರು ಮಾತ್ರವೇ ಮುಡಾದಲ್ಲಿರುತ್ತಾರೆ ಎಂದರು.

ಅಧಿಕಾರಿಗಳು ಮಾಡಿದ ತಪ್ಪಿನಿಂದ ಆಗಿರುವ ಅವ್ಯವಹಾರದ ಬಗ್ಗೆ ತನಿಖೆ ಮಾಡಲು ಈಗಾಗಲೇ ಆಯೋಗ ರಚನೆಯಾಗಿದೆ. ವರದಿ ಬಂದ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸಲಾಗುತ್ತದೆ ಎಂದರು. ಛಲವಾದಿ ನಾರಾಯಣಸ್ವಾಮಿ ತಮ್ಮ ತಂದೆಯ ದೈಹಿಕ ಸಾಮರ್ಥ್ಯದ ವಿಚಾರದಲ್ಲಿ ನೀಡಿರುವ ಹೇಳಿಕೆಯನ್ನು ಪ್ರಬಲವಾಗಿ ಖಂಡಿಸಿದರು. ಎಲ್ಲರಿಗೂ ವಯಸ್ಸಾಗುತ್ತದೆ. ಮುಪ್ಪಾಗುತ್ತಿದ್ದಂತೆಯೇ ಖಾಯಿಲೆಗಳೂ ಆರಂಭವಾಗುತ್ತವೆ. ಇಂಥಹದ್ದೇ ಕಾರಣಕ್ಕೆ ಕಾಯಿಲೆ ಬಂತು ಎಂದು ಹೇಳುವುದು ಸ್ವಸ್ಥರ ಲಕ್ಷಣವಲ್ಲ ಎಂದು ತಿರುಗೇಟು ನೀಡಿದರು.

ಮೈಸೂರು ನಗರಪಾಲಿಕೆ ಆಯುಕ್ತರ ನಗರ ಪ್ರದಕ್ಷಿಣೆ



ಮೈಸೂರಿನ ಜನತಾನಗರ, ಟಿ.ಕೆ.ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ಪರಿಶೀಲಿಸಿದ ನಗರಪಾಲಿಕೆ ಕಮಿಷ್ನರ್ ಶೇಖ್ ತನ್ವೀರ್ ಆಸಿಫ್.

ವಲಯ ಕಚೇರಿ–3ರ ವ್ಯಾಪ್ತಿಯ ಬಡಾವಣೆಗಳಲ್ಲಿ ಒಳಚರಂಡಿ ಸ್ವಚ್ಛತೆ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚನೆ

ಮೈಸೂರು,ಮಾ.8(ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಕಳೆದ ಒಂದು ವಾರದಿಂದ ಮೈಸೂರು ನಗರದಾದ್ಯಂತ ಎಲ್ಲಾ ವಾರ್ಡ್‌ಗಳಿಗೂ ಭೇಟಿ ನೀಡಿ ಮೂಲಸೌಕರ್ಯ ವ್ಯವಸ್ಥೆಗಳ ಪರಿಶೀಲಿಸುತ್ತಿದ್ದಾರೆ. ವಲಯ ಕಚೇರಿ–3ರ ವ್ಯಾಪ್ತಿಯ ಜನತಾನಗರ, ಟಿ.ಕೆ.ಬಡಾವಣೆ, ಶಾರದಾದೇವಿನಗರ ನಿವೇದಿತಾನಗರ, ರಿಂಗ್ ರೋಡ್‌ಗೆ ಹೊಂದಿಕೊಂಡ ವಸತಿ ಬಡಾವಣೆಗಳಿಗೆ ಭೇಟಿ ನೀಡಿ ಅಲ್ಲಿನ ಒಳಚರಂಡಿ, ಫುಟ್‌ಪಾತ್, ಬೀದಿದೀಪ, ಸ್ವಚ್ಛತೆ, ಪಾರ್ಕ್ ನಿರ್ವಹಣೆ ಬಗ್ಗೆ ಪರಿಶೀಲನೆ ನಡೆಸಿದರು.

ಟಿ.ಕೆ.ಲೇಔಟ್, ಜನತಾನಗರಗಳಲ್ಲಿ ಒಳಚರಂಡಿ ಬಂದ್ ಆಗಿದ್ದು, ಮಲಿನ ನೀರು ಅಲ್ಲಲ್ಲಿ ಮ್ಯಾನ್‌ಹೋಲ್‌ಗಳ ಮೂಲಕ ಉಕ್ಕಿ ರಸ್ತೆಗಳಲ್ಲಿ ಹರಿಯುತ್ತಿದ್ದು, ದುರ್ವಾಸನೆ ಬೀರುತ್ತಿರುವುದು ಕಂಡು ಬಂದ ಕಾರಣ, ವಾಣಿವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಶ್ವಿನ್‌ಕುಮಾರ್ ಅವರಿಗೆ ತಕ್ಷಣ ಕ್ರಮ ವಹಿಸುವಂತೆ ಆಯುಕ್ತರು ತಾಕೀತು ಮಾಡಿದರು.

ಮನೆ-ಮನೆಯಿಂದ ಕಸ ಸಂಗ್ರಹಿಸುವ ಪೌರಕಾರ್ಮಿಕರು ಹಸಿ ಕಸ ಮತ್ತು ಒಣಗಿದ ಕಸವನ್ನು ಮೂಲ ಹಂತದಲ್ಲೇ ವಿಂಗಡಿಸಿ ಪಡೆದು ಸೂಕ್ತ ರೀತಿಯಲ್ಲಿ ಸಾಗಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ನೆರವಾಗಬೇಕು. ಎಲ್ಲೆಂದರಲ್ಲಿ ಕಸ ಎಸೆಯುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದೂ ಆಸಿಫ್ ಅವರು ತಮ್ಮ ಸಿಬ್ಬಂದಿಗೆ ಸೂಚಿಸಿದರು.

ಬೇಸಿಗೆ ಆರಂಭವಾಗಿರುವುದರಿಂದ ವಸತಿ ಬಡಾವಣೆಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಬೇಕು. ಅಗತ್ಯವಿರುವ ಕಡೆ ಒಳಚರಂಡಿ ನಿರ್ಮಿಸಲು ಎಸ್ಟಿಮೇಟ್ ತಯಾರಿಸಿ ವರದಿ ನೀಡಿದಲ್ಲಿ ಅನುದಾನ ಒದಗಿಸಲಾಗುವುದು ಎಂದು ಕಮಿಷ್ನರ್ ತಿಳಿಸಿದರು.

ಪಾಲಿಕೆ ಉಪ ಆಯುಕ್ತ (ಅಭಿವೃದ್ಧಿ)ರಾದ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧು, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಹೇಶ್, ಪಾಲಿಕೆ–3ರ ವಲಯಾಧಿಕಾರಿ ಸತ್ಯಮೂರ್ತಿ ಹಾಗೂ ಇತರ ಅಧಿಕಾರಿಗಳು ಈ ಸಂದರ್ಭ ಹಾಜರಿದ್ದರು.

ಕಾರ್ಮಿಕರಿಗೆ ಆರೋಗ್ಯ ತಪಾಸಣಾ ಶಿಬಿರ, ಟೂಲ್‌ಕಿಟ್ ವಿತರಣೆ

ಮೈಸೂರು,ಮಾ.8–ಮೈಸೂರಿನ ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘದ ವತಿಯಿಂದ ಮಾ.9ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತರಿಗೆ ಆರೋಗ್ಯ ತಪಾಸಣಾ ಶಿಬಿರ ಮತ್ತು ಟೂಲ್‌ಕಿಟ್ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸುವರು. ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರಾದ ಎಸ್.ಆರ್.ವೀಣಾ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್‌ಕುಮಾರ್, ಕಾರ್ಮಿಕ ನಿರೀಕ್ಷಕಿ ಹರ್ಷಿತಾ, ಮಾಲೇಗೌಡ ಉಪಸ್ಥಿತರಿರುವರು.

ಅಭಿನಂದನೆ...



16ನೇ ದಾಖಲೆ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೆಪಿಸಿಸಿ ಸದಸ್ಯ ಕೆ.ಮರಿಗೌಡ, ಕೆ.ಸಾಲುಂಡಿ ಮಹದೇವ್, ಬಗರ್ ಹುಕುಂ ಸಮಿತಿ ಸದಸ್ಯ ಅರಸನಕೆರೆ ಸ್ವಾಮಿಗೌಡ ಅಭಿನಂದಿಸಿದರು.

ನಿಧನ

ಶೆರ್ಲಿ



ಮೈಸೂರು, ಮಾ.8–ಮೈಸೂರಿನ ವಿಜಯನಗರ ನಿವಾಸಿ ಶೆರ್ಲಿ (63) ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಮೃತರು ಪತಿ ಇಮ್ಯಾನ್ಯುಯೆಲ್ ಸುರೇಶ್‌ಕುಮಾರ್, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ರೋಮನ್ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರವಿ ಶರ್ಮ




ಮೈಸೂರಿನ ಜೆಎಸ್‌ಎಸ್ ಆಟೋ ಚಾಲಕರ ಮತ್ತು ಮಾಲೀಕರ ಸಂಘದ ಗೌರವ ಅಧ್ಯಕ್ಷರೂ ಆದ ಬ್ರಾಹ್ಮಣ ಸಂಘದ ಯುವ ಮುಖಂಡ ರವಿಶರ್ಮ(65) ಶುಕ್ರವಾರ ನಿಧನರಾದರು. ಇವರ ಅಂತ್ಯಕ್ರಿಯೆ ಶನಿವಾರ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಲೀಲಾವತಿ



ಮೈಸೂರು, ಮಾ. 8– ಜೆಕೆ ಟೈರ್ಸ್ ಮಾಜಿ ಕಾರ್ಮಿಕ ನಾಯಕರಾದ ಎಂ. ಪುಟ್ಟಸ್ವಾಮಿಯವರ ಪತ್ನಿ ಶ್ರೀಮತಿ ಲೀಲಾವತಿ(58) ಅವರು ಇಂದು ಮೈಸೂರಿನ ಹೆಬ್ಬಾಳು ಭೈರವೇಶ್ವರನಗರದ ಬಸವನಗುಡಿ ಬಳಿ ಇರುವ ನಿವಾಸದಲ್ಲಿ ನಿಧನರಾದರು. ಮೃತರು ಪತಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.03.2025 ಭಾನುವಾರ, ಮಳೆ ನಕ್ಷತ್ರ: ಪೂರ್ವಭಾದ್ರಾ 04.03.2025 ರಿಂದ 16.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■**ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■**ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ:** ಕವನ ಸಂಕಲನಗಳ ಲೋಕಾರ್ಪಣೆ, ಕವಿಗೋಷ್ಠಿ, ಪ್ರಶಸ್ತಿ ಪ್ರದಾನ ಸಮಾರಂಭ, ಕೃತಿಗಳ ಲೋಕಾರ್ಪಣೆ: ಶ್ರೀ ಕುಂದೂರು ಮಠದ ಅಧ್ಯಕ್ಷ ಡಾ.ಶರತ್‌ಚಂದ್ರ ಸ್ವಾಮೀಜಿ, ಅಧ್ಯಕ್ಷತೆ: ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ.ಸಂತೋಷ್, ಮುಖ್ಯ ಅತಿಥಿಗಳು : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಕೃತಿಗಳ ಪರಿಚಯ : ಶ್ರೀಮತಿ ಶೋಭಾ, ಡಾ. ಮಲ್ಲಿನಾಥ ಎಸ್.ತಳವಾರ, ಸಿ.ವಾಣಿ ರಾಘವೇಂದ್ರ, ಸ್ಥಳ: ಐಡಿಯಲ್ ಜಾವಾ ರೋಟರಿ ಸಭಾಂಗಣ, ಬೆಳಗ್ಗೆ 10ಕ್ಕೆ.

■**ಶ್ರೀ ಚಾಮುಂಡೇಶ್ವರಿ ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಉಪಸ್ಥಿತರು : ಗೌರವ ಅಧ್ಯಕ್ಷ ಆರ್ಯನ್ ಗಂಧದಗುಡಿ, ಅಧ್ಯಕ್ಷ ಮಹದೇವ್ ಶೆಟ್ರು, ಕಾರ್ಯದರ್ಶಿ ಎಂ.ಪಿ. ರಮೇಶ್, ಖಜಾಂಚಿ ಮಧು ಮಾಲತಿ, ಸ್ಥಳ: ಸಂಘದ ಆವರಣ, ಹೂಟಗಳ್ಳಿ, ಬೆಳಗ್ಗೆ 10 ರಿಂದ.

■**ಮೈಸೂರು ಆರ್ಟ್ ಗ್ಯಾಲರಿ :** ಶ್ರೀಮತಿ ಆರ್.ಎಸ್. ಪುಷ್ಪ, ಚಿತ್ರಕಲಾ ಶಿಕ್ಷಕರು ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ಉಪನ್ಯಾಸಕರಾದ ಶ್ರೀಮತಿ ಬಿ.ಎನ್. ನಳಿನಾಕ್ಷಿ, ಮುಖ್ಯ ಅತಿಥಿಗಳು : ಹಿರಿಯ ಉಪನ್ಯಾಸಕ ಕೆ.ವಿ. ಸುರೇಶ್, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಎಲ್. ಶಿವಲಿಂಗಪ್ಪ, ಉಪಸ್ಥಿತರು : ಚಿತ್ರಕಲಾ ಶಿಕ್ಷಕರಾದ ಶ್ರೀಮತಿ ಆರ್. ಸರೋಜ, ಮಂಜುನಾಥ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಉಚಿತ ರಂಗಭೂಮಿ ಮತ್ತು ಜಾನಪದ ಕಲಾಪ್ರಕಾರಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಬೆಳಗ್ಗೆ 11ಕ್ಕೆ ವಿಚಾರ ಸಂಕಿರಣ–ಬುದ್ಧ ಮತ್ತು ಬುದ್ಧನ ತತ್ವಗಳು, ಉದ್ಘಾಟನೆ: ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಅಧ್ಯಕ್ಷತೆ: ವಕೀಲ ಶಿವಪ್ರಸಾದ್ ಎಂ.ಸಿ.ಹುಡಿ, ಮುಖ್ಯ ಅತಿಥಿಗಳು: ಹಿರಿಯ ರಂಗ ನಿರ್ದೇಶಕ ಮೈಮ್ ರಮೇಶ್, ಆರ್.ಹರೀಶ್, ಸಹಾಯಕ ಪ್ರಾಧ್ಯಾಪಕ ಎಂ.ನಂಜುಂಡಯ್ಯ, ಉಪಸ್ಥಿತರು: ಗೌತಮ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸಂಜೆ 6.30ಕ್ಕೆ ಜಿಪಿಐಇಆರ್ ರಂಗ ತಂಡದಿಂದ ಮಂಟೇಸ್ವಾಮಿ ಕಥಾ ಪ್ರಸಂಗ ನಾಟಕ ಪ್ರದರ್ಶನ, ನಿರ್ದೇಶನ : ಮೈಮ್ ರಮೇಶ್, ರಚನೆ: ಡಾ.ಹೆಚ್.ಎಸ್.ಶಿವಪ್ರಕಾಶ್, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ.

■**ಮೈಸೂರು ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘ :** ವಾರ್ಷಿಕ ಪ್ರತಿಭಾ ಪುರಸ್ಕಾರ, ಸಮಾಜ ಸೇವಕರಿಗೆ ಸನ್ಮಾನ, ಸಾನ್ನಿಧ್ಯ : ಡಾ. ಪುರುಷೋತ್ತಮಾನಂದಪುರಿ ಸ್ವಾಮೀಜಿ, ಅಯ್ಯನ ಸರಗೂರು ಮಠದ ಶ್ರೀ ಮಹದೇವ ಸ್ವಾಮೀಜಿ, ಉದ್ಘಾಟನೆ : ಮಾಜಿ ಸಚಿವ ಸಿ. ಪುಟ್ಟರಂಗ ಶೆಟ್ಟಿ, ಉಪಸ್ಥಿತರು : ಡಾ. ಕೆ.ಎಸ್. ರವೀಂದ್ರನಾಥ್, ದೊಡ್ಡಗವಿಬಸಪ್ಪ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ. ಸೋಮಣ್ಣ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■**ಶ್ರೀ ಕ್ಷೇತ್ರ ದಂಡಿನಮಾರಮ್ಮ ದೇವಸ್ಥಾನ :** ಶ್ರೀ ಮನೆ ಮಂಚಮ್ಮ ದಂಡಿನಮಾರಮ್ಮ ಮತ್ತು ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವ, ಸ್ಥಳ: ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ.

■ **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಶೇಷಾರೋಹಣ, ಸ್ಥಳ: ದೇವಸ್ಥಾನ, ಹಳೇ ಸಂತೇಪೇಟೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ.ಬಿ.ಸುನೀತಾ ಆಚಾರ್ಯ, ಎನ್.ಹೇಮಾ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 9.00–ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಗ್ಲಾಕೋಮಾ ಸಪ್ತಾಹದ ಸಂಬಂಧವಾಗಿ ವಿಶೇಷ ಕಾರ್ಯಕ್ರಮ, ಗ್ಲಾಕೋಮಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ನೇತ್ರ ತಜ್ಞರಾದ ಡಾ.ರವಿಶಂಕರ್ ಕೆ.ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಕೇಳು ಪುಟ್ಟ–ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 KRISH-TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಉದಯೋನ್ಮುಖ ಕವಿ ಕೇತುಪುರದ ಪುನೀತ್ ಪರಿಚಯ, ಪ್ರಸ್ತುತಿ: ಎಂ.ಎಸ್.ಭಾರತಿ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಎಂ.ಟಿ. ಶೃತಿರಂಜನಿ, 12.45 ಜನಪದ ಸಂಗೀತ–ಟಿ. ನರಸೀಪುರ ತಾಲೂಕು ಸೋಸಲೆ ಹೋಬಳಿ ಕೈಯಂಬಳ್ಳಿ ಗ್ರಾಮದವರಾದ ಇಂದ್ರಮ್ಮ ಮತ್ತು ಸಂಗಡಿಗರಿಂದ ಬಿಸಿಲು ಮಾರಮ್ಮನ ಹಾಡು, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು –ಕೆ.ಪಿ.ರೇವತಿ, 2.40 ಭಾರತ ಹಾಗೂ ನ್ಯೂಜಿಲ್ಯಾಂಡ್ ತಂಡಗಳ ನಡುವೆ ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಫೈನಲ್ ಪಂದ್ಯದ ನೇರ ವೀಕ್ಷಕ ವಿವರಣೆ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ ರಾಜೇಂದ್ರ ಕಂಡಲ್ ಗಾಂವ್ಕರ್ – ಹಾಡುಗಾರಿಕೆ

■**ಬಸವ ಸಮಿತಿ:** ಶರಣ ಸಂಗಮ–303, ಸಾನ್ನಿಧ್ಯ : ಶ್ರೀ ವಿರಕ್ತಮಠದ ಮಠಾಧ್ಯಕ್ಷ ಶ್ರೀ ಶ್ರೀಕಂಠಸ್ವಾಮೀಜಿ, ಸಾಹಿತಿ ಆರ್. ದಿಲೀಪ್ ಕುಮಾರ್ ಅವರಿಂದ ವಚನ ಸಾಹಿತ್ಯವನ್ನು ಏಕೆ ಓದಬೇಕು? ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಉಪಾಧ್ಯಕ್ಷೆ ಶುಭಮಣಿ, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜು, ಚೆನ್ನೈನ ಸುರಾನ ಮತ್ತು ಸುರಾನ ಅಂತರರಾಷ್ಟ್ರೀಯ ಕಾನೂನು ಸಂಸ್ಥೆ:** 22ನೇ ರಾಷ್ಟ್ರೀಯ ಅಣುಕು ನ್ಯಾಯಾಲಯ ಸ್ಪರ್ಧೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಹೈಕೋರ್ಟ್ ನ್ಯಾಯಾಧೀಶ ಕೃಷ್ಣ ದೀಕ್ಷಿತ್, ಅಧ್ಯಕ್ಷತೆ : ಹೈಕೋರ್ಟ್ ನ್ಯಾಯಾಧೀಶ ಪ್ರದೀಪ್ ಸಿಂಗ್ ಯೆರೂರ್, ಗೌರವ ಅತಿಥಿಗಳು: ಹಿರಿಯ ವಕೀಲ ವಿ. ರಘುರಾಮನ್, ಉಪಸ್ಥಿತರು: ಜೆಎಸ್‌ಎಸ್ ಕಾನೂನು ಕಾಲೇಜು ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ವಕೀಲ ಪ್ರೀತಮ್ ಸುರಾನ, ಕಾಲೇಜು ಪ್ರಿನ್ಸಿಪಾಲ್ ಡಾ. ಎನ್. ವಾಣಿಶ್ರೀ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಸಂಜೆ 5ಕ್ಕೆ


■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ಇಂದಿರಾದೇವಿ ಪ್ರಫುಲ್ಲಚಂದ್ರ ಸಂಸ್ಮರಣಾ ಕಾರ್ಯಕ್ರಮ, ಪಂಡಿತ್ ಓಂಕಾರ್‌ನಾಥ್ ಹವಾಲ್ದಾರ್ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ, ಪಂಡಿತ್ ಕಾರ್ತಿಕ್ ಭಟ್–ತಬಲ, ಪಂಡಿತ್ ಸಮೀರ್ ಹವಾಲ್ದಾರ್–ಹಾರ್ಮೋನಿಯಂ, ಸ್ಥಳ : ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■**ರಂಗಾಯಣ :** ರಂಗಾಯಣದ ಹಿರಿಯ ಕಲಾವಿದರಿಂದ ಮಿಸ್ಟರ್ ಜೋಗೀಶ್ ನಾಟಕ ಪ್ರದರ್ಶನ, ನಿರ್ದೇಶನ : ಹೆಚ್.ಕೆ. ದ್ವಾರಕಾನಾಥ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

■ **ರಂಗ ಸಂಪದ :** ರಂಗ ಸಂಪದ ಕಲಾವಿದರಿಂದ ಶೇಷಗ್ರಸ್ಥರು ನಾಟಕ ಪ್ರದರ್ಶನ, ರಚನೆ ಮತ್ತು ನಿರ್ದೇಶನ : ರಮೇಶ್ ಚಂದ್, ಸ್ಥಳ: ನಟನಾ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 7ಕ್ಕೆ.

ಹೊಮ್ಮರಗಳ್ಳಿಯಲ್ಲಿಂದು, ಹೆಚ್.ಡಿ. ಕೋಟೆ ತಾ.

■ **ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘ :** ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತರಿಗೆ ಆರೋಗ್ಯ ತಪಾಸಣಾ ಶಿಬಿರ ಮತ್ತು ಟೂಲ್ ಕಿಟ್ ವಿತರಣಾ ಕಾರ್ಯಕ್ರಮ, ಉದ್ಘಾಟನೆ : ಶಾಸಕ ಅನಿಲ್ ಚಿಕ್ಕಮಾದು, ಅಧ್ಯಕ್ಷತೆ: ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರಾದ ಎಸ್.ಆರ್.ವೀಣಾ, ಮುಖ್ಯ ಅತಿಥಿಗಳು : ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್, ಕಾರ್ಮಿಕ ನಿರೀಕ್ಷಕರಾದ ಕು. ಪಿ. ಹರ್ಷಿತಾ, ಮಾಲೇಗೌಡ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಸ್ಥಳ: ಸರ್ಕಾರಿ ಪ್ರೌಢಶಾಲೆ, ಬೆಳಗ್ಗೆ 9 ರಿಂದ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 9 ಭಾನುವಾರ 2025

ಸಂಪುಟ: 45 | ಸಂಚಿಕೆ: 319 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸಿಎಂ ಸಿದ್ದರಾಮಯ್ಯ–ಡಿಸಿಎಂ ಡಿ.ಕೆ.ಶಿವಕುಮಾರ್ ಇಬ್ಬರೂ ಸಮರ್ಥರು; ಬದ್ಧ ನಾಯಕರು

ಒಟ್ಟಾಗಿ ಕೆಲಸ ಮಾಡಿ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಒಗ್ಗಟ್ಟಿನ ಪಾಠ



ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ

ಕಲಬುರಗಿ, ಮಾ.8– ಮುಖ್ಯಮಂತ್ರಿ ಹುದ್ದೆ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕಾಗಿ ವಿವಿಧ ಗುಂಪುಗಳ ಲಾಬಿ ಮಧ್ಯೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ವಿರುದ್ಧ ದಿಕ್ಕಿನಲ್ಲಿ ಹೋಗದೆ ನೇರ ದಾರಿಯಲ್ಲಿ ಒಟ್ಟಾಗಿ ಕೆಲಸ ಮಾಡುವಂತೆ ಸಲಹೆ ನೀಡಿದರು.

ಜೇವರ್ಗಿಯ ಕಟ್ಟಿ ಸಾಂಗವಿ ಗ್ರಾಮದಲ್ಲಿನ ಧರ್ಮಸಿಂಗ್ ಆಸ್ಪತ್ರೆಯ ಆವರಣದಲ್ಲಿ ಕಲ್ಯಾಣ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳನ್ನು ಮಾಡುವ ಗುರಿಯನ್ನು ಹೊಂದಿರುವ 'ಕಲ್ಯಾಣ ಪಥ ಯೋಜನೆ'ಗೆ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, ಜನರು ತಮ್ಮ ನಾಯಕರನ್ನು ಒಳ್ಳೆಯ ಆಕಾಂಕ್ಷೆಗಳೊಂದಿಗೆ ಆಯ್ಕೆ ಮಾಡುತ್ತಾರೆ. ಜನರ ಆ ಆಕಾಂಕ್ಷೆಗಳನ್ನು ಈಡೇರಿಸುವುದು ನಾಯಕರ ಕರ್ತವ್ಯ. ನಾಯಕರೇ ವಿರುದ್ಧ ದಿಕ್ಕಿನಲ್ಲಿ ಹೋದರೆ ಜನರನ್ನು ಹೇಗೆ ಎದುರಿಸಬಹುದು ಎಂದು ಅವರು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಉಪಸ್ಥಿತರಿದ್ದರು. ಆದರೆ ಕಾರಣಾಂತರಗಳಿಂದ ಸಿದ್ದರಾಮಯ್ಯ ಭಾಗವಹಿಸಲು ಸಾಧ್ಯವಾಗಲಿಲ್ಲ.

ಹಣಕಾಸು ಸಚಿವರಾಗಿ 16 ಬಾರಿ ಬಜೆಟ್ ಮಂಡಿಸಿದ್ದು ಬಹುಶಃ ಸಿಎಂ ಸಿದ್ದರಾಮಯ್ಯ ಅವರ ದಾಖಲೆ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ಗಳಿಗೆ ಮೆಚ್ಚುಗೆಯ ಅಗತ್ಯವಿದೆ. ಅವರು ದೀನ–ದಲಿತರು ಮತ್ತು ಎಲ್ಲಾ ವರ್ಗದ ಜನರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಾರೆ. ಅದೇ ರೀತಿ ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಮತ್ತು ಉಪಮುಖ್ಯಮಂತ್ರಿಯಾಗಿ ■6ನೇ ಪುಟಕ್ಕೆ

ನಟಿ ರನ್ಯಾರಾವ್ ಚಿನ್ನ ಕಳ್ಳಸಾಗಣೆ ಪ್ರಕರಣ

ಸಿಬಿಐ ವಶಕ್ಕೆ




ರಾಜ್ಯದ ಹಿರಿಯ ಸಚಿವರಿಗೆ ಉರುಳು ಸಾಧ್ಯತೆ!

ಬೆಂಗಳೂರು, ಮಾ. 8(ಕೆಎಂಶಿ)– ಚಿತ್ರನಟಿ ರನ್ಯಾರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದ ತನಿಖೆಯನ್ನು ಸಿಬಿಐ ವಹಿಸಿಕೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಹಿರಿಯ ಸಚಿವರೊಬ್ಬರ ಕೊರಳಿಗೆ ಉರುಳಾಗುವ ಲಕ್ಷಣಗಳು ಕಂಡುಬರುತ್ತಿವೆ. ಚಿನ್ನ ಕಳ್ಳಸಾಗಣೆಯಲ್ಲಿ ಪ್ರಭಾವೀ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಉದ್ದಿಮೆದಾರರು ಶಾಮೀಲಾಗಿದ್ದಾರೆಂದು ■6ನೇ ಪುಟಕ್ಕೆ

ಇಂದು ಚಾಂಪಿಯನ್ಸ್ ಟ್ರೋಫಿ ಫೈನಲ್

ಭಾರತ–ನ್ಯೂಜಿಲೆಂಡ್ ಹಣಾಹಣಿ



ದುಬೈ, ಮಾ.8– ಚಾಂಪಿಯನ್ಸ್ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಭಾರತ ಹಾಗೂ ನ್ಯೂಜಿಲೆಂಡ್ ತಂಡಗಳು ಮುಖಾಮುಖಿಯಾಗಲಿವೆ. ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ನಾಳೆ (ಮಾ.9) ಮಧ್ಯಾಹ್ನ 2.30ಕ್ಕೆ ಪಂದ್ಯ ನಡೆಯಲಿದೆ. ಟೂರ್ನಿಯುದ್ದಕ್ಕೂ ಅಮೋಘ ಪ್ರದರ್ಶನ ನೀಡಿರುವ ಈ ತಂಡಗಳು ಟ್ರೋಫಿ ಎತ್ತಿ ಹಿಡಿಯಲು ತುದಿಗಾಲಲ್ಲಿ ನಿಂತಿವೆ.

ಈ ಟೂರ್ನಿಯಲ್ಲಿ 5ನೇ ಬಾರಿ ಫೈನಲ್ ತಲುಪಿರುವ ಭಾರತ ಗೆದ್ದರೆ ಇದು ಮೂರನೇ ಪ್ರಶಸ್ತಿಯಾಗಲಿದೆ. 3ನೇ ಬಾರಿ ಅಂತಿಮ ಹಂತ ತಲುಪಿರುವ ನ್ಯೂಜಿಲೆಂಡ್ ಗೆದ್ದರೆ, ಎರಡನೇ ಟ್ರೋಫಿ ಇದಾಗಲಿದೆ. ರೋಹಿತ್ ಶರ್ಮಾ ನಾಯಕತ್ವದ ಭಾರತ, ಗುಂಪು ಹಂತದಲ್ಲಿ ನ್ಯೂಜಿಲೆಂಡ್‌ಗೆ ಸೋಲುಣಿಸುವ ಮುನ್ನ, ಬಾಂಗ್ಲಾದೇಶ ಹಾಗೂ ಪಾಕಿಸ್ತಾನವನ್ನು ಮಣಿಸಿತ್ತು. ಹೀಗಾಗಿ, 'ಎ' ಗುಂಪಿನಲ್ಲಿ ಅಗ್ರಸ್ಥಾನಿಯಾಗಿ ನಾಕೌಟ್ ತಲುಪಿತ್ತು. ಇತ್ತ ಮಿಚೆಲ್ ಸ್ಯಾಂಟ್ನರ್ ಬಳಗ, ಟೀಂ ಇಂಡಿಯಾ ಎದುರು ಪರಾಭವಗೊಂಡಿರುವುದನ್ನು ಬಿಟ್ಟರೆ, ಉಳಿದ ತಂಡಗಳ ವಿರುದ್ಧ ಪರಾಕ್ರಮ ತೋರಿದೆ.

ಮೈಸೂರಲ್ಲಿ ಸುಪ್ರೀಂಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ

ಮುಡಾ ಪ್ರಕರಣ ಸಂಬಂಧ ಪ್ರಮುಖರೊಂದಿಗೆ ಚರ್ಚೆ?



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸುಪ್ರೀಂಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರನ್ನು ಸ್ಥಳೀಯ ಮುಖಂಡರು ಭೇಟಿಯಾದರು.

ಮೈಸೂರು, ಮಾ.8– ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ವಾದ ಮಂಡಿಸಿದ್ದ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಮೈಸೂರು ಪ್ರವಾಸದಲ್ಲಿದ್ದಾರೆ. ಶನಿವಾರ ಮೈಸೂರಿಗೆ ಆಗಮಿಸಿದ ಅವರು, ಸಂಜೆ ವೇಳೆಗೆ ವಾಪಸ್ಸಾಗಲಿದ್ದಾರೆ ಎಂಬ ಮಾಹಿತಿ ಇತ್ತು. ಆದರೆ ಪ್ರತಿಷ್ಠಿತ ಖಾಸಗಿ ಹೋಟೆಲ್‌ನಲ್ಲಿ ತಂಗಿರುವ ಅವರು, ಮುಡಾ ಪ್ರಕರಣ ಸಂಬಂಧ ಸಿಬಿಐ ತನಿಖೆ ಕೋರಿ ದೂರುದಾರ ಸ್ನೇಹಮಯಿ ಕೃಷ್ಣ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಕೆಲ ಮುಡಾ ಮಾಜಿ ಅಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರೊಂದಿಗೆ ಚರ್ಚೆ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ 14 ನಿವೇಶನಗಳ ಹಂಚಿಕೆ ಬಗ್ಗೆ ಲೋಕಾಯುಕ್ತ ಪೊಲೀಸರು ಸರಿಯಾದ ತನಿಖೆ ನಡೆಸಿಲ್ಲ ಎಂದು ಆರೋಪಿಸಿರುವ ಸ್ನೇಹಮಯಿ ಕೃಷ್ಣ, ಈ ಸಂಬಂಧ ಸಿಬಿಐ ತನಿಖೆ ಕೋರಿ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ ಬೆಳಗ್ಗೆ ಎದ್ದ ಕೂಡ್ಲೆ ಅಲಂಕಾರ ಮಾಡಿಕೊಳ್ಳಲು ಶುರು ಮಾಡಿದಳು.

ಗಂಡ : ನಿನಗೆ ಹುಚ್ಚು ಹಿಡಿದಿದ್ಯ,
ಇಷ್ಟು ಬೇಗ ಯಾಕೆ ಅಲಂಕಾರ ಮಾಡ್ಕೊತಿದ್ಯ

ಹೆಂಡತಿ : ಬಾಯಿ ಮುಚ್ಚಿ ಸಾಕು, ನನ್ನ ಫೋನ್ ಲಾಕ್
ಓಪನ್ ಮಾಡಬೇಕು. ಅದು ನನ್ನ ಮುಖ ಗುರುತು ಹಿಡಿತಿಲ್ಲ.

ಮೈಸೂರು ಮಿತ್ರ

ಭಾನುವಾರ, 9 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಳ್ಳೆಯ ಸಂಬಂಧಗಳನ್ನು ಪ್ರೀತಿ ಕೊಟ್ಟು ಉಳಿಸಿಕೊಳ್ಳಿ.
ಕೆಟ್ಟ ಸಂಬಂಧಗಳನ್ನು ಮೌನವಾಗಿದ್ದು ಕಳೆದುಕೊಳ್ಳಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡ್ಡ ಗೋಡೆ ಮೇಲೆ ದೀಪ ಇಟ್ಟ ಹಾಗೆ

ನಿಮ್ಮ ಪತ್ರಗಳು

■ ಮನೆಯ ಮುಂದಿನ ಮರದ ಕೊಂಬೆ ತೆರವಿಗೆ ಮನವಿ



ಮಾನ್ಯರೆ,

ಮೈಸೂರಿನ ರಾಮಕೃಷ್ಣನಗರ, 1ನೇ ಮುಖ್ಯ ರಸ್ತೆ, ಹೆಚ್ ಬ್ಲಾಕ್ ಮನೆ ನಂ. ಎರಡರ ಮುಂದೆ ಇರುವ ಮಹಾಗನಿ ಮರವೊಂದು ಈಗಾಗಲೇ 35 ವರ್ಷಗಳಷ್ಟು ಹಳೆಯದಾಗಿದೆ. ಅದರ ಕೊಂಬೆಗಳು ಒಣಗಿ ಮುಖ್ಯ ರಸ್ತೆಯ ಮೇಲೆ ಮತ್ತು ಪಾದಚಾರಿಗಳು ನಡೆಯುವಲ್ಲಿ ಬೀಳುವುದಲ್ಲದೆ, ಅದರ ಒಣಗಿದ ಕಾಯಿಗಳು ಉದುರುತ್ತಿವೆ. ಇದರೊಂದಿಗೆ ಮರದ ಬೇರಿನ ಒತ್ತಡದಿಂದ ಮೂರು ಅಡಿ ಚರಂಡಿಯ ಗೋಡೆಯೂ ಕುಸಿಯುತ್ತಿದೆ. ಸಂಬಂಧಪಟ್ಟವರು ಇದರ ಕಡೆ ಗಮನಹರಿಸಿ ಮರದ ಕೊಂಬೆಗಳನ್ನು ತೆರವುಗೊಳಿಸಬೇಕಾಗಿ ಈ ಮೂಲಕ ಮನವಿ.

–ಕೃಷ್ಣಮೂರ್ತಿ ಹನೂರು, ರಾಮಕೃಷ್ಣನಗರ, ಮೈಸೂರು.

■ ಅಮೇರಿಕಾದ ನಿರ್ಧಾರ ಖಂಡನೀಯ

ಮಾನ್ಯರೆ,

ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅನುಸರಿಸುತ್ತಿರುವ ವಿದೇಶಾಂಗ ಮತ್ತು ಆರ್ಥಿಕ ನೀತಿಗಳು ಕಟು ಟೀಕೆಗಳಿಗೆ ಗುರಿಯಾಗುತ್ತಿವೆ. ಕೆನಡಾ, ಮೆಕ್ಸಿಕೋ, ಚೀನಾ,ಭಾರತ ಮುಂತಾದ ದೇಶಗಳ ಸರಕುಗಳ ಮೇಲೆ "ರೆಸಿಪ್ರೋಕಲ್ ತೆರಿಗೆ" (ಪ್ರತಿ ತೆರಿಗೆ) ವಿಧಿಸುವುದಾಗಿ ಹೇಳಿರುವುದು ಭಾರತ ಸೇರಿದಂತೆ ಅನೇಕ ರಾಷ್ಟ್ರಗಳ ಆಕ್ರೋಶಕ್ಕೆ ಕಾರಣವಾಗಿದೆ. ತನ್ನ ಉತ್ಪನ್ನಗಳ ಮೇಲೆ ಶೇಕಡಾ 20 ರಷ್ಟು ತೆರಿಗೆ ಹೇರುವ ಅಮೇರಿಕಾದ ನಿರ್ಧಾರಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಚೈನಾ, ಹೆದರಿಕೆ, ಬೆದರಿಕೆಗಳಿಗೆ ನಾವು ಬಗ್ಗೋಲ್ಲ, ಎಲ್ಲಾ ರೀತಿಯ ಯುದ್ಧಕ್ಕೂ ನಾವು ಸಿದ್ದವೆಂದು ಘೋಷಿಸಿದೆ. ಅಮೇರಿಕಾದ ಈ ನಿರ್ಧಾರ ಕಾರ್ಯರೂಪಕ್ಕೆ ಬಂದರೆ ಭಾರತದ ಮೇಲೆ 60 ಸಾವಿರ ಕೋಟಿ ರೂಪಾಯಿಗಳ ಅಧಿಕ ಹೊರೆ ಬೀಳಲಿದೆ. ಅಮೇರಿಕಾ ಇಂತಹ ದುಸ್ಸಾಹಸಗಳಿಗೆ ಕೈಹಾಕದೇ, ಎಲ್ಲಾ ದೇಶಗಳ ಜೊತೆ ಉತ್ತಮ ಆರ್ಥಿಕ ಬಾಂಧವ್ಯಗಳನ್ನು ಹೊಂದುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

■ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಅಗ್ನಿಪರೀಕ್ಷೆ

ಮಾನ್ಯರೆ,

3 ವರ್ಷಗಳ ನಂತರ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಹೆಚ್‌ಡಿ ಪ್ರವೇಶ ಪರೀಕ್ಷೆಯನ್ನು ಕರೆಯಲ್ಪಟ್ಟಿತು. ಅದರಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯವು ಒಂದು. ಕಳೆದ ಡಿಸೆಂಬರ್ 23 ರಂದು ನಡೆದ ಪರೀಕ್ಷೆಯಲ್ಲಿ ಪಾಸ್ ಆದವರ ಸಂಖ್ಯೆ 2 ಮಾತ್ರ ಅನ್ನುವುದು ಅತೀ ದುಃಖಕರ ಸಂಗತಿ. ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಲು ವಿವಿ ಸುಮಾರು 3 ತಿಂಗಳ ಕಾಲಾವಕಾಶ ತೆಗೆದುಕೊಂಡರೂ ಇಂದಿಗೂ ಕೂಡ ಕೀ ಉತ್ತರಗಳನ್ನು ವೆಬ್‌ಸೈಟ್‌ನಲ್ಲಿ ನೀಡಿಲ್ಲ. ವಿವಿಯ ಈ ನಡೆಯಿಂದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಸುಮಾರು 35ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಕೇವಲ ಇಬ್ಬರು ವಿದ್ಯಾರ್ಥಿಗಳು ಮಾತ್ರ ತೇರ್ಗಡೆಗೊಂಡಿರುವುದು ಆಶ್ಚರ್ಯಕರ. ವಿದ್ಯಾರ್ಥಿಗಳು ಮರು ಮೌಲ್ಯ ಮಾಪನಕ್ಕೆ ಹಾಕೋಣ ಎಂದರೆ ಅದರ ಶುಲ್ಕ ಸಾವಿರಾರು ಗಟ್ಟಲೆ ಇದೆ.. ಬಡ ವಿದ್ಯಾರ್ಥಿಗಳು ಎಲ್ಲಿ ಹೋಗಬೇಕು....!! ನಾವು ತೇರ್ಗಡೆಗೊಳ್ಳುತ್ತೇವೆ ಎಂದು ನಂಬಿಕೆ ಇದ್ದರೂ ಮರು ಮೌಲ್ಯಮಾಪನಕ್ಕೆ ಹಾಕುವಷ್ಟು ಹಣ ನಮ್ಮ ಹತ್ತಿರ ಇಲ್ಲ. ಇದಕ್ಕೆ ಮೈಸೂರು ವಿಶ್ವವಿದ್ಯಾನಿಲಯವೇ ಉತ್ತರ ನೀಡಬೇಕು. 55 ಅಂಕವನ್ನು ಕಟ್ ಆಫ್ ಆಗಿ ವಿವಿ ನಿರ್ಧರಿಸಿದೆ. ಅದನ್ನಾದರೂ 35ಕ್ಕೆ ಇಳಿಸಬೇಕು. ಇಲ್ಲವೇ ಮರು ಮೌಲ್ಯಮಾಪನ ಮಾಡಬೇಕು.. ಪತಿಕೋದ್ಯಮ ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿಸಬೇಕು. – ನೊಂದ ವಿದ್ಯಾರ್ಥಿನಿ, ಮೈಸೂರು.


■ ಅಪಾಯಕ್ಕೆ ಆಹ್ವಾನಿಸುತ್ತಿರುವ ದೊಡ್ಡ ಮೋರಿ ಸೇತುವೆ



ಮಾನ್ಯರೆ,

ಮೈಸೂರು ನಗರದ ರೇಷ್ಮೆ ಕಾರ್ಖಾನೆಯ ಬಳಿಯ ಹೆಚ್.ಡಿ. ಕೋಟೆ ಮಾರ್ಗದ ದೊಡ್ಡ ಮೋರಿಯ ಎಡಭಾಗದ ಸೇತುವೆ ಕುಸಿದು ತಡೆಗೋಡೆಯ ಕಬ್ಬಿಣದ ಸಲಾಖೆಯು ಮುರಿದಿದ್ದು ಜಾಗವು ತೇವಾಂಶದ ವಸ್ತಿಯಿಂದಾಗಿ ಕುಸಿದಿದೆ. ಈ ಮಾರ್ಗದಲ್ಲಿ ದಿನನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ರಾತ್ರಿಯ ವೇಳೆಯಲ್ಲಿ ವಾಹನ ಚಾಲಕರು ಸ್ವಲ್ಪ ಯಾಮಾರಿದರೂ ಪ್ರಾಣಕ್ಕೆ ಸಂಚಕಾರ ಕಾದಿದೆ. ಕೂಡಲೇ ಸಂಬಂಧಪಟ್ಟ ಇಲಾಖೆಯವರು ಗಮನಹರಿಸಲಿ.

–ಪಡುವಾರಹಳ್ಳಿಯ ಎಂ ರಾಮಕೃಷ್ಣ, ವಕೀಲರು, ಮೈಸೂರು.



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 9663996390

ಹಳ್ಳಿ ಹಕ್ಕಿ ಹಾಡು



ಬೇಂದ್ರೆಯವರೇ ಪರಕಾಯ ಪ್ರವೇಶ ಮಾಡಿದಂತಹ ಅನುಭವ!

ಕಳೆದ ಫೆಬ್ರವರಿ 27ನೇ ತಾರೀಖಿನಂದು ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿರುವ ವಿಶ್ವಶ್ರಮ ಚೇತನದಲ್ಲಿನ ಶರ್ಮಾ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಅದಕ್ಕೆ ವರಕವಿ ಡಾ.ದ.ರಾ.ಬೇಂದ್ರೆಯವರ 129ನೇ ಜನ್ಮದಿನದ ಕಾರ್ಯಕ್ರಮಕ್ಕೆ ನಾನು ಬರಲೇಬೇಕೆಂದು ಆಮಂತ್ರಣ ಕೊಟ್ಟಿದ್ದರು. ಅವರ ಆಹ್ವಾನವನ್ನು ಮನ್ನಿಸಿ ನಾನು 26ರ ರಾತ್ರಿಯೇ ಮೈಸೂರಿನಿಂದ ರೈಲಿನಲ್ಲಿ ಪ್ರಯಾಣ ಬೆಳೆಸಿ, 27ರ ಬೆಳಗ್ಗೆ ಹುಬ್ಬಳ್ಳಿ ತಲುಪಿ, ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೆ.

ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ ಏರ್ಪಡಿಸಲಾಗಿತ್ತು. ಅದರಲ್ಲಿ ಆಯುರ್ವೇದಿಕ್ ಕಾಲೇಜಿನ ವೈದ್ಯರೂ ಆದ ಡಾ.ಶರ್ಮಾ, ಪರಿಶ್ರಮ ಅಧಿಕವಿತ್ತು. ವಿದ್ಯಾರ್ಥಿಗಳು ಬೇಂದ್ರೆಯವರ ಅಭಿಮಾನಿಗಳು, ಹುಬ್ಬಳ್ಳಿ–ಧಾರವಾಡ ಅವಳಿ ನಗರದ ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರದವರು, ಮುಂತಾಗಿ ಬಹಳ ಮಂದಿ ಸೇರಿದ್ದರು.

ಮೊದಲಿಗೆ ಡಾ.ಶರ್ಮಾ ಯಾರೆಂದು ನಿಮಗೆ ತಿಳಿಸಿ, ಮುಂದಕ್ಕೆ ಹೋಗುತ್ತೇನೆ. ಡಾ.ಶರ್ಮಾ, ದಿ॥ ಬೇಂದ್ರೆಯವರ ಕಟ್ಟಾ ಶಿಷ್ಯರು ಮತ್ತು ಅವರ ಬಗೆಗೆ ಹಲವಾರು ಸಂಶೋಧನೆಗಳನ್ನು ಸಹ ಮಾಡಿದಂತಹವರು. ಮೇಲಾಗಿ ಇಡೀ ಕರ್ನಾಟಕವನ್ನು ಸುತ್ತಿ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ತಾತ್ಕಾಲಿಕ, ಅರೆಕಾಲಿಕ ಉದ್ಯೋಗಿಗಳ ಬವಣೆಗಳನ್ನು ಒಂದು ದೊಡ್ಡ ಸಂಘಟನೆ ಮೂಲಕ ಪರಿಹರಿಸುತ್ತಿದ್ದವರು. ಸಾವಿರಾರು ಜನ ನಿರುದ್ಯೋಗಿಗಳಿಗೆ ದಾರಿ ತೋರಿಸುವುದರ ಜೊತೆ ಜೊತೆಗೆ ಉದ್ಯೋಗದಲ್ಲಿದ್ದವರು, ಉದ್ಯೋಗದಾತರಿಂದ ಕಿರುಕುಳಕ್ಕೆ ಒಳಗಾದಾಗ ಸಂಘಟನೆಯ ಮೂಲಕ ಹೋರಾಟ ಮಾಡಿ ರಕ್ಷಿಸುತ್ತಿದ್ದವರು. ಹಾಗಾಗಿ ಡಾ.ಶರ್ಮಾ ಅವರನ್ನು 'ದಿನಗೂಲಿಯ ದಿನಕರ' ಎಂದು ಅವರೊಡನೆ ಹೋರಾಟ ಮಾಡುತ್ತಿದ್ದವರು ಕರೆಯುತ್ತಿದ್ದರು.

ಡಾ.ಶರ್ಮಾರವರು ಕಾನೂನು ವಿದ್ವಾಂಸರು, ಜೊತೆಗೆ ರಾಜಕೀಯ ಶಾಸ್ತ್ರದ ನುರಿತ ಪ್ರಾಧ್ಯಾಪಕರು. ಯಾವುದೇ ಪ್ರತಿಫಲ ಅಪೇಕ್ಷೆಯಿಲ್ಲದೆ ನೊಂದವರ ಧ್ವನಿಯಾಗಿ ಇಡೀ ನಾಡನ್ನು ಸುತ್ತಿದವರು. ದಿನಗೂಲಿಗಳ ಬವಣೆ ಬದುಕು, ಹೋರಾಟದ ಬದುಕಿನ ಬಗ್ಗೆ ನೂರಾರು ಲೇಖನಗಳು, ಪುಸ್ತಕಗಳ ಬರೆದಿರುವವರು. ತಮ್ಮ 94ನೇ ಇಳಿ ವಯಸ್ಸಿನಲ್ಲೂ ಕುಳಿತಲ್ಲೇ ಧ್ವನಿ ಎತ್ತುವ ಧೀರರು ಈ ಶರ್ಮಾರವರು.

ನಾನು ಶಾಸಕನಾಗಿ, ಮಂತ್ರಿಯಾಗಿ, ಸಂಸದನಾಗಿ ಡಾ.ಶರ್ಮಾ ಅವರ ನ್ಯಾಯಯುತ ಹೊರಾಟಕ್ಕೆ ಸ್ಪಂದಿಸುತ್ತಾ ಬಂದವನು. ಮೈಸೂರಿನಲ್ಲಿಯೂ ಡಾ. ಶರ್ಮಾ ದೊಡ್ಡ ಸಭೆಯನ್ನು ಸಂಘಟಿಸಿದವರು. ಹಾಗಾಗಿ ನನಗೆ ಅವರು ತುಂಬಾ ಆತ್ಮೀಯರು.



ಫೆಬ್ರವರಿ 27ರಂದು ಹುಬ್ಬಳ್ಳಿಯಲ್ಲಿ ಏರ್ಪಡಿಸಿದ್ದ ವರಕವಿ ಡಾ.ದ.ರಾ.ಬೇಂದ್ರೆಯವರ 129ನೇ ಜನ್ಮದಿನದ ಕಾರ್ಯಕ್ರಮದಲ್ಲಿ ಬೇಂದ್ರೆಯವರು ತೊಡುತ್ತಿದ್ದ ಸಾಂಪ್ರದಾಯಿಕ ಉಡುಗೆ ತೊಟ್ಟು ಸಂಭ್ರಮಪಟ್ಟ ಎಂಎಲ್‌ಸಿ ಹೆಚ್.ವಿಶ್ವನಾಥ್.

ಅಂತಹವರು ಮತ್ತು ನನ್ನ ನಡುವಿನ ಸ್ನೇಹ–ಸಲುಗೆ ನನ್ನನ್ನು ಹುಬ್ಬಳ್ಳಿಯ ಕಾರ್ಯಕ್ರಮಕ್ಕೆ ಕರೆದೊಯ್ದಿತ್ತು. ಕಾರ್ಯಕ್ರಮಕ್ಕೆ ಹೋಗುವ ಮುನ್ನ ಡಾ.ಶರ್ಮಾ ಮತ್ತು ಅವರ ಕಾರ್ಯದರ್ಶಿ ಸುಮಿತ್ರ ಪೋತ್ನೀಸ್ ಮತ್ತಿತರರೊಡಗೂಡಿ ಅವರದ್ದೇ ಸಂಸ್ಥೆಯ ಆವರಣದಲ್ಲಿರುವ, ಶರ್ಮಾರವರೇ ಕಟ್ಟಿಸಿದ ಗಣೇಶನ ಗುಡಿಗೆ ಹೋಗಿ ಆರತಿ ತೆಗೆದುಕೊಂಡವು, ಬಳಿಕ ಬೇಂದ್ರೆಯವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಡಾ.ಕೆ.ಎಸ್.ಶರ್ಮಾ ಸಭಾಂಗಣಕ್ಕೆ ಆಗಮಿಸಿ ವೇದಿಕೆ ಮೇಲೆ ಆಸೀನರಾದೆವು. ನಮ್ಮೊಡನೆ ರಾಜ್ಯ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ.ದುರ್ಗಾದಾಸ್, ಪ್ರೊ.ರವೀಂದ್ರ ಶಿರೋಳ್ಕರ್, ನಿವೃತ್ತ ನ್ಯಾಯಾಧೀಶರಾದ ಎನ್.ಬಿ. ಕುಲಕರ್ಣಿ, ಡಾ.ಸಿ.ಸಿ.ಹಿರೇಮಠ ಇತರರೂ ವೇದಿಕೆ ಹಂಚಿಕೊಂಡರು.

ಕಾರ್ಯಕ್ರಮ ಪ್ರಾರಂಭವಾಯಿತು. ಸ್ವಾಗತ ಭಾಷಣದ ನಂತರ ಈಗ ವಿಶ್ವನಾಥರಿಗೆ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳಾಗಿದ್ದ ಡಾ. ಬೇಂದ್ರೆಯವರ ಹೆಸರಿನಲ್ಲಿ 'ರಾಜನೀತಿಜ್ಞ' ಗೌರವ ಪ್ರಶಸ್ತಿ ಯನ್ನು ನೀಡಿ ಗೌರವಿಸಲಾಗುತ್ತದೆ. ಎಂದು ಪ್ರಕಟಿಸಲಾಯ್ತು. ಪ್ರಶಸ್ತಿಗೆ ಮೆರಗು ನೀಡು ವಂತೆ ಡಾ.ಬೇಂದ್ರೆಯವರ ಸಾಂಪ್ರದಾಯಿಕ ಉಡುಗೆಗಳಾದ ಕರಿಬಣ್ಣದ ಕೋಟು, ಕರಿಯ ಟೋಪಿ, ಪಂಚೆಯ ಕಚ್ಚೆ ತೊಟ್ಟು, ಛತ್ರಿಯನ್ನು ಕೈಯಲ್ಲಿ ಹಿಡಿಯಲು ಕೊಟ್ಟರು. ಅಂತಿಮವಾಗಿ ಬೇಂದ್ರೆಯವರ ಸಾಂಪ್ರದಾಯಿಕ ಉಡುಗೆ ತೊಡಿಸಿ ನನಗೆ 'ರಾಜನೀತಿಜ್ಞ' ಪ್ರಶಸ್ತಿ ಸ್ವೀಕರಿಸಲು ಸೂಚಿಸಲಾಯಿತು. ಸಾಂಪ್ರದಾಯಿಕ ಉಡುಗೆ ತೊಟ್ಟು ಪ್ರಶಸ್ತಿ ಸ್ವೀಕರಿಸಿದ ನನ್ನನ್ನು ಇಡೀ ಸಭೆ ಕರತಾಡನದ ಮೂಲಕ ಅಭಿನಂದಿಸಿತು.

> ಪ್ರಸ್ತುತ ನಾಡಿನ ರಾಜಕಾರಣದಲ್ಲಿ ತನಗನ್ನಿಸಿದ್ದನ್ನು ನೇರವಾಗಿ ಹೇಳುವ, ಸಾಧ್ಯವಾದಷ್ಟು ಪ್ರಾಮಾಣಿಕವಾಗಿ ಬದುಕುತ್ತಿರುವ ಅವರ ಸರಳತನ, ಜೊತೆಗೆ ಅವರು ವಿದ್ಯಾಮಂತ್ರಿಯಾಗಿದ್ದಾಗ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಮತ್ತು ಸಹಕಾರ ಮಂತ್ರಿಯಾಗಿದ್ದಾಗ 'ಯಶಸ್ವಿನಿ' ಆರೋಗ್ಯ ವಿಮಾ ಯೋಜನೆ ಜಾರಿ ಮಾಡಿ, ನಾಡಿನ ಜನರ ಆರೋಗ್ಯ, ಶಿಕ್ಷಣಕ್ಕಾಗಿ ದುಡಿದವರು. ಅದಕ್ಕಾಗಿ ವಿಶ್ವನಾಥರಿಗೆ ಪ್ರಶಸ್ತಿ ಪ್ರದಾನ ಎಂದು ಘೋಷಿಸಿದರು. ನನಗಂತೂ ಬೇಂದ್ರೆಯವರು ತೊಡುತ್ತಿದ್ದ ಸಾಂಪ್ರದಾಯಿಕ ಉಡುಗೆ ತೊಟ್ಟಾಗ ಬೇಂದ್ರೆಯವರೇ ನನ್ನಲ್ಲಿ ಪರಕಾಯ ಪ್ರವೇಶ ಮಾಡಿದಂತಾಯಿತು.

ವಿಶ್ವನಾಥರಿಗೆ ಯಾಕಾಗಿ ಪ್ರಶಸ್ತಿ ಎಂದು ಪ್ರಶಸ್ತಿ ಪ್ರಶಂಸನಾ ಪತ್ರ ಓದಿದ ಡಾ.ಹಿರೇಮಠ; ಈ ಹಿಂದೆ ವಿಶ್ವನಾಥರು (1993) ಧಾರವಾಡದ ಸಾಧನ ಕೇರಿಯಲ್ಲಿರುವ ಡಾ.ಬೇಂದ್ರೆಯವರ ಮನೆಗೆ ಬಂದು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ್ದರು. ಆಗ ಅವರು ಬೇಂದ್ರೆಯವರ ಅಭಿಮಾನಿಗಳ ಕೋರಿಕೆಯಂತೆ ಸಾಧನ ಕೇರಿಯಲ್ಲಿ ಬೇಂದ್ರೆ ಭವನ ಮತ್ತು ಬೇಂದ್ರೆ ಪ್ರತಿಷ್ಠಾನ –ಎರಡನ್ನೂ ಆಗ ಮಾಡಿಕೊಟ್ಟವರು. ಜೊತೆಗೆ ಪ್ರಸ್ತುತ ನಾಡಿನ ರಾಜಕಾರಣದಲ್ಲಿ ತನಗನ್ನಿಸಿದ್ದನ್ನು ನೇರವಾಗಿ ಹೇಳುವ, ಸಾಧ್ಯವಾದಷ್ಟು ಪ್ರಾಮಾಣಿಕವಾಗಿ ಬದುಕುತ್ತಿರುವ ಅವರ ಸರಳತನ, ಜೊತೆಗೆ ಅವರು ವಿದ್ಯಾಮಂತ್ರಿಯಾಗಿದ್ದಾಗ ಮಕ್ಕಳಿಗೆ ಮಧ್ಯಾಹ್ನದ 'ಬಿಸಿಯೂಟ' ಮತ್ತು ಸಹಕಾರ ಮಂತ್ರಿಯಾಗಿದ್ದಾಗ 'ಯಶಸ್ವಿನಿ' ಆರೋಗ್ಯ ವಿಮಾ ಯೋಜನೆ ಜಾರಿ ಮಾಡಿ, ನಾಡಿನ ಜನರ ಆರೋಗ್ಯ, ಶಿಕ್ಷಣಕ್ಕಾಗಿ ದುಡಿದವರು. ಅದಕ್ಕಾಗಿ ವಿಶ್ವನಾಥರಿಗೆ ಪ್ರಶಸ್ತಿ ಪ್ರಧಾನ ಎಂದು ಘೋಷಿಸಿದರು.

ನನಗಂತೂ ಬೇಂದ್ರೆಯವರು ತೊಡುತ್ತಿದ್ದ ಸಾಂಪ್ರದಾಯಿಕ ಉಡುಗೆ ತೊಟ್ಟಾಗ ಬೇಂದ್ರೆಯವರೇ ನನ್ನಲ್ಲಿ ಪರಕಾಯ ಪ್ರವೇಶ ಮಾಡಿದಂತಾಯಿತು. ಇದು ಜನ್ಮಾಂತರದ ಪುಣ್ಯ ಎಂದೆನಿಸಿತು. ತಕ್ಷಣ ನನಗೆ ನೆನಪಾಗಿದ್ದು ಬೇಂದ್ರೆಯವರು ಬರೆದ ಒಂದು ಪದ್ಯದ ಸಾಲುಗಳು:

'ರಸವೇ ಜನನ
ವಿರಸ ಮರಣ
ಸಮರಸವೇ ಜೀವನ
....
ಕುರುಡು ಕಾಂಚಾಣ
ಕುಣಿಯುತ್ತಲಿತ್ತು
ಕಾಲಿಗೆ ಬಿದ್ದವರ
ತುಳಿಯುತ್ತಲಿತ್ತು.
....
ನಾನು ಬಡವಿ
ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು, ಇದಕು, ಎದಕು

ಬಡತನವನ್ನು ಒಲವಾಗಿ ಬಳಸಿಕೊಂಡು ಬದುಕು ಮಾಡಿದವರು ನಮ್ಮ ಬೇಂದ್ರೆಯವರು. ನಾನಂತೂ ಯುಗದ ಕವಿಯ ಪೋಷಾಕುಗಳನ್ನು ಧರಿಸಿ ಪ್ರಶಸ್ತಿ ಪಡೆದಿರುವುದು ಉಳಿದೆಲ್ಲಾ ಪ್ರಶಸ್ತಿ ಸನ್ಮಾನಗಳಿಗಿಂತ ದೊಡ್ಡದು ಎಂದು ಖುಷಿಪಟ್ಟೆ. ಮೈಸೂರಿನಲ್ಲಿ ನಾವು ವಿದ್ಯಾರ್ಥಿಗಳಾಗಿದ್ದಾಗ ಹೆಸರಾಂತ ಕನ್ನಡ ಹಾಡುಗಾರ ದಿ॥ ಪಿ.ಕಾಳಿಂಗರಾಯರು ಹಾಡಿದ ಬೇಂದ್ರೆಯವರ 'ಇಳಿದು ಬಾ ತಾಯಿ ಇಳಿದು ಬಾ' ಗಾಯನ ಇನ್ನೂ ನಮ್ಮೆದೆಯಲ್ಲಿ ನಾಡಿನ ಅಭಿಮಾನ ಬುಗ್ಗೆಯನ್ನು ಉಕ್ಕಿಸುತ್ತದೆ.

ಮಹಾಕವಿ ಬೇಂದ್ರೆಯವರ ಪ್ರತಿಭೆ ಮತ್ತು ಸಾಧನೆಗೆ ಅದೆಷ್ಟೋ ಪ್ರತಿಷ್ಠಿತ ಪ್ರಶಸ್ತಿಗಳು ದೊರೆಯದಿರುವುದು ದುರಂತ. ಪ್ರಶಸ್ತಿ ನೀಡುವಲ್ಲಿಯೂ ಸರ್ಕಾರಗಳು ತೋರಿದ ತಾರತಮ್ಯವೇ ಇದಕ್ಕೆ ಕಾರಣ ಎಂದರೂ ತಪ್ಪಲ್ಲ.

ಭಾರತದ ಸಾರಸ್ವತ ಲೋಕದ ಪರಮೋಚ್ಚ ಪದವಿ 'ಜ್ಞಾನಪೀಠ ಪ್ರಶಸ್ತಿ' ದೊರೆತ ಬೇಂದ್ರೆಯವರಿಗೆ ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ ಸಿಗಲಿಲ್ಲ ಎನ್ನುವುದು ಹುಬ್ಬಳ್ಳಿ–ಧಾರವಾಡದ ಜಾತಿ ರಾಜಕಾರಣ ಎಷ್ಟು ಪ್ರಭುತ್ವ ಸಾಧಿಸಿದೆ ಎಂಬುದಕ್ಕೆ ಸಾಕ್ಷಿ.ಬೇಂದ್ರೆಯವರ ಕಾವ್ಯದಲ್ಲಿ ನವಮಾನವ ಸಿದ್ಧಾಂತವಿದೆ. ಸಮಸಮಾಜ ನಿರ್ಮಾಣಕ್ಕೆ ಬೇಂದ್ರೆಯವರ ಸಮಗ್ರ ಕಾವ್ಯದ ಅಧ್ಯಯನ ಸಹಕಾರಿಯಾಗಿದೆ.

ಹೆಣ್ಣು–ಪ್ರತೀ ಕುಟುಂಬದ ಕಣ್ಣು



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಪ್ರಾಚೀನ ಕಾಲದಿಂದಲೂ ಬಹುಶಃ ಹೆಣ್ಣನ್ನು ಅತ್ಯಂತ ಗೌರವದಿಂದ ಕಂಡ ದೇಶವೆಂದರೆ ಭಾರತ. ಅವಳನ್ನು ತೀರಾ ಹೀನಾಯವಾಗಿ ನಡೆಸಿಕೊಂಡ ಉದಾಹರಣೆಗಳೂ ಇದೇ ದೇಶದಲ್ಲಿಯೇ ಸಿಗುತ್ತವೆ ಎಂಬುದು ವಿಪರ್ಯಾಸವಾದರೂ ಮಿಥ್ಯವಲ್ಲ. ಗಾರ್ಗೇಯಿ, ಮೈತ್ರೇಯಿ, ಸಂಚಿಯ ಹೊನ್ನಮ್ಮ, ಕಂತಿ, ಅಕ್ಕಮಹಾದೇವಿ, ಬೆಳವಾಡಿ ಮಲ್ಲಮ್ಮ, ಕಿತ್ತೂರ ಚೆನ್ನಮ್ಮ, ಉಲ್ಲಾಳದ ರಾಣಿ ಅಬ್ಬಕ್ಕ, ಸಾವಿತ್ರಿ ಬಾಪುಲೆ ಹೀಗೆ ಅನೇಕ ಮಹಿಳೆಯರು ಇತಿಹಾಸದಲ್ಲಿ ತಮ್ಮ ಹೆಸರನ್ನು ಅಜರಾಮರವನ್ನಾಗಿಸಿ ಹೋಗಿದ್ದಾರೆ. ದೈಹಿಕವಾಗಿ ಬಲಿಷ್ಠನಾದ ಗಂಡಿನ ಪ್ರಾಬಲ್ಯ ಹೆಚ್ಚಾದಂತೆ, ವೈಚಾರಿಕತೆ ಕಡಿಮೆಯಾದಂತೆ ಹೆಣ್ಣಿನ ಮೇಲೆ ಗಂಡಿನ ದಬ್ಬಾಳಿಕೆ ಹೆಚ್ಚಾಗುತ್ತಾ ಹೋಯಿತು. ಅದು ದೌರ್ಜನ್ಯಕ್ಕೂ ಎಡೆ ಮಾಡಿಕೊಟ್ಟಿತು. ಬಲಿಷ್ಠ ಗಂಡಿನ ಎದುರು ದನಿ ಎತ್ತಲಾರದ ಅಸಹಾಯಕತೆಯಲ್ಲಿ ಹೆಣ್ಣು ಒದ್ದಾಡುವ ಸ್ಥಿತಿಯೂ ಉಂಟಾಯಿತು. ಆಕ್ರಮಣಕಾರರ ದಾಳಿಯ ಸಂದರ್ಭದಲ್ಲಿ ಹೆಣ್ಣಿನ ಸ್ಥಾನವು ಕೇವಲ ಒಂದು ಭೋಗದ ವಸ್ತುವಾಗಷ್ಟೇ ಉಳಿಯಿತು. ಹೆಚ್ಚು ಹೆಚ್ಚು ಹೆಣ್ಣುಗಳನ್ನು ಅನುಭವಿಸುವುದು ಗಂಡಿನ ಪೌರುಷದ ಸಂಕೇತವಾಗಿತ್ತು. ಅವಳು ಅಷ್ಟಕ್ಕೇ ಸೀಮಿತಳಾದಳು.

ಆಧುನಿಕ ಕಾಲದಲ್ಲೂ ಅವಳನ್ನು ಕೇವಲ ಅಡುಗೆ ಮನೆಗಷ್ಟೇ ಸೀಮಿತಗೊಳಿಸುವ, ಮಕ್ಕಳನ್ನು ಹೆರುವ ಒಂದು ಪ್ರಾಣಿಯಂತೆ ನೋಡುವ, ಅವಳಿಗೇಕೆ ಓದು–ಬರಹ? ಎಂಬ ಸಂಕುಚಿತ ಮನೋಭಾವದ ಗಂಡುಗಳ ಹಿಂಡುಗಳಿಗೇನೂ ಕೊರತೆ ಇರಲಿಲ್ಲ. ಅವಳ ಹಕ್ಕುಗಳಿಗಾಗಿ ದನಿ ಎತ್ತಿದ ಕೆಲವು ಪುರುಷರಷ್ಟೇ ತಮ್ಮ ಧೀಶಕ್ತಿಯನ್ನು ಉದ್ದೀಪನಗೊಳಿಸಿ, ಇತರ ಹೆಣ್ಣುಗಳಿಗಾಗಿ ಹೋರಾಡಿದ ಮಹಿಳೆಯರೂ ಇದ್ದರು. ಗಂಡಿನ ದೌರ್ಜನ್ಯವನ್ನು ಧಿಕ್ಕರಿಸಿದ ಮಹಿಳೆಯರೂ ಅಲ್ಲೊಬ್ಬರು, ಇಲ್ಲೊಬ್ಬರು ಕಾಣ ಸಿಗುತ್ತಾರೆ. ಬ್ರಿಟಿಷರ ವಿರುದ್ಧವಾಗಿ ಹೋರಾಡಿದ ಮಹಿಳೆಯರೂ ನಮ್ಮ ಇತಿಹಾಸದಲ್ಲಿ ಆಗಿಹೋಗಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲೂ ಇದೇ ಕತೆ. ಹೋರಾಟ ಮಾಡಿಯೇ ಅವಳು ತನ್ನ ಮತ ಚಲಾಯಿಸುವ ಹಕ್ಕನ್ನು, ತನ್ನ ಉದ್ಯೋಗದ ಸ್ಥಳದಲ್ಲಿ ಮೂಲ ಸೌಕರ್ಯಗಳಿಗಾಗಿ, ಹೆಚ್ಚಿನ ವೇತನಕ್ಕಾಗಿ, ನಿಗದಿತ ಕೆಲಸದ ವೇಳೆಗಾಗಿ ಅಲ್ಲದೆ ಸಮಾನತೆಗಾಗಿ ಹೋರಾಟವನ್ನು ಮಾಡಿಯೇ ಪಡೆಯಬೇಕಾಯಿತು. ಈ ಹೋರಾಟವೇ ವಿಶ್ವದಾದ್ಯಂತ ಮಹಿಳಾ ದಿನಾಚರಣೆಗೆ ನಾಂದಿ ಹಾಡಿತು ಎನ್ನಬಹುದು. ವಿವಿಧ ದೇಶಗಳಲ್ಲಿ ಸ್ವರೂಪ ಬೇರೆಯಾದರೂ ಅಳಲು ಅದೇ.

ಇಂದು ಮಾರ್ಚ್ ಎಂಟನೆಯ ದಿನವನ್ನು ವಿಶ್ವ ಮಹಿಳಾ ದಿನವನ್ನಾಗಿ ಆಚರಿಸಲಾಗುತ್ತದೆ. ತನ್ನ ಪ್ರತಿಭೆಯನ್ನು, ಛಲವನ್ನು, ಏಕಾಗ್ರತೆಯನ್ನು, ಕಷ್ಟ ಸಹಿಷ್ಣುತೆಯನ್ನು ಬಂಡವಾಗಿಟ್ಟುಕೊಂಡು ಬದುಕಿನ ವಿವಿಧ ರಂಗಗಳಲ್ಲಿ ಮೇಲೇರಿದ ಮಹಿಳೆಯರ ಸಾಧನೆಗಳನ್ನು ಗುರುತಿಸಿ, ಗೌರವಿಸುವ ದಿನ. ನಮ್ಮ ಮನೆಗೆಲಸದ ಜಯಮ್ಮ ಆಗಿರಬಹುದು ಅಥವಾ ಬಾಹ್ಯಾಕಾಶ ನೌಕಾಯಾನದಲ್ಲಿರುವ ಸುನೀತಾ ವಿಲಿಯಮ್ಸ್ ಆಗಿರಬಹುದು, ಕ್ಷೇತ್ರ ಯಾವುದೇ ಇರಲಿ ಅದರ ಹಿಂದಿನ ದೃಢ ಮನೋಭಾವವನ್ನು ಗುರುತಿಸಬೇಕಷ್ಟೆ. ಭಾರತದ ಮಟ್ಟಿಗೆ ಹೇಳುವುದಾದರೆ ಇಂದು ಹೆಣ್ಣು ಕಾರ್ಯನಿರ್ವಹಿಸದ ಕ್ಷೇತ್ರವಿಲ್ಲ ಎಂದರೆ ಅತಿಶಯೋಕ್ತಿ ಅಲ್ಲ. ಎಲ್ಲ ಕೆಲಸದಲ್ಲೂ ಗಂಡಿಗೆ ತಾನೇನೂ ಕಡಿಮೆ ಇಲ್ಲ ಎಂಬುದನ್ನು ಸಾಬೀತುಪಡಿಸುವುದರೊಂದಿಗೆ ತನ್ನ ಸಂಸಾರ ನಿರ್ವಹಣೆಯನ್ನೂ ಕಡೆಗಣಿಸದ ಅದ್ಭುತ ಸ್ತ್ರೀ ಶಕ್ತಿಯಾಗಿದ್ದಾಳೆ ಆಧುನಿಕ ಹೆಣ್ಣು. ನಮ್ಮ ಸುತ್ತಮುತ್ತಲೂ ಕಣ್ಣಾಡಿಸಿದಲ್ಲಿ ಇಂತಹ ಅನೇಕರ ಉದಾಹರಣೆ ಗಳು ಲಭ್ಯವಾಗುತ್ತವೆ.

> ಇಂದು ಹೆಣ್ಣು ಕಾರ್ಯನಿರ್ವಹಿಸದ ಕ್ಷೇತ್ರವಿಲ್ಲ ಎಂದರೆ ಅತಿಶಯೋಕ್ತಿ ಅಲ್ಲ. ಎಲ್ಲ ಕೆಲಸದಲ್ಲೂ ಗಂಡಿಗೆ ತಾನೇನೂ ಕಡಿಮೆ ಇಲ್ಲ ಎಂಬುದನ್ನು ಸಾಬೀತುಪಡಿಸುವುದರೊಂದಿಗೆ ತನ್ನ ಸಂಸಾರ ನಿರ್ವಹಣೆಯನ್ನೂ ಕಡೆಗಣಿಸದ ಅದ್ಭುತ ಸ್ತ್ರೀ ಶಕ್ತಿಯಾಗಿದ್ದಾಳೆ ಆಧುನಿಕ ಹೆಣ್ಣು.



ಚಂದ್ರಾ ಹರ್ಷ

ಸುಸಂಸ್ಕೃತ ಮನೆಯಲ್ಲಿ ಹುಟ್ಟಿದ ಚಂದ್ರಾ ಹರ್ಷಾ ಅವರಿಗೆ ಸ್ವಚ್ಛತೆಯ ಗೀಳು. ಜೊತೆಗೆ, ಹಾನಿಕಾರಕವಲ್ಲದ ಕೆಮಿಕಲ್‌ಗಳು ಇಲ್ಲದ, ಪರಿಸರ ಸ್ನೇಹಿಯಾದ ದೇಸೀ ವಸ್ತುಗಳನ್ನೇ ಬಳಸಿ ಮಾಡುವ ಸ್ವಚ್ಛತಾ ವಸ್ತುಗಳನ್ನು ಬಳಸುವ ಬಯಕೆ. ಫಿನಾಯಿಲ್ ಆಗ ಸುಲಭದಲ್ಲಿ ಸಿಗುತ್ತಿದ್ದ ವಸ್ತು. ಆದರೆ ಅದರಲ್ಲಿ ಕೆಮಿಕಲ್ ತುಂಬಿತ್ತು ಹಾನಿಯೇ ಮಾಡದ ಸ್ವಚ್ಛತೆಗಾಗಿ ಬಳಸುವ ವಸ್ತು ಬೇರಾವುದೂ ಸಿಗದಿದ್ದಾಗ, ತಾವೇ ಅದನ್ನು ಏಕೆ ತಯಾರು ಮಾಡಬಾರದು ಎಂಬ ಆಲೋಚನೆ ಅವರಿಗೆ ಬಂದಿತು. ಗೋವಿನ ಉತ್ಪನ್ನಗಳನ್ನೇ ಮೂಲ ವಸ್ತುವನ್ನಾಗಿ ಇಟ್ಟುಕೊಂಡು ತಮ್ಮ ಪ್ರಯೋಗವನ್ನು ಆರಂಭಿಸಿಯೇ ಬಿಟ್ಟರು. ಅದಕ್ಕಾಗಿ ನಿರಂತರ ಅಧ್ಯಯನವೂ ಜೊತೆಗೂಡಿತು. ಅದಕ್ಕೆ ಬಳಸಿದ ವಸ್ತುಗಳೆಲ್ಲವೂ ಸಸ್ಯಜನ್ಯವೇ ಮತ್ತು ಹಸುವಿನ ಉತ್ಪನ್ನವೇ ಆಗಿದ್ದರಿಂದ ಅದರ ಬೆಲೆಯು ಮಾರುಕಟ್ಟೆಯಲ್ಲಿ ಸಿಗುವ ಕೆಮಿಕಲ್ ಮೂಲವಾದ ಕ್ಲೀನಿಂಗ್ ವಸ್ತುಗಳಿಗಿಂತ ತುಸು ಹೆಚ್ಚಾಗಿತ್ತು. ಆರಂಭದಲ್ಲಿ ಈ ಕಾರಣಕ್ಕಾಗಿಯೇ ಅಂಗಡಿಗಳು ಇದನ್ನು ತಿರಸ್ಕರಿಸಿದುವು. ನಂತರ ದೇಶವನ್ನು ಕಾಡಿದ ಕರೋನಾ ಕಾರಣದಿಂದ ತುಸು ಕಾಲ ತಟಸ್ಥರಾಗಿದ್ದ ಚಂದ್ರಾ ಅವರು ಎರಡು ವರ್ಷಗಳ ನಂತರ ಮತ್ತೆ ಪುಟಿದೆದ್ದರು. ಈ ಬಾರಿ ಅಂಜದೆ, ತಮ್ಮ ಸಹೋದರಿಯೊಡಗೂಡಿ ಮತ್ತೆ ಅಧ್ಯಯನ, ಪ್ರಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ದೇಸೀ ವಸ್ತುಗಳನ್ನೇ ಬಳಸಿ, ಸ್ವಚ್ಛತೆಗಾಗಿ ಬಳಸುವ ಅನೇಕ ದ್ರಾವಣಗಳನ್ನು ತಯಾರಿಸಿದರು. ಆರಂಭದಲ್ಲಿ ಇವರ ಉತ್ಪನ್ನಗಳನ್ನು ಅನುಮಾನದಿಂದಲೇ ನೋಡಿದ ಸಂಸ್ಥೆಗಳು, ಕ್ರಮೇಣ ಇದರ ಗುಣಮಟ್ಟವನ್ನು ಅರಿತರು. ಆಲ್ ಇನ ಒನ್ ಎಂಬಂತೆ ಇವರ ಒಂದು ಉತ್ಪನ್ನವನ್ನು ಹಲವಾರು ವಸ್ತುಗಳ ಶುಭ್ರತೆಗೆ ಬಳಸಬಹುದಾಗಿತ್ತು. ಆದರೆ, ಕೆಲವರು ಒಂದೊಂದಕ್ಕೂ ಬೇರೆ ಇರಲೆಂದು ಬಯಸಿದಾಗ, ಅದಕ್ಕೂ ಸೈ ಎಂದ ಚಂದ್ರಾರವರು ಮನೆ ಒರೆಸುವ, ಕಾರ್ ತೊಳೆಯುವ, ಪಾಯಖಾನೆ ಸ್ವಚ್ಛಗೊಳಿಸುವ, ಅಡುಗೆ ಕಟ್ಟೆ, ಗ್ಯಾಸ್ ಒಲೆ, ಪಾತ್ರೆ, ನಲ್ಲಿ ಮುಂತಾದವುಗಳನ್ನಲ್ಲದೆ ಬಟ್ಟೆ ಒಗೆಯುವ ದ್ರಾವಣವನ್ನೂ ಮಾರುಕಟ್ಟೆಗೆ ಪರಿಚಯಿಸಿದರು.

ಛಲ ಬಿಡದ ತ್ರಿವಿಕ್ರಮನಂತೆ ಶಾಲೆ, ಕಾಲೇಜು, ಆಸ್ಪತ್ರೆ, ಕಾರ್ ಸರ್ವೀಸ್ ಸೆಂಟರುಗಳಲ್ಲದೆ ಅನೇಕ ಸಂಸ್ಥೆ, ಇಂಡಸ್ಟ್ರಿ, ಆಫೀಸುಗಳಿಗೂ ಎಡತಾಕಿ, ಅವರನ್ನು ತಮ್ಮ ಗ್ರಾಹಕರನ್ನಾಗಿ ಮಾಡಿಕೊಂಡರು. ಕೇವಲ ಹತ್ತು ಸಾವಿರ ರೂಪಾಯಿಗಳಿಂದ ಪ್ರಾರಂಭವಾದ ಈ ಚಿಕ್ಕ ಉದ್ಯಮವು ಇಂದು ತಿಂಗಳಿಗೆ ಹತ್ತು ಲಕ್ಷಕ್ಕೂ ಅಧಿಕವಾಗಿ ಗಳಿಸುತ್ತಿದೆ. ಕೇವಲ ಸಸ್ಯಜನ್ಯವಾದ ಮೂಲ ಸಾಮಗ್ರಿಯನ್ನು ಬಳಸಿ ತಯಾರಿಸಿದ ಅಪ್ಪಟ ದೇಸೀ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತಾ ಹೋಯಿತು. ದೇಸೀ ಹಸುಗಳ ಉತ್ಪನ್ನವನ್ನು ಗುಜರಾತ್ ಅಲ್ಲದೆ ಕರ್ನಾಟಕದ ಮೂಲೆಗಳಿಂದಲೂ ತರಿಸಿಕೊಳ್ಳುತ್ತಾರೆ. ಇಂದು ಅನೇಕರು ಬಳಸುವ ಟಾಯ್ಲೆಟ್ ಕ್ಲೀನರ್ ಅಥವಾ ಸರ್ಫೇಸ್ ಕ್ಲೀನರುಗಳ ಉತ್ಪಾದಕರು ವಿದೇಶೀಯರೆಂಬುದು ನಿಮಗೆ ಗೊತ್ತೆ? ಗ್ರೀನ್ ಝೋನ್ ಎಂಬ ಹೆಸರಿನಲ್ಲಿ ಚಂದ್ರಾ ಅವರ ಉತ್ಪನ್ನಗಳು ಕ್ರಿಸ್ಟಲ್ ಪ್ಲಸ್, ಹೈಜೀನ್ ಪ್ಲಸ್, ಶೈನೆಕ್ಸ್ ಪ್ಲಸ್, ಹೆಲ್ತೀ ಕಿಚನ್, ಫ್ಯಾಬ್ರೋ ಪ್ಲಸ್, ಶೈನ್ ಪ್ಲಸ್, ಟೋಟಲ್ ಕ್ಲೀನ್, ಹೆಲ್ತೀ ಹ್ಯಾಂಡ್ಸ್ ಮುಂತಾದ ಹೆಸರುಗಳಲ್ಲಿ ಲಭ್ಯವಿವೆ. ಇವ್ಯಾವುವೂ ನಮ್ಮ ದೇಹಕ್ಕಾಗಲೀ, ಪರಿಸರಕ್ಕಾಗಲೀ ಹಾನಿಕಾರಕಗಳಲ್ಲ. ಜೊತೆಗೆ ನಿಮ್ಮ ಜೇಬಿಗೂ ಭಾರವಲ್ಲ. ಗ್ರಾಹಕರಿಗೆ ಅತ್ಯುತ್ತಮವಾದುದನ್ನೇ ನೀಡಬೇಕೆಂಬುದು ಅವರ ಗುರಿ.

ತಮ್ಮೊಡನೆ ಹನ್ನೊಂದು ಮಂದಿ ಸಹಾಯಕರಿಗೂ ಬದುಕು ಕಟ್ಟಿಕೊಟ್ಟಿರುವ ಚಂದ್ರಾ ಅವರು ತಮ್ಮ ಉದ್ಯಮವನ್ನು ಮತ್ತಷ್ಟು ಹಿರಿದಾಗಿಸುವ ದಿಸೆಯಲ್ಲಿ ಹೆಜ್ಜೆ ಇಡುತ್ತಿದ್ದಾರೆ. ಮಹಿಳೆಯರನ್ನೇ ಡೆಲಿವರಿಗೂ ಕಳುಹಿಸಿಕೊಡಬೇಕೆಂಬುದು ಹೆಂಗಸರ ಬಗ್ಗೆ ಅವರಿಗೆ ಇರುವ ಕಾಳಜಿಯ ದ್ಯೋತಕ ಅಷ್ಟೇ. ಕರ್ನಾಟಕ ರಾಜ್ಯ ಸರಕಾರವು 'ಯಂಗ್ ವುಮನ್ ಎಂಟ್ರಪ್ರೀನರ್' ಎಂದು ಇವರ ಸಾಧನೆಯನ್ನು ಗುರುತಿಸಿ ಸನ್ಮಾನಿಸಿದೆ. ಸ್ವದೇಶೀ ಜಾಗರೂಕ ಮಂಚ್ ಇವರನ್ನು ಸಕ್ಸಸ್ಫುಲ್ ವುಮನ್ ಎಂಟ್ರಪ್ರೀನರ್ ಎಂದು ಗೌರವಿಸಿದೆ. ತಮ್ಮ ಕುಟುಂಬದ ಎಲ್ಲರ ಸಹಕಾರದಿಂದ ಇದು ಸಾಧ್ಯವಾಗಿದೆ ಎಂದು ವಿನಮ್ರತೆಯಿಂದ ನುಡಿಯುವ ಚಂದ್ರಾ ಅವರು ಅಪ್ಪಟ ಕನ್ನಡತಿ. ಮೈಸೂರಿನಲ್ಲೇ ತಯಾರಾಗುವ ಇವರ ಉತ್ಪನ್ನಗಳು ಬೇಕಿದ್ದಲ್ಲಿ ಸಂಪರ್ಕಿಸಬೇಕಾದ ಸಂಖ್ಯೆ 7204803535 ಅಥವಾ 7019959784.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ವಿಶೇಷ

ಸಂಪೂರ್ಣ ಮಹಿಳಾ ಸಿಬ್ಬಂದಿಯಿಂದಲೇ ಮೈಸೂರ್-ಜೈಪುರ್ ಎಕ್ಸ್‌ಪ್ರೆಸ್ ನಿರ್ವಹಣೆ

ಮೈಸೂರು,ಮಾ.8(ಆರ್‌ಕೆ)–ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಭಾರತೀಯ ಲೋಕೋ ಪೈಲಟ್ ಸೇರಿದಂತೆ ಎಲ್ಲಾ ರೀತಿಯ ನಿರ್ವಹಣೆಯೂ ಮಹಿಳೆಯಿಂದ ಕೂಡಿದ ಮೈಸೂರು-ಜೈಪುರ್ ಎಕ್ಸ್‌ಪ್ರೆಸ್ ಇಂದು ಮೈಸೂರಿನಿಂದ ಪ್ರಯಾಣ ಆರಂಭಿಸಿತು.

ರೈಲ್ವೆ ಇಲಾಖೆಯಲ್ಲಿ ಮಹಿಳಾ ಸಬಲೀಕರಣವನ್ನು ಸಾಕ್ಷೀಕರಿಸುವ ದೃಷ್ಟಿಯಿಂದ ಭಾರತೀಯ ರೈಲ್ವೆಯು ಇಂದು ರೈಲು ಆಪರೇಷನ್‌ನಲ್ಲಿ ಲೋಕೋ ಪೈಲಟ್‌ಗಳು, ರೈಲು ವ್ಯವಸ್ಥಾಪಕರು, ಟಿಟಿಗಳು, ಭದ್ರತಾ ಸಿಬ್ಬಂದಿ ಸೇರಿದಂತೆ ಎಲ್ಲಾ ಮಹಿಳಾ ಉದ್ಯೋಗಿಗಳನ್ನು ಬಳಸಿ ಮೈಸೂರ್-ಜೈಪುರ್ ಎಕ್ಸ್‌ಪ್ರೆಸ್ ಸಂಚಾರ ಆರಂಭಿಸಿದ್ದು, ಇಂದಿನ ವಿಶೇಷ.

ರೈಲು ಸಂಖ್ಯೆ 12975 ಮೈಸೂರ್-ಜೈಪುರ್ ಎಕ್ಸ್‌ಪ್ರೆಸ್ ರೈಲಿಗೆ ಇಂದು ಬೆಳಗ್ಗೆ 10.30 ಗಂಟೆಗೆ ಮೈಸೂರು ರೈಲ್ವೆ ನಿಲ್ದಾಣದ 6ನೇ ಪ್ಲಾಟ್‌ಫಾರಂನಲ್ಲಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಾ ಅಗರ್‌ವಾಲ್ ಹಾಗೂ ಹಿರಿಯ ವಿಭಾಗೀಯ ಆಪರೇಷನ್ಸ್ ಮ್ಯಾನೇಜರ್ ಹರಿತಾ, ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಸೀನಿಯರ್ ಲೋಕೋ ಪೈಲಟ್ ಸಿಜಿನಾ, ಅಸಿಸ್ಟೆಂಟ್ ಲೋಕೋ ಪೈಲಟ್ ಕೃಷ್ಣವೇಣಿ, ಟ್ರೈನ್ ಮ್ಯಾನೇಜರ್ ಕಾಸಿ ಮೋನಿಕಾ ಸಾಯಿ, ಡೆಪ್ಯುಟಿ ಸ್ಟೇಷನ್ ಮ್ಯಾನೇಜರ್ ನಾಗಲಕ್ಷ್ಮಿ ಪ್ರಸಾದ್, ಟ್ರಾವಲಿಂಗ್ ಟಿಕೆಟ್ ಎಕ್ಸಾಮಿನ್ ಮ್ಯಾನೇಜರ್ ಸ್ಮಿತಾ, ಸ್ಟೇಷನ್ ಸೂಪರಿಡೆಂಟೆಂಟ್ ಎ.ವಿಭಾ ಈ ರೈಲಿನ ಸಂಪೂರ್ಣ ನಿರ್ವಹಣೆ ಹೊತ್ತಿದ್ದಾರೆ.



ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರಿನಿಂದ ಪ್ರಯಾಣ ಆರಂಭಿಸಿದ ರೈಲು ಸಂಖ್ಯೆ 12975 ಮೈಸೂರ್-ಜೈಪುರ್ ಎಕ್ಸ್‌ಪ್ರೆಸ್ ರೈಲಿಗೆ ಮೈಸೂರು ರೈಲ್ವೆ ನಿಲ್ದಾಣದ 6ನೇ ಪ್ಲಾಟ್‌ಫಾರಂನಲ್ಲಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಾ ಅಗರ್‌ವಾಲ್, ಹಿರಿಯ ವಿಭಾಗೀಯ ಆಪರೇಷನ್ಸ್ ಮ್ಯಾನೇಜರ್ ಹರಿತಾ, ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಲೋಕೋ ಪೈಲಟ್‌ಗಳಾದ ಸಿಜಿನಾ ಮತ್ತು ಕೃಷ್ಣವೇಣಿ, ಈ ಸಂದರ್ಭದಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮೈಸೂರ್-ಜೈಪುರ್ ಎಕ್ಸ್‌ಪ್ರೆಸ್ ಚಾಲನೆಗೆ ನಮಗೆ ಅವಕಾಶ ಕೊಟ್ಟಿರುವುದು ಸಂತಸ ತಂದಿದೆ. ಯಾವುದೇ ಲೋಪವಿಲ್ಲದೆ ಸಮರ್ಥವಾಗಿ ಕರ್ತವ್ಯ ನಿರ್ವಹಿಸುವ ವಿಶ್ವಾಸವಿದೆ. ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಿ ಭಾರತೀಯ ರೈಲ್ವೆ ಇಲಾಖೆಗೆ ಒಳ್ಳೆಯ ಹೆಸರು ತರುತ್ತೇವೆ ಎಂದರು.

ಒಟ್ಟು 22 ಬೋಗಿಗಳನ್ನು ಹೊಂದಿರುವ ಈ ರೈಲು ಮಾ.10ರಂದು ಬೆಳಗ್ಗೆ 6 ಗಂಟೆಗೆ ಜೈಪುರ ರೈಲು ನಿಲ್ದಾಣ ತಲುಪಲಿದೆ. ಮಾರ್ಗ ಮಧ್ಯೆ ಬೆಂಗಳೂರಿನಲ್ಲೂ ರೈಲ್ವೆ ಅಧಿಕಾರಿಗಳು ಈ ರೈಲಿಗೆ ಹಸಿರು ನಿಶಾನೆ ತೋರುವ ಮೂಲಕ ಶುಭ ಕೋರಿ ಬೀಳ್ಕೊಟ್ಟರು.

ಮಹಿಳಾ ದಿನಾಚರಣೆ ಅಂಗವಾಗಿ ಈ ರೈಲಿಗೆ ಪುಷ್ಪಾಲಂಕಾರ ಮಾಡಿ, ವರ್ಣರಂಜಿತ ರಂಗೋಲಿ ಬಿಡಿಸಿ ಅಲಂಕಾರ ಮಾಡಲಾಗಿತ್ತು. ಎಲ್ಲಾ ವಿಭಾಗಗಳಲ್ಲಿ ಮಹಿಳೆಯರ ಸಾಮರ್ಥ್ಯವನ್ನು ಪ್ರತಿಬಿಂಬಿಸುವ ಆಕರ್ಷಕ ಕಾರ್ಯಕ್ರಮಗಳನ್ನು ಆಯೋಜಿಸಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ರೈಲ್ವೆ ಇಲಾಖೆ ವಿಭಿನ್ನವಾಗಿ ಆಚರಿಸಿತು. 'ಲಿಂಗ ಸಮಾನತೆಗಾಗಿ ತ್ವರಿತ ಕ್ರಮ' ಧ್ಯೇಯವಾಕ್ಯದೊಂದಿಗೆ ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಜಾಗತಿಕ ಮಟ್ಟದಲ್ಲಿ ಮಹಿಳೆಯರಿಗೆ ಸಮಾನ ಅವಕಾಶವನ್ನು ಕಲ್ಪಿಸುವ ದೃಷ್ಟಿಯಿಂದ ಮಹಿಳೆಯರಿಗೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡಲಾಗುತ್ತಿದ್ದು, ಮಹಿಳಾ ಲೋಕೋ ಪೈಲಟ್‌ಗಳೊಂದಿಗೆ ಟ್ರಾಕ್ ನಿರ್ವಹಣಾಕಾರರು, ತಂತ್ರಜ್ಞರು ಮತ್ತು ಇಂಜಿನಿಯರ್‌ಗಳು ಸೇರಿದಂತೆ ಪ್ರತಿಯೊಬ್ಬರೂ ಮಹಿಳೆಯರೇ ಆಗಿದ್ದುದು ಇಂದಿನ ವಿಶೇಷವಾಗಿತ್ತು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ: ನೈರುತ್ಯ ರೈಲ್ವೆ ಪ್ರಧಾನ ಕಚೇರಿಯಲ್ಲಿ ಇಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಮಹಿಳೆಯರಿಗಾಗಿ ಫಿಟ್ನೆಸ್, ಬ್ಯಾಡ್ಮಿಂಟನ್, ಥ್ರೋಬಾಲ್‌ಗಳಂತಹ ಸ್ಪರ್ಧೆಗಳನ್ನು ಏರ್ಪಡಿಸಿ, ಮಹಿಳಾ ಸಬಲೀಕರಣ ಮತ್ತು ಸುರಕ್ಷತೆ ಕುರಿತಂತೆ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಲಾಯಿತು. ಪಾಕಶಾಲೆ ಪ್ರದರ್ಶನ ಸ್ಪರ್ಧೆಯಲ್ಲಿ ಮಹಿಳಾ ಉದ್ಯೋಗಿಗಳು ವಿವಿಧ ಅಡುಗೆ ತಯಾರು ಮಾಡುವ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

ಯೋಗನರಸಿಂಹ ದೇವಸ್ಥಾನಕ್ಕೆ ಮಡಕೆ ವಿತರಣೆ



ಮೈಸೂರಿನ ಸಬ್ ಕೆ ಸಾಥ್ ಸಂಸ್ಥೆ ವತಿಯಿಂದ ಬೇಸಿಗೆ ಹಿನ್ನೆಲೆಯಲ್ಲಿ ಮೈಸೂರು ವಿಜಯನಗರ ಯೋಗನರಸಿಂಹ ದೇವಸ್ಥಾನಕ್ಕೆ ನೀರಿನ ಮಡಕೆ ವಿತರಿಸಲಾಯಿತು. ಈ ವೇಳೆ ಯೋಗನರಸಿಂಹ ಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿಗಳಾದ ಶ್ರೀನಿವಾಸ್, ಸಬ್ ಕಾ ಸಾಥ್ ಸಂಸ್ಥೆಯ ಮನಿಷ್ ಮುನೋತ್, ನರೇಶ್ ಭಂಡಾರಿ, ಉಜ್ವಲ್ ಪಾಲರೇಚ, ಅನಿಲ್, ಜನಕ್ ಸಿಂಗ್ ಭಾಟಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಮಹಿಳಾ ದಿನಾಚರಣೆ

ಮೈಸೂರು, ಮಾ.8(ಆರ್‌ಕೆ)– ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಇಂದು ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಜಿಲ್ಲಾ ಪ್ರಧಾನ ಸತ್ರ ಸಿವಿಲ್ ನ್ಯಾಯಾಧೀಶರಾದ ಉಷಾರಾಣಿ ಹಾಗೂ ಖ್ಯಾತ ಕ್ರೀಡಾಪಟು ಉಷಾ ಹೆಗ್ಡೆ, ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಸೇರಿದಂತೆ ಮಹಿಳಾ ಪೊಲೀಸ್ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದ ಉಷಾರಾಣಿ, ಇಂದು ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ಪುರುಷರಷ್ಟೇ ಸಮಾನ ರೀತಿ ಕೆಲಸ ಮಾಡುತ್ತಿದ್ದು, ಪೊಲೀಸ್ ಇಲಾಖೆಯಲ್ಲೂ ಅದನ್ನು ಸಾಬೀತು ಮಾಡಿದ್ದೀರಿ ಎಂದರು.



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಪೊಲೀಸ್ ಇಲಾಖೆಯಲ್ಲಿ ಹಲವು ಉನ್ನತ ಹುದ್ದೆಗಳನ್ನು ಅಲಂಕರಿಸಿರುವ ಮಹಿಳೆಯರು ನಿಷ್ಠೆ, ಸಮಯ ಪ್ರಜ್ಞೆಯಿಂದ ಕೆಲಸ ಮಾಡುವ ಮೂಲಕ ಕಾನೂನು ಸುವ್ಯವಸ್ಥೆ ನಿಭಾಯಿಸುತ್ತಿರುವುದು ಶ್ಲಾಘನೀಯ. ಎಷ್ಟೋ ಅಪರಾಧ ಪ್ರಕರಣಗಳಲ್ಲಿ ತನಿಖೆ ನಡೆಸುವ ಮಹಿಳಾ ಪೊಲೀಸ್ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ತನಿಖೆ ಮಾಡಿ, ನ್ಯಾಯಾಲಯಕ್ಕೆ ಸಮಂಜಸ ಸಾಕ್ಷಿಗಳ ಮೂಲಕ ಪ್ರಕರಣ ತಾರ್ಕಿಕ ಅಂತ್ಯ ಕಾಣಲು ಕಾರಣಕರ್ತರಾಗುತ್ತಿದ್ದಾರೆ. ಅದರಲ್ಲೂ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಅತ್ಯಂತ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿರುವುದು ಉತ್ತಮ ಸಂದೇಶ ರವಾನೆಯಾದಂತಾಗಿದೆ ಎಂದು ಇದೇ ಸಂದರ್ಭ ನುಡಿದರು.

ನಂತರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಕೇಕ್ ಕತ್ತರಿಸಿ ತಮ್ಮ ಅಧೀನ ಮಹಿಳಾ ಪೊಲೀಸ್ ಅಧಿಕಾರಿಗಳಿಗೆ ತಿನಿಸುವ ಮೂಲಕ ಅರ್ಥಪೂರ್ಣವಾಗಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಬಳಿಕ ಪೊಲೀಸ್ ಆಯುಕ್ತರ ಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ಕುಳಿತು ಲೋಕಾಭಿರಾಮವಾಗಿ ಸಮಾಲೋಚನೆಯಲ್ಲಿ ತೊಡಗಿದ್ದರು. ಮಹಿಳಾ ಇನ್‌ಸ್ಪೆಕ್ಟರ್‌ಗಳು, ಸಬ್‌ಇನ್‌ಸ್ಪೆಕ್ಟರ್‌ಗಳು, ಎಎಸ್‌ಐಗಳು ಕಾರ್ಯಕ್ರಮದಲ್ಲಿ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಹಾಸನ ಮಿತ್ರ

ಹೊಂದಾಣಿಕೆ ಮಾಡಿಕೊಂಡು ಜೀವನ ಸಾಗಿಸುವ ಹೆಣ್ಣನ್ನು ಗೌರವಿಸಿ: ಡಿಸಿ



ಹಾಸನ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಾಸನ: ಪ್ರೀತಿಯಿಂದ ಎಲ್ಲರ ಜೊತೆ ಹೊಂದಾಣಿಕೆ ಮಾಡಿಕೊಂಡು ಜೀವನ ಸಾಗಿಸುವ ಗುಣ ಹೆಣ್ಣಿನಲ್ಲಿದೆ. ಪ್ರತಿ ಹೆಣ್ಣನ್ನು ಗೌರವಿಸಿ ಎಂದು ಜಿಲ್ಲಾಧಿಕಾರಿ ಸಿ.ಸತ್ಯಭಾಮ ಕರೆ ನೀಡಿದರು.

ನಗರದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ಅಲ್ಯೂಮಿನಿ ಹಾಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಒಂದು ಕುಟುಂಬ ಸುಖ ಜೀವನ ಸಾಧಿಸಬೇಕಾದರೆ ಹೆಣ್ಣಿನ ಪಾತ್ರ ಬಹಳ ಪ್ರಮುಖವಾದುದು ಎಂದರು.

ಹೆಣ್ಣಿಗೆ ಸಮಾಧಾನ ಹಾಗೂ ಸಂಸಾರ ನಡೆಸುವ ಎಲ್ಲಾ ಗುಣಗಳಿರುತ್ತವೆ. ಮಕ್ಕಳು, ಪತಿ, ಅತ್ತೆ, ಮಾವ ಒಳಗೊಂಡಂತೆ ಕುಟುಂಬದ ಎಲ್ಲಾ ಸದಸ್ಯರೊಂದಿಗೆ ಸಹಮತದಿಂದ ಸಂಸಾರ ನಡೆಸಬೇಕಾಗಿದೆ. ಮಹಿಳೆಯರಿಗೆ ಅಸೂಯೆ, ಕೋಪ, ದ್ವೇಷದ ಭಾವನೆ ಇರಬಾರದು ಎಂದು ಕಿವಿಮಾತು ಹೇಳಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಚೌಡಹಳ್ಳಿ ಜಗದೀಶ್ ಮಾತನಾಡಿ, ನಮ್ಮ ಸಂಸ್ಕೃತಿ ಉಳಿಸಲು ಮಹಿಳೆಯರ ಪಾತ್ರ ಬಹಳಷ್ಟಿದೆ, ಮಹಿಳೆರಾಗಲೀ, ಪುರುಷರಾಗಲೀ ಸಮನಾಂತರ ಭಾವನೆ ಇದ್ದರೆ ಆ ಕುಟುಂಬದವರಿಗೆ ಸಂತೋಷ ಸುಖ ಜೀವನದ ಯಶಸ್ಸು ಕಾಣುತ್ತೆ ಎಂದರು.

ಮುಖ್ಯ ಅತಿಥಿಯಾಗಿದ್ದ ಅಲೂರು ತಾಲೂಕು ಅಧಿಕಾರಿ ಡಾ. ನಿಸಾರ್ ಫಾತಿಮ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಖಜಾಂಚಿ ಪಾರ್ಶನಾಥ್, ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕರಾದ ಡಾ.ಎಸ್. ಪ್ರದೀಪ್, ಇನ್‌ಚಾರ್ಜ್ ಪ್ರಾಂಶುಪಾಲರಾದ ಡಾ.ಪಿ.ಸಿ.ಶ್ರೀಕಾಂತ್, ಕಾಲೇಜಿನ ಸಹಾಯಕ ಆಡಳಿತ ಅಧಿಕಾರಿ ಪಾರ್ವತಮ್ಮ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ದುಶ್ಯಂತ್ ಕುಮಾರ್, ಸಹ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಇಂದಿರಾ, ಕಂಪ್ಯೂಟರ್ ವಿಭಾಗದ ಮುಖ್ಯಸ್ಥರಾದ ಡಾ.ಚಂದ್ರಿಕಾ ಬಹುದ್ದೂರ್, ಕಾಲೇಜು ನೌಕರರ ಸ್ಟಾಫ್ ಕ್ಲಬ್ ಕಾರ್ಯದರ್ಶಿ ಡಾ.ಕೀರ್ತಿಕುಮಾರ್, ಪ್ರಾಧ್ಯಾಪಕರಾದ ಡಾ.ಕೆ.ಸಿ.ದೀಪಿಕಾ, ಡಾ.ಯಶಸ್ವಿ, ನಮಿತಾ, ಮೋನಿಶ್, ಎನ್.ಅಂಕೇಶ್ ಉಪಸ್ಥಿತರಿದ್ದರು.

ಸಮರ್ಪಕ ವಿದ್ಯುತ್‌ಗೆ ಆಗ್ರಹಿಸಿ ರೈತರ ಪ್ರತಿಭಟನೆ



ಆಲೂರು: ವಿದ್ಯುತ್ ಸಮಸ್ಯೆಯಿಂದ ರೈತರು ಬೆಳೆದ ಬೆಳೆಗೆ ನೀರಿಲ್ಲದೆ ಪರಿತಪಿಸುವಂತಾಗಿದೆ ಎಂದು ರೈತರು ಪಟ್ಟಣದ ಸೆಸ್ಕ್ ಇಲಾಖೆ ಎದುರು ಪ್ರತಿಭಟನೆ ನಡೆಸಿ, ಸಮರ್ಪಕ ವಿದ್ಯುತ್ ಸರಬರಾಜು ಮಾಡದಿದ್ದರೆ ನಿರಂತರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ರಾಜ್ಯ ರೈತ ಸಂಘ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘಟನೆ ಜಿಲ್ಲಾಧ್ಯಕ್ಷ ಹೆಚ್.ಬಿ.ಧರ್ಮರಾಜ್ ಮಾತನಾಡಿ, ದಿನದಿಂದ ದಿನಕ್ಕೆ ಬೇಸಿಗೆ ತಾಪಮಾನ ಏರುತ್ತಿದ್ದು, ಈಗಾಗಲೇ ತಾಲೂಕಿನಾದ್ಯಂತ ವಿದ್ಯುತ್ ಅಭಾವ ತಲೆದೋರಿದೆ. ತಾಲೂಕಿಗೆ ಎರಡು ಎಂ.ಯು.ಎಸ್.ಎಸ್. ವಿದ್ಯುತ್ ಸ್ಥಾವರ ಅಳವಡಿಸಲು ಕ್ರಮಕೈಗೊಳ್ಳದ ಕಾರಣ ರೈತರು ಬೇಸಿಗೆ ಕಾಲದಲ್ಲಿ ಪರದಾಡುವಂತಾಗಿದೆ. ರೈತರು ಬೆಳೆ ಉಳಿಸಿಕೊಳ್ಳಲು ಪರಿತಪಿಸುವಂತಾಗಿದೆ. ಇದರಿಂದ ಬೆಳೆ ನಾಶವಾಗುವ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಶಾಸಕರು ಎರಡು ವರ್ಷಗಳಿಂದ ಸ್ಥಾವರಗಳನ್ನು ಸ್ಥಾಪಿಸಲು ಮುಂದಾಗದೆ ರೈತರ ಹಿತ ಕಾಯುವಲ್ಲಿ ವಿಫಲರಾಗಿದ್ದಾರೆ. ಕೂಡಲೆ ಶಾಸಕರು ಅಧಿಕಾರಿಗಳೊಂದಿಗೆ ಚರ್ಚಿಸಿ ನಿರಂತರ 3 ಫೇಸ್ ವಿದ್ಯುತ್ ಸರಬರಾಜು ಮಾಡಬೇಕು. ಇಲ್ಲದಿದ್ದರೆ ಸೆಸ್ಕ್ ಕಚೇರಿ ಎದುರು ನಿರಂತರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ನಂದೀಶ್, ರೈತರ ಸಂಘಟನೆ ಜಿಲ್ಲಾ ಉಪಾಧ್ಯಕ್ಷ ನಾಗೇಶ್, ಸಂತೋಷ್, ಮಲ್ಲೇಶ್ ಭೈರಾಪುರ, ಹರೀಶ್ ಕಣಗಾಲ್, ಮಲ್ಲಿಕಾರ್ಜುನ, ಮಂಜುನಾಥ್, ವಿಜಯಕುಮಾರ್, ಜಗದೀಶ್ ಕಣಗಾಲ್, ಮಂಜುನಾಥ್ ಪಾಲ್ಗೊಂಡಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ: 15ಮಂದಿ ಆಯ್ಕೆ

ಮೈಸೂರು ವಿವಿ ಕಲಾನಿಕಾಯದ ಡೀನ್ ಡಾ. ಎಂ.ಎಸ್. ಶೇಖರ್‌ಗೆ ಸಾಹಿತ್ಯಶ್ರೀ ಪ್ರಶಸ್ತಿ

ಬೆಂಗಳೂರು, ಮಾ.8– ಕರ್ನಾಟಕ ಸಾಹಿತ್ಯ ಅಕಾಡೆಮಿಯ 2023ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ಮತ್ತು 'ಸಾಹಿತ್ಯಶ್ರೀ, ಪ್ರಶಸ್ತಿಗಳು ಪ್ರಕಟಗೊಂಡಿವೆ. ಐವರು ಹಿರಿಯ ಸಾಹಿತಿಗಳು ವಾರ್ಷಿಕ ಗೌರವ ಪ್ರಶಸ್ತಿ ಹಾಗೂ ಮೈಸೂರು ವಿವಿ ಕಲಾನಿಕಾಯದ ಡೀನ್ ಡಾ. ಎಂ.ಎಸ್. ಶೇಖರ್ ಸೇರಿ 10 ಮಂದಿ ಸಾಹಿತ್ಯಶ್ರೀ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಅಮೂಲ್ಯವಾದ ಸೇವೆಯನ್ನು ಪರಿಗಣಿಸಿ ಐವರು ಹಿರಿಯ ಸಾಹಿತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2023ನೆಯ ವರ್ಷದ ಗೌರವ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ. ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅವರ ಅಧ್ಯಕ್ಷತೆಯಲ್ಲಿ ಮಾ.7ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದು ಅಕಾಡೆಮಿಯ ಪ್ರಕಟಣೆಯಲ್ಲಿ ತಿಳಿಸಿದೆ.

2023ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ಪುರಸ್ಕೃತರು: ಬೆಂಗಳೂರಿನ ಡಾ. ಸಿ. ವೀರಣ್ಣ ಬಾಗಲಕೋಟೆಯ ಡಾ. ಶ್ರೀರಾಮ ಇಟ್ಟಣ್ಣವರ, ತುಮಕೂರಿನ ಜಾಣಗೆರೆ ವೆಂಕಟರಾಮಯ್ಯ, ಮಂಗಳೂರಿನ ಡಾ. ಸಬಿಹಾ ಭೂಮಿಗೌಡ.

ಈ ಪ್ರಶಸ್ತಿಯು 50 ಸಾವಿರ ನಗದು, ಪ್ರಶಸ್ತಿ ಫಲಕ ಹಾಗೂ ಪ್ರಮಾಣ ಪತ್ರವನ್ನು ಒಳಗೊಂಡಿರುತ್ತದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾ.24ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಕಾಡೆಮಿಯ ಪ್ರಕಟಣೆಯಲ್ಲಿ ತಿಳಿಸಿದೆ.

10 ಮಂದಿಗೆ ಸಾಹಿತ್ಯಶ್ರೀ ಪ್ರಶಸ್ತಿ: ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಅಮೂಲ್ಯವಾದ ಸೇವೆಯನ್ನು ಪರಿಗಣಿಸಿ 50 ರಿಂದ 60ರ ವಯೋಮಾನದ 10 ಮಂದಿ ಸಾಹಿತಿಗಳಿಗೆ ಸಾಹಿತ್ಯಶ್ರೀ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ. ಪ್ರಶಸ್ತಿಯು 25 ಸಾವಿರ ನಗದು, ಪ್ರಶಸ್ತಿ ಫಲಕ ಹಾಗೂ ಪ್ರಮಾಣ ಪತ್ರವನ್ನು ಒಳಗೊಂಡಿದೆ. ಮಾರ್ಚ್ 24ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

2023ನೇ ವರ್ಷದ 'ಸಾಹಿತ್ಯಶ್ರೀ' ಪ್ರಶಸ್ತಿ ಪುರಸ್ಕೃತರು: ಮೈಸೂರು ವಿವಿ ಕಲಾನಿಕಾಯದ ಡೀನ್ ಡಾ. ಎಂ.ಎಸ್. ಶೇಖರ್, ಬೆಂಗಳೂರಿನ ಜಿ.ಎನ್. ಮೋಹನ್, ತುಮಕೂರಿನ ಡಾ. ಟಿ.ಎಸ್. ವಿವೇಕಾನಂದ, ಬೆಳಗಾವಿಯ ಡಾ. ಜಯಶ್ರೀ ಕಂಬಾರ, ಧಾರವಾಡದ ಪ್ರೊ. ನಿಜಲಿಂಗಪ್ಪ ಯಮನಪ್ಪ ಮಟ್ಟಿಹಾಳ, ಕೋಲಾರದ ಡಾ. ಬಾಲಗುರುಮೂರ್ತಿ, ಕಲಬುರಗಿಯ ಪ್ರೊ. ಶಿವಗಂಗಾ ರುಮ್ಮಾ, ಬೆಂಗಳೂರಿನ ಡಾ. ರೀಟಾ ರೀನಿ, ಶಿವಮೊಗ್ಗದ ಡಾ. ಕಲೀಮ್ ಉಲ್ಲಾ, ಬಳ್ಳಾರಿಯ ಡಾ. ವೆಂಕಟಗಿರಿ ದಳವಾಯಿ.

ಇನ್ನಷ್ಟು ಗಟ್ಟಿ ಕೆಲಸದ ಜವಾಬ್ದಾರಿ ಹೆಚ್ಚಿಸಿದೆ

ಮೈಸೂರು,ಮಾ.8(ಪಿಎಂ)– ಕರ್ನಾಟಕ ಸಾಹಿತ್ಯ ಅಕಾಡೆಮಿಯ 2023ನೇ ಸಾಲಿನ 'ಸಾಹಿತ್ಯಶ್ರೀ' ಪ್ರಶಸ್ತಿ ನನಗೆ ಸಂದಿರುವುದು ಸಾಮಾಜಿಕ ಸ್ವಾಸ್ಥ್ಯ ಸೃಷ್ಟಿಸುವ ಸಾಹಿತ್ಯ ರಚನೆಗಾಗಿ ಇನ್ನಷ್ಟು ಗಟ್ಟಿಯಾಗಿ ಕೆಲಸ ಮಾಡಬೇಕೆಂಬ ಜವಾಬ್ದಾರಿ ಹೆಚ್ಚಿಸಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಡೀನ್ ಡಾ.ಎಂ.ಎಸ್.ಶೇಖರ್ ಹೇಳಿದರು.



'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ್ದ ಕೆಲಸ ಗುರುತಿಸಿ ಈ ಪ್ರಶಸ್ತಿ ನೀಡಿರುವುದು ಸಹಜವಾಗಿಯೇ ಸಂತಸ ತಂದಿದೆ. ಜೊತೆಗೆ ಇದು ಇನ್ನು ಹೆಚ್ಚಿನ ಕೆಲಸ ಮಾಡುವ ಜವಾಬ್ದಾರಿ ನೀಡಿದೆ. ಸಾಮಾಜಿಕ ಸ್ವಾಸ್ಥ್ಯ ಸಮಾಜದಲ್ಲಿ ನೆಲಸಬೇಕೆಂಬ ನಿಟ್ಟಿನಲ್ಲಿ ಸಾಹಿತ್ಯ ರಚನೆ ಮಾಡಿದ್ದು, ಅಂತೆಯೇ ಮುಂದೆಯೂ ಇನ್ನಷ್ಟು ಗಟ್ಟಿಯಾಗಿ ತೊಡಗಲು ಜವಾಬ್ದಾರಿ ಹೆಚ್ಚಿದಂತಾಗಿದೆ ಎಂದರು.

ನಮ್ಮ ಸಮಾಜದಲ್ಲಿ ಅಸಹನೆ –ತಾರತಮ್ಯ ಇಂದಿನ ಬಹಳ ದೊಡ್ಡ ವಿಷಾದದ ಸಂಗತಿ. ಇದನ್ನು ತೊರೆದು, ಪ್ರತಿಯೊಬ್ಬರು ಪರಸ್ಪರ ಸಹಜೀವಿಗಳಾಗಿ, ಸೌಹಾರ್ದಯುತವಾಗಿ ಹಾಗೂ ಸಾಮರಸ್ಯದಿಂದ ಮಾನವೀಯ ಮೌಲ್ಯಗಳೊಡನೆ ಬದುಕಬೇಕೆಂಬ ದೊಡ್ಡ ಆಶಯ ಇಂದಿನ ಅಗತ್ಯ. ಪ್ರಸ್ತುತದಲ್ಲಿ ಪ್ರಕೃತಿ ಒದಗಿಸಿದ ಅವಕಾಶಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೇ, ಸದ್ಬಳಕೆ ಮಾಡಿಕೊಳ್ಳದೇ ಗೊಂದಲ ಮಾಡಿಕೊಳ್ಳಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

6 ಸಂಸ್ಥೆಗಳು, 20 ಮಹಿಳಾ ಸಾಧಕಿಯರಿಗೆ 'ಕಿತ್ತೂರು ರಾಣಿ ಚೆನ್ನಮ್ಮ' ಪ್ರಶಸ್ತಿ ಪ್ರದಾನ

ಮೈಸೂರಿನ ಶ್ರೀ ಗೌತಮ ಬುದ್ಧ ಮಹಿಳಾ ಸ್ತ್ರೀಶಕ್ತಿ ಸ್ವಸಹಾಯ ಸಂಘಕ್ಕೆ ಶ್ರೀಮತಿ ಯಶೋಧರಮ್ಮ ದಾಸಪ್ಪ ವಿಭಾಗೀಯ ಮಟ್ಟದ ಪ್ರಶಸ್ತಿ

ಬೆಂಗಳೂರು, ಮಾ.8– ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ 6 ಸಂಸ್ಥೆಗಳು ಹಾಗೂ 20 ಮಹಿಳಾ ಸಾಧಕರಿಗೆ 'ಕಿತ್ತೂರು ರಾಣಿ ಚೆನ್ನಮ್ಮ' ಪ್ರಶಸ್ತಿಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಶನಿವಾರ ಪ್ರದಾನ ಮಾಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ–2025ರ ಕಾರ್ಯಕ್ರಮದ ವೇಳೆ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಯಶೋಧರಮ್ಮ ದಾಸಪ್ಪ ಪ್ರಶಸ್ತಿ, ಅಂತರಾಳ ಹಾಗೂ ಮಾದರಿ ಪೋಷಕತ್ವ ಮಾರ್ಗ ಸೂಚಿಗಳು –2024 ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿದ ಸಂಸ್ಥೆಗಳು: ಜನ ಚಿಂತನ ಪಟ್ಟಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, ಚಿಕ್ಕಮಗಳೂರು, ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು, ಶ್ರೀದಾನೇಶ್ವರಿ ಮಹಿಳಾ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ, ಮಂಗಳವಾರ ಪೇಟೆ, ವೀರಬದ್ರೇಶ್ವರ ಗುಡಿ ಹತ್ತಿರ, ಬನಹಟ್ಟಿ, ಬಾಗಲಕೋಟೆ, ಚೇತನಾ ಸೇವಾ ಸಂಸ್ಥೆ(ರಿ), ದೀವಗಿ, ಕುಮಟಾ, ಉತ್ತರಕನ್ನಡ, ಶ್ರೀ ರಾಮಚಂದ್ರ ಕನ್ನಾ ಅಂಬಿಗ ಪೋ–ದೀವರ್ಗಿ, ಉತ್ತರಕನ್ನಡ ಜಿಲ್ಲೆ, ರುಚಿ ಟ್ರಸ್ಟ್ (ಶಿಕ್ಷಣ, ಸಾಹಿತ್ಯ ಸಮಾಜಿಕ, ಸಂಸ್ಕೃತಿಕ ಕಲೆಗಳ ಅನಾವರಣ) ಮುದ್ದಾಳ ಕ್ರಾಸ್ ಸಮೀಪ, ಯಾದಗಿರಿ, ನವಶ್ರೀ ಕಲಾಚೇತನ ಸಂಸ್ಥೆ ಅಧ್ಯಕ್ಷರು, ಕೇಶ್ವಾಪುರ, ಹುಬ್ಬಳಿ–ಧಾರವಾಡ ಜಿಲ್ಲೆ

ಪ್ರಶಸ್ತಿ ಸ್ವೀಕರಿಸಿದ ಮಹಿಳೆಯರು: ಡಾ.ವೀಣಾ ಎಸ್. ಭಟ್–ಭದ್ರಾವತಿ, ಡಾ. ಪೂಜಾ ಮಲ್ಲಪ್ಪ– ಗದಗ, ಪ್ರೇಮಾ ಹೆಚ್–ಉಡುಪಿ, ರಶ್ಮಿ ಎಸ್.ಆರ್–ಹಾಸನ, ನಾಜೀಮಾ ಎಸ್– ಶಿವಮೊಗ್ಗ, ಸುವರ್ಣ–ಬೆಂಗಳೂರು, ಮಂಜುಳ– ಮಂಡ್ಯ, ಅದಿತಿ ಪರಪ್ಪ ಕ್ಷಾತ್ರತೇಜ–ಧಾರವಾಡ

ಕಲಾ ಕ್ಷೇತ್ರ: ಡಾ. ವೇದಾರಾಣಿ ದಾಸನೂರ–ಧಾರವಾಡ, ಉಷಾ ಬಸಪ್ಪ–ಬೆಂಗಳೂರು, ವಿದುಷಿ ರಜನಿ ಎಲ್ ಕರಿಗಾರ –ರಾಣೇಬೆನ್ನೂರು, ಎ.ಎಸ್. ಪದ್ಮಾವತಿ –ಭದ್ರಾವತಿ, ಪೂಜಾ ರಘುನಂದನ್– ಹಾಸನ

ಸಾಹಿತ್ಯ ಕ್ಷೇತ್ರ: ರಿಶಲ್ ಬ್ರಿಟ್ಟಿ ಫೆರ್ನಾಂಡೀಸ್–ಮಂಗಳೂರು, ಡಾ. ಸಂಗೀತಾ ಎಂ. ಹಿರೇಮಠ–ಕಲಬುರಗಿ, ಕಸ್ತೂರಿ.ಡಿ. ಪತ್ತಾರ್–ಕೊಪ್ಪಳ ಜಿಲ್ಲೆ. **ಕ್ರೀಡಾ ಕ್ಷೇತ್ರ:** ಗಾಯತ್ರಿ–ಉತ್ತರ ಕನ್ನಡ, ಅಮೂಲ್ಯಾ–ಹಾವೇರಿ. **ಶಿಕ್ಷಣ ಕ್ಷೇತ್ರ:** ಲಲಿತಾ ಸಿ.ಕರಿಮನಿ–ಗದಗ. **ವೀರ ಮಹಿಳೆ ಕ್ಷೇತ್ರ:** ಕಲಬುರಗಿಯ ಡಾ. ವಿಶಾಲಾಕ್ಷಿ ಕರಡ್ಡಿ, ಗದಗದ ಆದಿಶಕ್ತಿ ಮಹಿಳಾ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಬೆಳಗಾವಿಯ ಐಶ್ವರ್ಯ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಬೆಂಗಳೂರು ಗ್ರಾಮಾಂತರದ ಶ್ರೀ ಶಾರದಾ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರಿನ ಶ್ರೀ ಗೌತಮ ಬುದ್ಧ ಮಹಿಳಾ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಚಿತ್ರದುರ್ಗದ ಶ್ರೀ ಪಾರ್ವತಿ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಬಾಗಲಕೋಟೆಯ ನೀಲಾಂಬಿಕೆ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಕಲಬುರಗಿಯ ಶ್ರೀ ಶಕ್ತಿ ಮಲ್ಲಿಕಾರ್ಜುನ ಮಹಿಳಾ ಸ್ವಸಹಾಯ ಸಂಘಗಳಿಗೆ 2024–25ನೇ ಸಾಲಿನಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪ ವಿಭಾಗೀಯ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಬರೀ ಅಲ್ಪಸಂಖ್ಯಾತರನ್ನು ಓಲೈಸುವ ಬಜೆಟ್: ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಟೀಕೆ

ಮೈಸೂರು, ಮಾ.8(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಲ್ಪಸಂಖ್ಯಾತರನ್ನು ಓಲೈಕೆ ಮಾಡುವ ಸಲುವಾಗಿ ರಾಜ್ಯದ ಆಯ–ವ್ಯಯದಲ್ಲಿ ಅವರಿಗೆ ಹೆಚ್ಚಿನ ಒತ್ತು ನೀಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಇಂದಿಲ್ಲಿ ಆರೋಪಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮುಸ್ಲಿಂ ಸಮುದಾಯವನ್ನು ಬೇರ್ಪಡಿಸುವ ಕೆಲಸವನ್ನು ಸಿದ್ದರಾಮಯ್ಯ ಮಾಡಿದ್ದಾರೆ. ಸಾಮಾಜಿಕ ಸ್ವಾಸ್ಥ್ಯವನ್ನು ಹಾಳು ಮಾಡಿರುವ ಅವರು, ರಾಜ್ಯದಲ್ಲಿ ಮುಸ್ಲಿಮರ ಹೆಣ್ಣು ಮಕ್ಕಳಿಗೆ 16 ಕಾಲೇಜು ಘೋಷಣೆ ಮಾಡಿದ್ದಾರೆ. ಇದರಿಂದ ಹಿಂದೂ–ಮುಸ್ಲಿಮರನ್ನು ವಿಭಜನೆ ಮಾಡುವ ಕೆಲಸ ಮಾಡುತ್ತಿದ್ದಾರೆ. ಆ ಮೂಲಕ ಜನ ಸಮುದಾಯದಲ್ಲಿ ಸಂಕುಚಿತ ಭಾವನೆ ಮೂಡಿಸುವ ಪ್ರಯತ್ನಕ್ಕೆ ಕೈ ಹಾಕಿದ್ದು, ಬಿಜೆಪಿ ನಾಯಕರು ಹಲಾಲ್ ಬಜೆಟ್ ಎಂದು ಹೇಳುವುದಕ್ಕೆ ಸಿದ್ದರಾಮಯ್ಯ ಅವರೇ ಕಾರಣ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ನಾಯಕರೇ ಹೇಳುವ ಹಾಗೆ ಸಿದ್ದರಾಮಯ್ಯ ಅವರಿಗೆ ಇದು ಕೊನೆಯ ಬಜೆಟ್ ಆಗಿದ್ದು, ಬೃಹತ್ ಗಾತ್ರದ ಈ ಬಜೆಟ್ ರಾಜ್ಯದ ಆರ್ಥಿಕತೆಗೆ ಮೊಳೆ ಹೊಡೆದಂತಾಗಿದೆ. ಕೇವಲ ಮಾತಿನಲ್ಲೇ ಅಹಿಂದ ಎನ್ನುತ್ತಾರೆಯೇ ಹೊರತು ಅವರಿಗಾಗಿ ಯಾವುದೇ ಯೋಜನೆಗಳನ್ನು ನೀಡಿಲ್ಲ. ಅಹಿಂದ... ಅಹಿಂದ... ಎಂದು ತೋರಿಕೆಗೆ ಹೇಳುವುದಲ್ಲ. ವಿಶ್ವಕರ್ಮ, ಕುಂಬಾರ, ಮಡಿವಾಳ ಮೊದಲಾದ ಸಣ್ಣಪುಟ್ಟ ಸಮುದಾಯಗಳಿಗೆ ಯಾವುದೇ ಯೋಜನೆಗಳನ್ನು ಬಜೆಟ್‌ನಲ್ಲಿ ನೀಡಿಲ್ಲ. ಕುರುಬ ಸಮುದಾಯದವರಿಗೂ ಏನು ಕೊಟ್ಟಿಲ್ಲ. ಕುರಿ ಸತ್ತರೆ 5 ಸಾವಿರ ರೂ. ಪರಿಹಾರ ಕೊಡುತ್ತೇವೆ ಎಂದು ಕಳೆದ ವರ್ಷ ಘೋಷಿಸಿದ್ದರು. ಈ ಬಜೆಟ್‌ನಲ್ಲಿ 7,500 ರೂ. ನೀಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಕುರಿ ಉದ್ಯಮಕ್ಕೆ ಅಗತ್ಯವಿರುವ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ರೂಪಿಸಿಲ್ಲ ಎಂದು ಆರೋಪಿಸಿದರು.



ಸತ್ಯವನ್ನು ಟವಲ್‌ನಲ್ಲಿ ಸುತ್ತಿಡಲು ಸಾಧ್ಯವಿಲ್ಲ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂದು ಬಯಸಿ ಒಕ್ಕಲಿಗರು ಮತ ಹಾಕಿದ್ದಾರೆ. ಡಿಕೆಶಿ ಪಕ್ಷ ಕಟ್ಟಿಲ್ಲವೇ? ನಾವು ಸಹ ಪಕ್ಷ ಕಟ್ಟಿ, ಬೆಳೆಸಿದ್ದೇವೆ. ನಾವು ಕಟ್ಟಿದ ಮನೆಗೆ ಬಂದು ನೀವು ಸೇರಿಕೊಂಡಿದ್ದೀರಿ. ಈಗ ಅದನ್ನು ಹೇಳುವ ಔದಾರ್ಯವೂ ನಿಮಗಿಲ್ಲ. ಸಿದ್ದರಾಮಯ್ಯ ಮಾದರಿಯಲ್ಲಿ ಸರ್ಕಾರ ಮುಂದುವರೆದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಧೂಳಿಪಟವಾಗಲಿದೆ ಎಂದು ಎ.ಹೆಚ್.ವಿಶ್ವನಾಥ್ ಇದೇ ಸಂದರ್ಭ ಭವಿಷ್ಯ ನುಡಿದರು.

ಈ ಹಿಂದೆ ತಾವು ಮಂಡಿಸಿದ್ದ 3.71 ಲಕ್ಷ ಕೋಟಿ ಬಜೆಟ್‌ನಲ್ಲಿ ಯಾವ ಅಭಿವೃದ್ಧಿ ಆಯಿತು? ಶಿಕ್ಷಣ ಗುಣಮಟ್ಟ ಹೆಚ್ಚಾಯಿತೇ? ರಾಜ್ಯದ ಖಜಾನೆಯಲ್ಲಿ ಹಣವಿಲ್ಲ. ನೀವು ಯಾರನ್ನು ಮೂರ್ಖರನ್ನಾಗಿಸಲು ಹೊರಟಿದ್ದೀರಿ. ಈ ಬಾರಿಯ ಬಜೆಟ್‌ನಲ್ಲಿ ಹೊಸತನವೇನಿದೆ? 16 ಬಜೆಟ್ ಮಂಡಿಸಿದ್ದಾರೆಯೇ ಹೊರತು ಸಿದ್ದರಾಮಯ್ಯ ಯಾವ ಸುಧಾರಣೆಯನ್ನೂ ತರಲಿಲ್ಲ. ಇದೊಂದು ಕಟ್ ಅಂಡ್ ಪೇಸ್ಟ್ ಆಗಿದೆ ಎಂದು ವ್ಯಂಗ್ಯವಾಡಿದರು. ಮೈಸೂರಿಗೆ ಹಳೆಯದನ್ನೇ ಹೇಳುತ್ತಿದ್ದಾರೆಯೇ ಹೊರತು ಹೊಸದನ್ನೇನು ಕೊಟ್ಟಿಲ್ಲ. ನಿಮ್ಹಾನ್ಸ್ ಕೆಲಸ ಈಗಾಗಲೇ ಆರಂಭವಾಗಿದೆ. ಚಿತ್ರನಗರಿ ಯೋಜನೆಯನ್ನು ಅದೆಷ್ಟೋ ವರ್ಷಗಳಿಂದ ಹೇಳುತ್ತಿದ್ದೀರಿ. ರೇಷ್ಮೆ ಬೆಳೆಗಾರರನ್ನು ಸರ್ಕಾರ ಮರೆತೇ ಬಿಟ್ಟಿದೆ ಎಂದರು.

ಹೆಚ್.ಡಿ.ದೇವೇಗೌಡರು, ಸಿದ್ದರಾಮಯ್ಯ ಅವರಿಗೆ ಹಣಕಾಸು ಇಲಾಖೆ ಜವಾಬ್ದಾರಿ ಕೊಟ್ಟಿದ್ದರು. ಅದಕ್ಕೆ ಒಂದೂ ಕೃತಜ್ಞತೆಯನ್ನು ಹೇಳಲಿಲ್ಲ. ಆದಾಯ ತುಂಬಿದ ಜನರಿಗೆ ಒಂದು ಗೌರವ ಸಲ್ಲಿಸಲಿಲ್ಲ. ತೆರಿಗೆದಾರರಿಗೆ ಯಾವುದೇ ಯೋಜನೆ ನೀಡಲಿಲ್ಲ. ಅಂದಮೇಲೆ ನಿಮ್ಮ ಹೊಸತನವಾದರೂ ಏನು ಎಂದು ವಿಶ್ವನಾಥ್ ಅವರು ಇದೇ ವೇಳೆ ಪ್ರಶ್ನಿಸಿದರು.

ಶ್ರೀರಂಗಪಟ್ಟಣ ಪುರಸಭೆಯಿಂದ 58 ಲಕ್ಷ ರೂ. ಬಜೆಟ್ ಮಂಡನೆ


ಸರ್ವಸದಸ್ಯರ ಬಜೆಟ್ ಮಂಡನಾ ಸಭೆ ನಡೆಯಿತು.

ಶ್ರೀರಂಗಪಟ್ಟಣ, ಮಾ.8– 2025–26ನೇ ಸಾಲಿನ ಶ್ರೀರಂಗಪಟ್ಟಣ ಪುರಸಭೆ ಆಯವ್ಯಯದಲ್ಲಿ ಒಟ್ಟು 17,50, 21,000 ರೂ.ಗಳ ಖರ್ಚಿನೊಂದಿಗೆ ಒಟ್ಟು 58 ಲಕ್ಷ ರೂ.ಗಳ ಉಳಿತಾಯದ ನಿರೀಕ್ಷೆಯ ಆಯ–ವ್ಯಯ ಪಟ್ಟಿಯನ್ನು ಮಂಡಿಸಲಾಯಿತು.

ಪುರಸಭೆ ಅಧ್ಯಕ್ಷೆ ಯಶೋಧಮ್ಮ ನೇತೃತ್ವದಲ್ಲಿ ಶುಕ್ರವಾರ ನಡೆದ ಸರ್ವ ಸದಸ್ಯರ ಬಜೆಟ್ ಮಂಡನಾ ಸಭೆಯಲ್ಲಿ, ಜನಗಣತಿ ಅನುದಾನ 1,00,000, ಅಭಿವೃದ್ಧಿ ಶುಲ್ಕ, ಪ್ರಾಧಿಕಾರ ಶುಲ್ಕ 40,50,000, ಟ್ರೇಡ್ ಲೈಸೆನ್ಸ್, ಬಿಲ್ಡಿಂಗ್ ಲೈಸೆನ್ಸ್, ವಾಹನ ನಿಲುಗಡೆ ಚಲನಚಿತ್ರ ಚಿತ್ರೀಕರಣ ಶುಲ್ಕ 55,20,000, ವಿದ್ಯುತ್‌ಚ್ಛಕ್ತಿ ಅನುದಾನ 1,88,00,000 ರೂ, ಆಸ್ತಿ ತೆರಿಗೆಯೊಂದಿಗೆ ವಸೂಲಿ ಮಾಡಿದ ಸ್ವಚ್ಛತೆ ಶುಲ್ಕ, ಕಾವೇರಿ ನದಿ ತೀರದಲ್ಲಿ ಸ್ವಚ್ಛತೆ ಶುಲ್ಕ 63,75,000, ವಾರದ ಸಂತೆ ನೆಲಬಾಡಿಗೆ, ಫುಟ್ ಬಾತ್ ಮತ್ತು ಇತರ ನೆಲಬಾಡಿಗೆ 13,00,000, ನೀರಿನ ತೆರಿಗೆ, ಒಳಚರಂಡಿ ಮತ್ತು ನೀರು ಸರಬರಾಜು ಸಂಪರ್ಕ ಶುಲ್ಕ 80,65,000, ಎಸ್.ಎಫ್.ಸಿ ಅನಿರ್ಬಂಧಿತ ಅನುದಾನ 75,00,000, ಪ್ರಮಾಣ ಪತ್ರದ ಶುಲ್ಕಗಳು, ಸ್ವಚ್ಛ ಭಾರತ್ 75,00,000, ಎಸ್.ಎಫ್.ಸಿ ವಿಶೇಷ ಅನುದಾನ 1,70,00,000 ಸೇರಿದಂತೆ ಇತರ ಮೂಲಗಳಿಂದ ಒಟ್ಟು 18,08,40,463 ರೂ.ಗಳ ಜಮಾವಣೆಯ ನಿರೀಕ್ಷಣೆ ಮಾಡಲಾಗಿದೆ.

ಕಚೇರಿ ನೌಕರರ ವೇತನ ಅನುದಾನ 2,72,00,000, ಕಚೇರಿ ವೆಚ್ಚಗಳು–ಆಡಳಿತ 74,55,000, ಬೀದಿ ದೀಪ ಮತ್ತು ನೀರು ಸ್ಥಾವರಗಳ ವಿದ್ಯುತ್ ಬಿಲ್ ಪಾವತಿಗಾಗಿ 1,88,00,000, ಹೊರಗುತ್ತಿಗೆ ಬೀದಿ ದೀಪ ನಿರ್ವಹಣೆ ಮತ್ತು ಬೀದಿ ದೀಪ ದುರಸ್ಥಿ ಸಂಬಂಧಿಸಿದ ವೆಚ್ಚ 53,00,000, ಬಿಡಾಡಿ ನಾಯಿ ನಿಯಂತ್ರಣ ವೆಚ್ಚ, ಪಲ್ಸ್ ಪೋಲಿಯೊ ಇತರೆ ವೆಚ್ಚ 64,80,000, ಘನತ್ಯಾಜ್ಯ ವಿಭಾಗದ ನಿರ್ವಹಣಾ ವೆಚ್ಚ 1,18,75,000, ನೀರು ಸರಬರಾಜು ಮತ್ತು ಒಳಚರಂಡಿ ನಿರ್ವಹಣಾ ವೆಚ್ಚ 1,35,10,000, ವಾಣಿಜ್ಯ ಕಟ್ಟಡಗಳು, ಲಘು ವಾಹನಗಳು, ಸ್ವಾಗತ ಫಲಕ, ಕಚೇರಿ ಉಪಕರಣ, ಪೀಠೋಪಕರಣಗಳು ಇತರೆ 72,00, 000, ರಸ್ತೆ, ಚರಂಡಿ, ಈ ಭಾರಿಯ ಬಜೆಟ್‌ನಲ್ಲಿ ಒಟ್ಟು 58,19,463 ರೂ. ಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

ಇಂದು ಭಾರತ್ ಪ್ರಿಂಟ್ ಎಕ್ಸ್‌ಪೋ

ಮಂಡ್ಯ: ಬೆಂಗಳೂರಿನಲ್ಲಿ ಏ.24, 25 ಮತ್ತು 26ರಂದು ನಡೆಯಲಿರುವ ಭಾರತ್ ಪ್ರಿಂಟ್ ಎಕ್ಸ್‌ಪೋ(ವಸ್ತುಪ್ರದರ್ಶನ) 2025ರ ಕಾರ್ಯಕ್ರಮದ ಅಂಗವಾಗಿ ಜಾಗೃತಿ ಅಭಿಯಾನ (ರೋಡ್‌ಶೋ) ಕಾರ್ಯಕ್ರಮವು ಮಾ.9ರಂದು ಮಂಡ್ಯದಲ್ಲಿ ನಡೆಯಲಿದೆ ಎಂದು ಮಂಡ್ಯ ಜಿಲ್ಲಾ ಮುದ್ರಣಕಾರರ ಸಂಘದ ಅಧ್ಯಕ್ಷ ಜೆ.ಲಕ್ಷ್ಮಿನಾರಾಯಣ್ ತಿಳಿಸಿದರು.

ಮಂಡ್ಯದಲ್ಲಿ ಬಜೆಟ್ ವಿರೋಧಿಸಿ ಬಿಜೆಪಿ ಪ್ರತಿಭಟನೆ

ದಲಿತ, ರೈತ ವಿರೋಧಿ ಬಜೆಟ್ ಮಂಡನೆ: ಸಚ್ಚಿದಾನಂದ ವಾಗ್ದಾಳಿ


ಸರ್ಕಾರದ ಬಜೆಟ್ ವಿರೋಧಿಸಿ ಬಿಜೆಪಿ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಟನೆ

ಮಂಡ್ಯ: ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ರೈತ ಹಾಗೂ ದಲಿತ ವಿರೋಧಿ ನೀತಿ ಅನುಸರಿಸಲಾಗಿದೆ ಎಂದು ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ವಾಗ್ದಾಳಿ ನಡೆಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಕಾಂಗ್ರೆಸ್ ಸರ್ಕಾರದ ಬಜೆಟ್ ವಿರೋಧಿಸಿ ಬಿಜೆಪಿ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಾಂಗ್ರೆಸ್ ದಲಿತ ವಿರೋಧಿ ಧೋರಣೆ ಅನುಸರಿಸುತ್ತಿರುವುದು ಇದೇ ಮೊದಲೇನಲ್ಲ. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಅವಮಾನ ಮಾಡಿತ್ತು. ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದವರ ಬೆಂಬಲ ಪಡೆದು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಈ ಬಜೆಟ್ ಮೂಲಕ ದಲಿತ ವಿರೋಧಿ ಎನ್ನುವುದನ್ನು ತೋರಿಸಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವರಾದ ಎಚ್.ಸಿ. ಮಹದೇವಪ್ಪ ಪ್ರಿಯಾಂಕ್ ಖರ್ಗೆ ಅವರು ಬಜೆಟ್‌ನಲ್ಲಿ ದಲಿತ ಸಮುದಾಯಕ್ಕೆ ಅನುದಾನ ಮೀಸಲಿರಿಸುವಂತೆ ಮಾಡುವಲ್ಲಿ ವಿಫಲರಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಇನ್ನು ಕೃಷಿ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸುವ ಮೂಲಕ ರೈತರನ್ನು ವಂಚಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಿದೆ. ಕೃಷಿ, ತೋಟಗಾರಿಕೆ, ಪಶುಪಾಲನೆ ಇಲಾಖೆ ಸೇರಿಯೂ 15 ಸಾವಿರ ಕೋಟಿ ರೂ. ಬಜೆಟ್ ನೀಡಿಲ್ಲ ಈ ಮೂಲಕ ಸಿಎಂ ಸಿದ್ದರಾಮಯ್ಯ ರೈತರಿಗೆ ಅವಮಾನ ಮಾಡಿದ್ದಾರೆ. ಯುವಕರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಇವರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೃಷಿ ಕ್ಷೇತ್ರಕ್ಕೆ ಆದ್ಯತೆ ನೀಡಿಲ್ಲ. ಶಾದಿ ಭಾಗ್ಯಕ್ಕೆ ತಲಾ 50 ಸಾವಿರ ರೂ ಆರ್ಥಿಕ ನೆರವು ನೀಡುತ್ತಿದ್ದಾರೆ. ಇದೇ ರೀತಿ ಯುವ ರೈತರು ಮದುವೆಯಾದರೆ ಮೂರು ಲಕ್ಷ ರೂ. ಅಥವಾ ಉಚಿತವಾಗಿ ಒಂದು ಟ್ರ್ಯಾಕ್ಟರ್, ಟಿಲ್ಲರ್ ಕೊಡಿ. ಇದರಿಂದ ಯಾವುದೇ ತಪ್ಪಾಗುವುದಿಲ್ಲ. ಇಲ್ಲದಿದ್ದರೆ ಮುಂದೆ ಕೃಷಿ ಮಾಡುವವರೇ ಇಲ್ಲದಂತಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇದಲ್ಲದೆ ಕೃಷಿಗೆ ಪ್ರತ್ಯೇಕ ಬಜೆಟ್ ಮಂಡನೆ ಮಾಡುವ ಮೂಲಕ ವಿಶೇಷ ಪ್ಯಾಕೇಜ್ ನೀಡಬೇಕು. ಕನಿಷ್ಟ 50 ಸಾವಿರ ಕೋಟಿ ರೂಗಳನ್ನು ಕೃಷಿ ಹಾಗೂ ಇದಕ್ಕೆ ಪೂರಕವಾದ ಇಲಾಖೆಗೆಂದು ಮೀಸಲಿಡದಿದ್ದರೆ ಭವಿಷ್ಯದಲ್ಲಿ ಸಮಸ್ಯೆ ಎದುರಿಸಬೇಕಾಗುತ್ತದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕಿಸಾನ್ ಸಮ್ಮಾನ್ ಯೋಜನೆಯಡಿ ಪ್ರತಿ ರೈತರಿಗೆ 6 ಸಾವಿರ ರೂ ನೀಡುತ್ತಿದ್ದಾರೆ. ಇಂತಹ ರೈತಪರ ಕಾರ್ಯಕ್ರಮವನ್ನು ರಾಜ್ಯಸರ್ಕಾರ ನೀಡಬೇಕು. ಕೃಷಿ ಇಲ್ಲದೆ ದೇಶವಿಲ್ಲ ಎನ್ನುವುದನ್ನು ರಾಜ್ಯ ಸರ್ಕಾರ ಅರಿತುಕೊಳ್ಳಬೇಕು ಎಂದರು.

ಈ ಬಜೆಟ್ ಅನ್ನು ಮತ್ತೊಮ್ಮೆ ಪರಿಶೀಲನೆ ನಡೆಸಿ. 4 ಲಕ್ಷ ಕೋಟಿ ರೂ ಬಜೆಟ್ ಎಂದು ಬೀಗಬೇಡಿ. ಸಾಲವೇ ಒಂದು ಲಕ್ಷ ಕೋಟಿ ರೂ ಇದೆ. ಯೋಜನೆ ಹಾಗೂ ಯೋಜನೇತರ ವೆಚ್ಚವೆಂದು 2 ಲಕ್ಷ ಕೋಟಿ ರೂ.ಗಳನ್ನು ವೇತನ ಕೊಡುವುದಕ್ಕೆ ಬೇಕು. ಉಳಿದ ಹಣದಲ್ಲಿ 50 ರಿಂದ 60 ಸಾವಿರ ಕೋಟಿ ರೂ ವೆಚ್ಚದ ಅಭಿವೃದ್ಧಿ ಕೆಲಸ ಮಾಡಬಹುದು. ಅದೆಲ್ಲವೂ ಒಂದೆಡೆ ಇರಲಿ, ರಾಜ್ಯಸರ್ಕಾರಕ್ಕೆ ಹಾಗೂ ಸಿಎಂ ಸಿದ್ದರಾಮಯ್ಯ ಅವರಿಗೆ ನಿಜವಾಗಿಯೂ ರೈತರ ಬಗ್ಗೆ ಕಾಳಜಿ ಇದ್ದರೆ ಕೃಷಿಗೆ ಒತ್ತು ನೀಡಬೇಕು ಎಂದು ಆಗ್ರಹಿಸಿದರು.

ಕೆ.ಆರ್.ಪೇಟೆಯಲ್ಲಿ ಭತ್ತ, ರಾಗಿ ಖರೀದಿ ಕೇಂದ್ರ ಉದ್ಘಾಟನೆ


ಭತ್ತ ಮತ್ತು ರಾಗಿ ಖರೀದಿ ಕೇಂದ್ರವನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಕೆ.ಆರ್.ಪೇಟೆ: ಪಟ್ಟಣದ ಎಪಿಎಂಸಿ ಆವರಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ವತಿಯಿಂದ ಆರಂಭಿಸಲಾದ ಭತ್ತ ಮತ್ತು ರಾಗಿ ಖರೀದಿ ಕೇಂದ್ರವನ್ನು ಶಾಸಕ ಹೆಚ್.ಟಿ.ಮಂಜು ದಾನ್ಯ ರಾಶಿಗೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟನೆ ಮಾಡಿದರು.

ಬಳಿಕ ಮಾತನಾಡಿದ ಅವರು ಸರ್ಕಾರವು ಭತ್ತ ಮತ್ತು ರಾಗಿ ಖರೀದಿ ಕೇಂದ್ರವನ್ನು ಬೆಂಬಲ ಬೆಲೆಯಲ್ಲಿ ತೆರೆಯುತ್ತಿರುವುದು, ಶ್ಲಾಘನೀಯವಾದುದು. ಆದರೆ ಸಕಾಲದಲ್ಲಿ ಖರೀದಿ ಕೇಂದ್ರ ತೆರೆದರೆ ಹೆಚ್ಚು ರೈತರಿಗೆ ಅನುಕೂಲವಾಗಲಿದೆ. ಪ್ರತಿ ಕ್ವಿಂಟಾಲ್ ರಾಗಿಗೆ 4290/– ರೂ, ಪ್ರತಿ ಕ್ವಿಂಟಾಲ್ ಭತ್ತಕ್ಕೆ 2300/–ರೂಗಳನ್ನು ನಿಗದಿ ಮಾಡಿದೆ ಖರೀದಿ ಕೇಂದ್ರ ತಡವಾಗಿ ಆರಂಭಿಸಲಾಗಿರುವುದು ಕಡಿಮೆ ರೈತರಿಗೆ ಮಾತ್ರ ಅನುಕೂಲ ಆಗಲಿದೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಮಾರಾಟ ಮಹಾ ಮಂಡಳಿ ನಿರ್ದೇಶಕ ಶೀಳನೆರೆ ಎಸ್.ಎಲ್.ಮೋಹನ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕಿರಾಮ್, ಎಪಿಎಂಸಿ ಕಾರ್ಯದರ್ಶಿ ಸತೀಶ್, ನಾಗರಾಜೇಗೌಡ, ಡಿ.ಎಸ್.ನಾಗೇಂದ್ರ ಚಟ್ಟೇನಹಳ್ಳಿ ನಾಗರಾಜು, ನಟರಾಜ್, ವೆಂಕಟೇಶ್ ನಾಯಕ್, ಪಾಂಡವಪುರ ವ್ಯವಸ್ಥಾಪಕಿ ಶೀಲಾ, ಫೆಡರೇಷನ್ ಅಧಿಕಾರಿಗಳಾದ ರಘುಗೌಡ, ಮಧು, ಕಾರ್ತಿಕ್, ಪ್ರದೀಪ್, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್ ಇದ್ದರು.

ಕೈಗಾರಿಕೆಗೆ ಪ್ರೋತ್ಸಾಹ, ರೈತರಿಗೆ ಪರಿಹಾರ ಸಿಕ್ಕಿಲ್ಲ, ಬಜೆಟ್ ನಿರಾಶಾದಾಯಕ

ಭಾರತೀನಗರ, ಮಾ.8– ಮಂಡ್ಯ ಜಿಲ್ಲೆಯ ಕೈಗಾರಿಕಾ ಸ್ಥಾಪನೆಗೆ ಬಜೆಟ್‌ನಲ್ಲಿ ಪ್ರೋತ್ಸಾಹ ಸಿಕ್ಕಿಲ್ಲ ಎಂದು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಬೇಸರ ವ್ಯಕ್ತಪಡಿಸಿದರು.

ಭಾರತೀನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ಕೈಗಾರಿಕೆಗೆ, ರೈತರಿಗೆ, ಕೃಷಿಗೆ ಇದೊಂದು ನಿರಾಶಾದಾಯಕ ಬಜೆಟ್ ಆಗಿದ್ದು, ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರು ಮತ್ತು ಶಾಸಕರುಗಳು ಮುಂದಾದರು. ಮಂಡ್ಯ ಜಿಲ್ಲೆಯ ಕೈಗಾರಿಕಾ ಸ್ಥಾಪನೆಗೆ ಉತ್ತೇಜನ ನೀಡಲು ಮುಂದಾಗಬೇಕೆಂದರು.

ಮದ್ದೂರು ತಾಲೂಕಿನಲ್ಲಿ 30 ಸಾವಿರ ಹೆಕ್ಟೇರ್ ಕೃಷಿ ಭೂಮಿ ಸವಳು ಮತ್ತು ಜೌಗು ಭೂಮಿಯಾಗಿದ್ದು ಇದನ್ನು ಫಲವತ್ತತೆ ಭೂಮಿಯನ್ನಾಗಿಸಲು ಕ್ರಮಕೈಗೊಳ್ಳಬೇಕು. ರೈತರಿಗೆ ಯಾವುದೇ ಪ್ರೋತ್ಸಾಹವಾಗಲಿ, ಪರಿಹಾರವಾಗಲಿ ಸಿಕ್ಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಾರೋಹಳ್ಳಿಯಲ್ಲಿ ಭತ್ತ, ರಾಗಿ ನೋಂದಣಿ, ಖರೀದಿ ಕೇಂದ್ರ ಆರಂಭ


ಭತ್ತ ಹಾಗೂ ರಾಗಿ ಖರೀದಿ ಕೇಂದ್ರಕ್ಕೆ ಶಾಸಕ ದರ್ಶನ್‌ಪುಟ್ಟಣ್ಣಯ್ಯ ಚಾಲನೆ ನೀಡಿದರು.

ಪಾಂಡವಪುರ: ಪಟ್ಟಣದ ಹಾರೋಹಳ್ಳಿಯ ಎಪಿಎಂಸಿಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ವತಿಯಿಂದ ಆರಂಭಗೊಂಡ 2024–25ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ ಹಾಗೂ ರಾಗಿ ನೋಂದಣಿ ಮತ್ತು ಖರೀದಿ ಕೇಂದ್ರಕ್ಕೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ವರ್ಷವಿಡಿ ಭತ್ತ ಹಾಗೂ ರಾಗಿ ಖರೀದಿ ಕೇಂದ್ರವನ್ನು ತೆರೆದಿರಬೇಕು ಎಂಬ ವಿಚಾರವಾಗಿ ನಮ್ಮ ರೈತಸಂಘಟನೆಯಿಂದ ನಿರಂತರ ಹೋರಾಟ ಮಾಡಿಕೊಂಡು ಬರುತ್ತಿದ್ದೇವೆ, ಈ ವಿಚಾರವಾಗಿ ಸರಕಾರದೊಂದಿಗೂ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಫಡರೇಷನ್ ನಿರ್ದೇಶಕ ಎಸ್.ಎಲ್.ಮೋಹನ್ ಮಾತನಾಡಿದರು. ಕಾರ್ಯಕ್ರಮದಲ್ಲಿ ರೈತಸಂಘದ ಅಧ್ಯಕ್ಷ ಕೆನ್ನಾಳು ವಿಜಯ್‌ಕುಮಾರ್, ಖರೀದಿ ಕೇಂದ್ರ ವ್ಯವಸ್ಥಾಪಕಿ ಶೀಲಾ, ರೀಜನಲ್ ಮ್ಯಾನೇಜರ್ ವೆಂಕಟೇಶ್‌ನಾಯ್ಕ್, ಆಹಾರ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ್, ಎಪಿಎಂಸಿ ಕಾರ್ಯದರ್ಶಿ ಪಂಕಜ ಸೇರಿದಂತೆ ಹಲವರು ಇದ್ದರು.

ಮೈಷುಗರ್‌ನಲ್ಲಿ ಕಟಾವಿಗಾಗಿ ಮೇಸ್ತ್ರಿಗಳಿಗೆ ನೀಡಿದ್ದ ಮುಂಗಡ ಹಣ ದುರುಪಯೋಗ ಆಗಿಲ್ಲ

ಮಂಡ್ಯ: ಮೈಷುಗರ್ ಸಕ್ಕರೆ ಕಾರ್ಖಾನೆಗೆ ಕಬ್ಬು ಕಟಾವು ಸಂಬಂಧ ಮೇಸ್ತ್ರಿಗಳಿಗೆ ನೀಡಲಾಗಿದ್ದ ಮುಂಗಡ ಹಣ ವಿಚಾರವಾಗಿ ದುರಪಯೋಗ ನಡೆದಿದೆ ಎಂದು ಇಲ್ಲಸಲ್ಲದ ಆರೋಪ ಮಾಡಿರುವುದು ಸತ್ಯಕ್ಕೆ ದೂರವಾಗಿದೆ ಎಂದು ಮೈಷುಗರ್ ನಿಕಟಪೂರ್ವ ಕಬ್ಬು ಅಭಿವೃದ್ಧಿ ಅಧಿಕಾರಿ ಚಂದ್ರಶೇಖರ್ ಡಿ.ಎನ್. ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬ್ಬು ಕಟಾವು ಮೇಸ್ತ್ರಿಗಳಿಗೆ ಮುಂಗಡ ಹಣ ನೀಡುವ ಸಲುವಾಗಿ ಮೇಲಧಿಕಾರಿಗಳ ಸಮ್ಮುಖದಲ್ಲಿ ಸಭೆ ಕರೆದು ಮುಂಗಡ ಹಣದ ಭದ್ರತೆಗಾಗಿ ದಾಖಲಾತಿಗಳನ್ನು ಪಡೆಯಲಾಗಿತ್ತು ಎಂದರು.

ಸದರಿ ದಾಖಲೆಗಳ ಪರಿಶಿಲನೆ ನಂತರ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಪ್ರಧಾನ ವ್ಯವಸ್ಥಾಪಕರಿಗೆ ಅನುಮೋದನೆಗೆ ನೀಡಿ, ಪರಿಶೀಲನೆಯ ನಂತರವಷ್ಟೆ ಹಣಕಾಸು ವಿಭಾಗದಿಂದ ಕಂಪನಿಯ ಖಾತೆಯಿಂದಲೇ ಮೇಸ್ತ್ರಿಗಳ ಉಳಿತಾಯ ಖಾತೆಗೆ ಹಣ ಜಮೆ ಮಾಡಲಾಗಿದೆ ಎಂದು ಹೇಳಿದರು.

ಮೇಸ್ತ್ರಿಗಳಿಗೆ ನೀಡಲಾಗಿದ್ದ 3 ಕೋಟಿ 28 ಲಕ್ಷ 75 ಸಾವಿರ ಮುಂಗಡ ಹಣದಲ್ಲಿ 2 ಕೋಟಿ 58 ಲಕ್ಷದ 23776 ರೂ ವಸೂಲಾಗಿದ್ದು, 70 ಲಕ್ಷದ 51,224 ರೂ ಮೇಸ್ತ್ರಿಗಳಿಂದ ಬಾಕಿ ಉಳಿದಿದೆ. ಅಲ್ಲದೇ ಮೈಷುಗರ್‌ನಲ್ಲಿ ಯಂತ್ರೋಪಕರಣಗಳ ತಾಂತ್ರಿಕ ದೋಷದಿಂದ ಕಬ್ಬು ನುರಿಸದೇ ನಿಂತರೆ ಕೆಲಸ ನೀಡಲಾಗಿರುವುದಿಲ್ಲ ಎಂದು ಮಾಹಿತಿ ನೀಡಿದರು.

ಎಂ.ಮರೀಗೌಡ ನಿಧನ



ಭಾರತೀನಗರ, ಮಾ.8– ಇಲ್ಲಿಗೆ ಸಮೀಪದ ಬನ್ನಹಳ್ಳಿ ಗ್ರಾಮದ ಹಿರಿಯ ಮುಖಂಡ ಎಂ.ಮರೀಗೌಡ (72) ಅನಾರೋಗ್ಯದಿಂದ ಶನಿವಾರ ಮಧ್ಯಾಹ್ನ ನಿಧನ ಹೊಂದಿದ್ದಾರೆ. ಮೃತರು ಪತ್ನಿ, ಜಯಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಇವರು ಕಳೆದ 50 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿದ್ದರು. ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ಬನ್ನಹಳ್ಳಿಯ ತಮ್ಮ ಜಮೀನಿನಲ್ಲಿ ಭಾನುವಾರ ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ

ಮೂರನೇ ಪುಟದಿಂದ

ಸಿಬಿಐ ವಶಕ್ಕೆ

ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ನೀಡಿದ ಪ್ರಾಥಮಿಕ ವರದಿ ಆಧಾರದ ಮೇಲೆ ದೆಹಲಿ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ. ರನ್ಯಾ ರಾವ್ ಅವರನ್ನು ಡಿಆರ್‌ಐ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಆರೋಪಿ ಕೆಲವು ಸ್ಫೋಟಕ ಮಾಹಿತಿ ನೀಡುತ್ತಿದ್ದಂತೆ ಸಂದೇಶ ರವಾನೆ ಮಾಡಿತು.

ಕೇಂದ್ರ ತನಿಖಾ ಸಂಸ್ಥೆಗಳು ತಕ್ಷಣವೇ ಡಿಆರ್‌ಐ ಕಸ್ಟಡಿಯಲ್ಲಿರುವ ರಾವ್ ಅವರನ್ನು ವಿಚಾರಣೆ ಮಾಡಿ ಮಾಹಿತಿ ಪಡೆದ ನಂತರ ಸಿಬಿಐ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿತು. ಚಿನ್ನ ಕಳ್ಳಸಾಗಣೆ ಪ್ರಕರಣವನ್ನು ಸಿಬಿಐ ವಹಿಸಿಕೊಂಡಿರುವುದರಿಂದ ಕರ್ನಾಟಕ ರಾಜಕೀಯ ಮುಂದಿನ ದಿನಗಳಲ್ಲಿ ಮಹತ್ತರ ತಿರುವು ಪಡೆದುಕೊಳ್ಳಲಿದೆ ಎನ್ನಲಾಗಿದೆ.

ಯಾವುದೇ ಪ್ರಕರಣವನ್ನು ಸಿಬಿಐ ತನಿಖೆಗೆ ಮುಕ್ತ ಅವಕಾಶ ನೀಡದಿರುವ ಕರ್ನಾಟಕ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯ ಗುಪ್ತಚರ ವಿಭಾಗ ನೀಡಿದ ದೂರು ದಾಖಲಿಸಿಕೊಂಡು ದೆಹಲಿ ಸಿಬಿಐ ತನಿಖೆ ಕೈಗೆತ್ತಿಕೊಂಡಿದೆ.

ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ಇ.ಡಿ. ಕೂಡ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಚಿನ್ನ ಕಳ್ಳಸಾಗಣೆ ಪ್ರಕರಣದ ತನಿಖೆಯಿಂದ, ಅಗೆದಷ್ಟೂ ದೊಡ್ಡ ದೊಡ್ಡ ಕುಳಗಳು ರನ್ಯಾ ರಾವ್ ಜೊತೆಗೆ ನಂಟು ಹೊಂದಿರುವುದು ಬೆಳಕಿಗೆ ಬರುತ್ತಿದೆ.

ಕಪ್ಪು ಹಣವನ್ನು ಬಿಳಿಯಾಗಿ ಪರಿವರ್ತಿಸಲು ಚಿನ್ನ ಕಳ್ಳಸಾಗಣೆಗೆ ಬಳಕೆ ಮಾಡಿಕೊಳ್ಳಲಾಗುತ್ತಿತ್ತು ಎಂದು ಡಿಆರ್‌ಐ, ಇ.ಡಿ. ಮತ್ತು ಸಿಬಿಐಗೆ ದೂರು ನೀಡಿತ್ತು.

ರನ್ಯಾ ರಾವ್ ಅವರಿಂದ ಕಳೆದ ನಾಲ್ಕು ದಿನಗಳ ಹಿಂದೆ ಕಂದಾಯ ಗುಪ್ತಚರ ನಿರ್ದೇಶನಾಲಯ ಅನೇಕ ಮಾಹಿತಿಗಳನ್ನು ಕಲೆ ಹಾಕಿ, ಅಪಾರ ಪ್ರಮಾಣದ ಚಿನ್ನ ಮತ್ತು ಕೋಟ್ಯಾಂತರ ರೂ.ಗಳನ್ನು ವಶಕ್ಕೆ ಪಡೆದಿದೆ. ಆರೋಪಿ ನೀಡಿರುವ ಮಾಹಿತಿ, ಕೇಂದ್ರೀಯ ತನಿಖಾಧಿಕಾರಿಗಳನ್ನೇ ದಿಗ್ಭ್ರಮೆಗೊಳಿಸಿದೆ. ಈ ಜಾಲದ ಹಿಂದೆ ಪ್ರಭಾವೀ ರಾಜಕಾರಣಿಗಳು ಇರುವುದರಿಂದ ಸಿಬಿಐಗೆ ವಹಿಸಿ, ಚಿನ್ನ ಕಳ್ಳಸಾಗಣೆಯ ಮತ್ತಷ್ಟು ಕರ್ಮಕಾಂಡ ಬಯಲಿಗೆಳೆಯಲು ಇಲಾಖೆ ನಿರ್ಧರಿಸಿದೆ.

ನಗರದ ಪಂಚತಾರಾ ಹೋಟೆಲ್ ಒಂದರಲ್ಲಿ ಕಳೆದ ವರ್ಷವಷ್ಟೇ ರನ್ಯಾ ರಾವ್ ಮದುವೆ ನಡೆದಿತ್ತು. ಮದುವೆಯಲ್ಲಿ ಐದು ಗಂಟೆಗಳ ಕಾಲ ಈ ಪ್ರಭಾವೀ ಸಚಿವರು ಉಪಸ್ಥಿತರಿದ್ದು, ಎಲ್ಲಾ ಉಸ್ತುವಾರಿ ನೋಡಿಕೊಂಡಿದ್ದರು. ಅಷ್ಟೇ ಅಲ್ಲ, ಆರೋಪಿ ಹೇಳಿದ ಕೆಲಸಗಳನ್ನು ಸರ್ಕಾರದ ಮಟ್ಟದಲ್ಲಿ ಮಾಡಿಸಿಕೊಡುತ್ತಿದ್ದರು ಎಂಬುದೂ ಪ್ರಾಥಮಿಕ ತನಿಖೆಯಿಂದ ಬಹಿರಂಗವಾಗಿದೆ.

ರನ್ಯಾ ರಾವ್ ನಿರಂತರವಾಗಿ ವಿದೇಶಗಳಿಗೆ ಹೋಗುತ್ತಲೇ ಇದ್ದರು. ಇದನ್ನೇ ಆಧಾರವಾಗಿಟ್ಟುಕೊಂಡು ಡಿಆರ್‌ಐ ಅಧಿಕಾರಿಗಳು ತನಿಖೆ ನಡೆಸಿದಾಗ, ಆರೋಪಿಯು ಯೂರೋಪ್, ಅಮೆರಿಕ, ದುಬೈ ಸೇರಿದಂತೆ ಅನೇಕ ರಾಷ್ಟ್ರಗಳಿಗೆ ತೆರಳಿರುವುದು ಬೆಳಕಿಗೆ ಬಂದಿದೆ. ಅದರಲ್ಲೂ ನಿರಂತರವಾಗಿ ದುಬೈಗೆ ತೆರಳುತ್ತಿದ್ದುದು ಸಂಶಯಕ್ಕೆ ಎಡೆ ಮಾಡಿಕೊಟ್ಟಿತು, ಫೆಬ್ರವರಿ 2ರಿಂದ ಮಾರ್ಚ್ 3ರವರೆಗೆ ರಾವ್ ಐದು ಬಾರಿ ದುಬೈಗೆ ಭೇಟಿ ನೀಡಿದ್ದರು. ಮಾರ್ಚ್ 3ರಂದು ದುಬೈನಿಂದ ಹಿಂತಿರುಗುತ್ತಿದ್ದಂತೆ ಅವರನ್ನು ಡಿಆರ್‌ಐ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆ ನಡೆಸಿದ ನಂತರ ಆರೋಪಿಯಿಂದ ಕೋಟ್ಯಾಂತರ ರೂ. ಮೌಲ್ಯದ ಚಿನ್ನ ಮತ್ತು ನಗದನ್ನು ವಶ ಪಡಿಸಿಕೊಂಡರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಯಾವುದೇ ತಪಾಸಣೆಗೆ ಒಳಪಡಿಸದೆ, ಹಿರಿಯ ಪೋಲಿಸ್ ಅಧಿಕಾರಿ ಮಗಳೆಂದು ವಿಐಪಿ ಪ್ರವೇಶ ದ್ವಾರದಿಂದ ರನ್ಯಾ ರಾವ್ ಅವರನ್ನು ಸದಾಕಾಲ ಹೊರಗೆ ಕರೆತರುತ್ತಿದ್ದ ಪೋಲಿಸ್‌ನನ್ನು ಸಹ ಬಂಧಿಸಲಾಗಿದೆ. ಆರೋಪಿಯನ್ನು ಕರೆತರಲು ಈತನಿಗೆ ಯಾರು ಸಂದೇಶ ಕೊಡುತ್ತಿದ್ದರು ಎಂಬ ಮಾಹಿತಿಯನ್ನು ತನಿಖಾ ತಂಡದ ಮುಂದೆ ಈತ ಬಿಡಿಸಿಟ್ಟಿದ್ದು, ಆ ಮಾಹಿತಿ ಕೆಲವು ಪ್ರಭಾವಿಗಳಿಗೆ ಮುಳುವಾಗಲಿದೆ.

ಒಟ್ಟಾಗಿ ಕೆಲಸ ಮಾಡಿ

ಉತ್ತಮ ಕೆಲಸ ಮಾಡುತ್ತಿದ್ದಾರೆ. ಇಬ್ಬರೂ ಸಮರ್ಥ ಮತ್ತು ಬದ್ಧ ನಾಯಕರು ಎಂದು ಖರ್ಗೆ ಶ್ಲಾಘಿಸಿದರು. ಈ ವರ್ಷ ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ಸರ್ಕಾರ 5000 ಕೋಟಿ ರೂ.ಗಳನ್ನು ನೀಡುತ್ತಿದೆ ಎಂಬ ಡಿ.ಕೆ.ಶಿವಕುಮಾರ್ ಅವರ ಭಾಷಣವನ್ನು ಉಲ್ಲೇಖಿಸಿದ ಖರ್ಗೆ, ಈ ಕಲ್ಯಾಣ ಕರ್ನಾಟಕ ಪ್ರದೇಶವು ಹಲವು ದಶಕಗಳಿಂದ ಹಿಂದುಳಿದಿತ್ತು. ಇದು ಬಲವಾಗಿ ಬೆಳೆಯಲು ಬೆಂಬಲದ ಅಗತ್ಯವಿದೆ ಎಂದು ಹೇಳಿದರು. ಕಲ್ಯಾಣ ಕರ್ನಾಟಕದ ಜನರಿಗೆ, ವಿಶೇಷವಾಗಿ ಕಲಬುರಗಿಯ ಜನರಿಗೆ ಖರ್ಗೆ ಧನ್ಯವಾದಗಳನ್ನು ಅರ್ಪಿಸಿದರು. ನಿಮ್ಮ ನಿರಂತರ ಬೆಂಬಲದಿಂದಾಗಿ ತಾವು ಎಐಸಿಸಿ ಅಧ್ಯಕ್ಷರಾಗಿರುವುದಾಗಿ ಹೇಳಿದರು. ಅದೇ ಸಮಯದಲ್ಲಿ 2019ರ ಕಲಬುರಗಿ ಲೋಕಸಭಾ ಚುನಾವಣೆಯಲ್ಲಿ ತಮ್ಮ ಸೋಲಿಗೆ ಅಸಮಾಧಾನ ಇದೆ ಎಂದು ಖರ್ಗೆ ಹೇಳಿದರು. ಕಲ್ಯಾಣ ಕರ್ನಾಟಕವು ವಿಧಾನಸಭೆಗೆ ಅನೇಕ ಕಾಂಗ್ರೆಸ್ ಶಾಸಕರನ್ನು ಮತ್ತು ಲೋಕಸಭೆಗೆ ಸಂಸದರನ್ನು ಕಳುಹಿಸಿದೆ ಎಂಬುದನ್ನು ಮುಖ್ಯಮಂತ್ರಿ ಸಿದ್ದ ರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಮೈಸೂರಿನಿಂದ ಪ್ರಾರಂಭವಾಗುವ ಯಾವುದೇ ಯೋಜನೆಗಳು ಬೆಂಗಳೂರಿನಲ್ಲಿ ನಿಲ್ಲುತ್ತವೆ. ಆದರೆ ಯಾವುದೇ ಯೋಜನೆಗಳು ಕಲ್ಯಾಣ ಕರ್ನಾಟಕದಿಂದ ಪ್ರಾರಂಭವಾದರೆ, ಅವು ಇಡೀ ಕರ್ನಾಟಕವನ್ನು ತಲುಪುತ್ತವೆ ಎಂದು ಖರ್ಗೆ ಹೇಳಿದರು.

ಪ್ರಿಯಕರನ ಜೊತೆ ಪತ್ನಿ ಪರಾರಿ: ನದಿಗೆ ಹಾರಿ ಪತಿ ಆತ್ಮಹತ್ಯೆ

ಹಾಸನ, ಮಾ.8– ಪ್ರಿಯಕರನ ಜೊತೆ ಪತ್ನಿ ಪರಾರಿಯಾದ ಹಿನ್ನೆಲೆ ಮನನೊಂದ ಪತಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಮಾಕವಳ್ಳಿ ಗ್ರಾಮದ ಬಳಿ ನಡೆದಿದೆ. ಅರಕಲಗೂಡು ತಾಲೂಕಿನ ಹೊನ್ನವಳ್ಳಿ ಗ್ರಾಮದ ರವಿ (38) ಆತ್ಮಹತ್ಯೆಗೆ ಶರಣಾದ ಪತಿ. ರವಿಯ ಪತ್ನಿ ಕೆಲ ದಿನಗಳ ಹಿಂದೆ ಗಂಡನನ್ನು ಬಿಟ್ಟು ಮಗುವಿನೊಂದಿಗೆ ಹೊನ್ನವಳ್ಳಿ ಗ್ರಾಮದ ಪ್ರದೀಪ್ ಜೊತೆ ಪರಾರಿಯಾಗಿದ್ದಳು. ಇದರಿಂದ ಮನನೊಂದ ರವಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಸರಿಯಾಗಿ ಸ್ಪಂದಿಸದ ಕಾರಣ ಎಸ್ಪಿಗೂ ದೂರು ನೀಡಿದ್ದರು. ಆದರೂ ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ಮನನೊಂದ ರವಿ ಶನಿವಾರ ಮಾಕವಳ್ಳಿ ಬಳಿ ಹೇಮಾವತಿ ನದಿಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಪೊಲೀಸರು ಹಾಗೂ ಅಗ್ನಿಶಾಮಕ ದಳದಿಂದ ರವಿಯ ಮೃತದೇಹಕ್ಕಾಗಿ ಶೋಧಕಾರ್ಯ ಮುಂದುವರಿದಿದೆ.

ನಟ ಡಾ.ಪುನೀತ್ ಹುಟ್ಟುಹಬ್ಬದ ಅಂಗವಾಗಿ ಮಾ.23ರಂದು ಉಚಿತ ಸಾಮೂಹಿಕ ವಿವಾಹ



ಮೈಸೂರು, ಮಾ.8(ಜಿಎ)–ನಟ ಡಾ. ಪುನೀತ್ ರಾಜ್‌ಕುಮಾರ್ 50ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಮಾ.23 ರಂದು ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಉಚಿತ ಸಾಮೂ ಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಎನ್.ರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪುನೀತ್ ರಾಜ್‌ಕುಮಾರ್ ಅವ ರಂತೆ ನಾವು ಅವರ ಆದರ್ಶ ಗುಣಗಳನ್ನು ಪಾಲಿಸಿಕೊಂಡು ಬಂದಿದ್ದು, ಅವರಂತೆ ಉತ್ತಮ ಕಾರ್ಯದಲ್ಲಿ ತೊಡಗಿಸಿಕೊಂಡಿ ದ್ದೇವೆ. ಅದರಂತೆ ಕಳೆದ 3 ವರ್ಷಗಳಿಂದ ಸಾಮೂಹಿಕ ವಿವಾಹ ಮಹೋತ್ಸವವನ್ನು ಆಯೋಜಿಸಿಕೊಂಡು ಬರುತ್ತಿದ್ದೇವೆ. ಮೊದಲ ಬಾರಿ ಮಾಡಿದಾಗ ಪುನೀತ್ ರಾಜ್‌ಕುಮಾರ್ ಅವರು ಭಾಗವಹಿಸಿ ನವ ಜೋಡಿಗಳಿಗೆ ಹಾರೈಸಿದ್ದರು ಎಂದರು.

ಈ ಬಾರಿ ಅವರ 50ನೇ ವರ್ಷದ ಹುಟ್ಟುಹಬ್ಬದ ಅಂಗ ವಾಗಿ ಸಾಮೂಹಿಕ ವಿವಾಹ ಮಹೋತ್ಸವ ಆಯೋಜಿಸುತ್ತಿದ್ದು, ಇದು ಸಂಪೂರ್ಣ ಉಚಿತ ಕಾರ್ಯಕ್ರಮವಾಗಿದೆ. ವಧುವಿಗೆ ತಾಳಿ, ಕಾಲುಂಗುರ ಮೊದಲಾದವನ್ನು ನೀಡಲಾಗುವುದು. ಊಟದ ವ್ಯವಸ್ಥೆಯಿದೆ. ಪ್ರಯೋಜನ ಪಡೆಯಲಿಚ್ಛಿಸುವವರು ಮೊ. 94487 87111 ಸಂಪರ್ಕಿಸಿ ಎಂದರು. ಟ್ರಸ್ಟ್ ಸಲಹೆಗಾರರಾದ ಸೂರ್ಯ ಕುಮಾರ್ ಮಾತನಾಡಿ, ಟ್ರಸ್ಟ್ ಪ್ರತಿ ವರ್ಷ ಬಡ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ, ಕಿವುಡ ಮೂಕ ಮಕ್ಕಳಿಗೆ ಪುಸ್ತಕ, ವಿಶೇಷಚೇತನ ಮಕ್ಕಳಿಗೆ ನೆರವು ನೀಡುವ ಕೆಲಸ ಮಾಡುತ್ತಿದೆ. ಇದೇ ರೀತಿ ಈ ಬಾರಿ ಉಚಿತ ವಿವಾಹ ಕಾರ್ಯಕ್ರಮ ಆಯೋಜಿಸಿದೆ ಎಂದು ತಿಳಿಸಿದರು.

ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.50 ಮೀಸಲಾತಿ ಜಾರಿ ಆಗಬೇಕಿದೆ...

ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಬಲವಾದ ಆಶಯ


ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಗಳು, ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್, ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿಜಿಆರ್ ಸಿಂಧ್ಯಾ ಮತ್ತಿತರರು ಭಾಗವಹಿಸಿದ್ದರು.

ಮೈಸೂರು, ಮಾ.8(ಎಸ್‌ಬಿಡಿ)– ಲೋಕಸಭೆ ಹಾಗೂ ಎಲ್ಲಾ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಜಾರಿಯಾಗಬೇಕು ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಆಶಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಹಾಗೂ ಜಿಲ್ಲಾ ಘಟಕದ ವತಿಯಿಂದ ನಗರದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳೆಯರೆಲ್ಲಾ ಮುಖ್ಯವಾಹಿನಿಗೆ ಬಂದರೆ ಮಾತ್ರ ದೇಶ ಸದೃಢವಾಗಿರಲು ಸಾಧ್ಯ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿದ್ದಾರೆ. ಹಾಗಾಗಿ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.50 ರಷ್ಟು ಮೀಸಲಾತಿ ಸಿಗಬೇಕಿದೆ ಎಂದರು.

ಮಹಿಳೆಯರು ಹುಟ್ಟಿನಿಂದಲೇ ನಾಯಕತ್ವ ಗುಣ ಹೊಂದಿರುತ್ತಾರೆ. ಅವರು ಸಿಕ್ಕ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ಬೆಳೆಯುವ ಸಾಮರ್ಥ್ಯ ಇರುತ್ತದೆ. ನಮ್ಮ ದೇಶದಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದೆ. ಮುಂದುವರೆದ ದೇಶವೆನ್ನುವ ಅಮೇರಿಕಾದಲ್ಲಿ ಈವರೆಗೆ ಮಹಿಳೆಯರು ಅಧ್ಯಕ್ಷರಾಗಿಲ್ಲ. ಆದರೆ ನಮ್ಮ ದೇಶದ ಜನ ಹಲವು ದಶಕಗಳ ಹಿಂದೆಯೇ ಇಂದಿರಾ ಗಾಂಧಿ ಅವರನ್ನು ಪ್ರಧಾನಮಂತ್ರಿ ಮಾಡುವ ಮೂಲಕ ವಿಶ್ವಕ್ಕೆ ಮಹಿಳಾ ಸಬಲೀಕರಣದ ಸಂದೇಶ ಸಾರಿದರು ಎಂದು ಹೇಳಿದರು.

ಕಡ್ಡಾಯಗೊಳಿಸಬೇಕಿದೆ: ಸ್ಕೌಟ್ಸ್ ಅಂಡ್ ಗೈಡ್ಸ್ ಅನ್ನು ಎಲ್ಲಾ ಶಾಲಾ–ಕಾಲೇಜುಗಳಲ್ಲಿ ಕಡ್ಡಾಯಗೊಳಿಸಿದರೆ ಇದರಿಂದ ದೇಶಕ್ಕೆ ಪರೋಕ್ಷವಾಗಿ ಬಹುದೊಡ್ಡ ಪ್ರಯೋಜನವಾಗುತ್ತದೆ ಎಂದು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ್ದೇನೆ. 40 ವರ್ಷಗಳ ಹಿಂದೆ ನಿಮ್ಮಂತೆ ನಾನೂ ಸ್ಕೌಟ್ ಧಿರಿಸಿನಲ್ಲಿ ಕುಳಿತಿದ್ದೆ. ಅದರ ಪರಿಣಾಮದಿಂದಲೇ ರಾಜಕೀಯ ಜಂಜಾಟವನ್ನು ಸಮರ್ಥವಾಗಿ ಎದುರಿಸಿ, ಸ್ಪೀಕರ್ ಆಗುವ ಹಂತಕ್ಕೆ ಬೆಳೆಯಲು ಸಾಧ್ಯವಾಗಿದೆ. ನೀವೆಲ್ಲಾ ಭವಿಷ್ಯದಲ್ಲಿ ಇನ್ನೂ ಒಳ್ಳೆಯ ಸ್ಥಾನದಲ್ಲಿರಲು ಸಾಧ್ಯ. ಸ್ಕೌಟ್ಸ್ ಅಂಡ್ ಗೈಡ್ಸ್‌ನಿಂದ ಉತ್ತಮ ಪ್ರಜೆಗಳಾಗಬಹುದು ಭೂಮಿಯೇ ಸ್ವರ್ಗ. ಪ್ರೀತಿ–ಸ್ನೇಹದಿಂದ ಇಲ್ಲಿ ನೆಮ್ಮದಿಯಿಂದ ಬದುಕಬೇಕು. ಪ್ರತಿಯೊಬ್ಬರು ಸಮಾಜ ಕಟ್ಟುವ ಕೆಲಸದಲ್ಲಿ ಕೈಜೋಡಿಸಬೇಕು ಎಂದರು.

ಸ್ತ್ರೀಶಕ್ತಿಯಿಂದ ಆರ್ಥಿಕ ಬೆಳವಣಿಗೆ: ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿದ ಇಸ್ರೋ ನಿವೃತ್ತ ವಿಜ್ಞಾನಿ ಅನುರಾಧಾ ಅವರು ಮಾತನಾಡಿ, ಭಾರತದ ಆರ್ಥಿಕತೆ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಆದರೆ ಪೂರ್ಣಪ್ರಮಾಣದಲ್ಲಿ ಮಹಿಳಾ ಸಹಭಾಗಿತ್ವಕ್ಕಾಗಿ ನೀತಿ–ನಿಯಮಗಳಲ್ಲಿರುವ ವ್ಯತ್ಯಾಸವನ್ನು ಸರಿಪಡಿಸುವ ಅಗತ್ಯವಿದೆ. ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಉತ್ತಮ ವಾತಾವರಣ ಸೃಷ್ಟಿಸಬೇಕಿದೆ. ಪ್ರೋತ್ಸಾಹದೊಂದಿಗೆ ವೃತ್ತಿಪರ ತರಬೇತಿಯನ್ನು ನೀಡಬೇಕಿದೆ ಎಂದು ಅಭಿಪ್ರಾಯಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಸಮಾರಂಭದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತರೂ ಆದ ಮಾಜಿ ಸಚಿವ ಪಿಜಿಆರ್ ಸಿಂಧ್ಯ, ಆಯುಕ್ತ ಎಂ.ಎ.ಖಾಲಿದ್, ರಾಜ್ಯ ಕೋಶಾಧಿಕಾರಿ ಟಿ.ಪ್ರಭಾಕರ್, ಕಾರ್ಯದರ್ಶಿ ಕೆ.ಗಂಗಪ್ಪಗೌಡ, ಸಹಾಯಕ ರಾಜ್ಯ ಆಯುಕ್ತ ಬಿ.ಕೆ. ಬಸವರಾಜ, ಉಪಾಧ್ಯಕ್ಷರಾದ ಪುಷ್ಪವಲ್ಲಿ, ಡಾ.ಗುರುಮೂರ್ತಿ, ನಟರಾಜ್, ಅಬ್ದುಲ್ ಜಮೀರ್ ಮತ್ತಿತರರು ಭಾಗವಹಿಸಿದ್ದರು.


ಸಿಂಧ್ಯಾ ನಿವೃತ್ತಿ ಘೋಷಣೆ, ಖಾದರ್‌ಗೆ ಜವಾಬ್ದಾರಿ

ಮೈಸೂರು: ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿಜಿಆರ್ ಸಿಂಧ್ಯಾ ನಿವೃತ್ತಿ ಘೋಷಿಸಿದರಲ್ಲದೆ, ಹೆಚ್ಚುವರಿ ಮುಖ್ಯ ಆಯುಕ್ತರಾಗಿ ಸ್ಪೀಕರ್ ಯು.ಟಿ.ಖಾದರ್ ಅವರನ್ನು ನೇಮಿಸಲಾಗಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಕಾರ್ಯಕರ್ತರ ಸಂಖ್ಯೆ ಸುಮಾರು 7 ಲಕ್ಷ ಮುಟ್ಟಿರುವುದು ಹೆಮ್ಮೆಯ ಸಂಗತಿ. ಪ್ರಸಕ್ತ ತಿಂಗಳಲ್ಲೇ ನೋಂದಣಿ ಪ್ರಕ್ರಿಯೆ ಮುಗಿಸುತ್ತೇವೆ. ನನಗೆ ವಯಸ್ಸು 70 ದಾಟಿದೆ. ಹಾಗಾಗಿ ಈ ಸ್ಥಾನದಲ್ಲಿ ಮುಂದುವರೆಯುವ ಇಚ್ಛೆಯಿಲ್ಲ. ಉತ್ಸಾಹಿಗಳ ಹಿಂದೆ ಇದ್ದು ಮಾರ್ಗದರ್ಶನ ಮಾಡಿದರೆ ಹೆಚ್ಚು ಗೌರವ. ಹಾಗಾಗಿ ಎರಡನೇ ಹಂತದ ಪ್ರಮುಖರನ್ನಾಗಿ ಹಲವರನ್ನು ಗುರುತಿಸಿದ್ದೇವೆ. ಈ ನಿಟ್ಟಿನಲ್ಲಿ ರಾಜ್ಯ ಸಮಿತಿಯಲ್ಲಿ ಚರ್ಚೆ ಮಾಡಿದ ಬಳಿಕ ರಾಷ್ಟ್ರೀಯ ಸಮಿತಿ ಅನುಮತಿಯೊಂದಿಗೆ ಅಡಿಷನ್ ಚೀಫ್ ಕಮೀಷ್ನರ್ ಆಗಿ ಯು.ಟಿ.ಖಾದರ್ ಅವರನ್ನು ನೇಮಿಸಲು ನಿರ್ಧರಿಸಲಾಗಿದೆ. ಇದಕ್ಕೆ ಅವರೂ ಒಪ್ಪಿಗೆ ಸೂಚಿಸಿದ್ದಾರೆ. ಸ್ಕೌಟ್–ಗೈಡ್ಸ್‌ನ ಅತ್ಯಂತ ಉನ್ನತ ಪ್ರಶಸ್ತಿಯನ್ನು ರಾಷ್ಟ್ರಪತಿಗಳಿಂದ ಸ್ವೀಕಾರ ಮಾಡಿರುವ ಅವರು ಎಲ್ಲಾ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲಿದ್ದಾರೆ ಎಂದು ಆಶಿಸಿದರು.

ಮೈಸೂರು ಮಿತ್ರ ಭಾನುವಾರ 9 ಮಾರ್ಚ್ 2025

ಇಸ್ರೇಲ್ ಮಹಿಳೆ ಸೇರಿ ಇಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ

ಇಬ್ಬರು ಕಾಮುಕರ ಬಂಧನ, ಮತ್ತೊಬ್ಬನಿಗಾಗಿ ಹುಡುಕಾಟ



ಭೀಭತ್ಸ್ಯ ಘಟನೆ ನಡೆದ ಸ್ಥಳ

ಕೊಪ್ಪಳ: ಕೊಪ್ಪಳದ ಗಂಗಾವತಿಯಲ್ಲಿ ನಡೆದ ವಿದೇಶಿ ಮಹಿಳೆ ಮತ್ತು ಸ್ಥಳೀಯ ಹೋಮ್ ಸ್ಟೇ ಒಡತಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ಮತ್ತೊಬ್ಬನಿಗಾಗಿ ಹುಡುಕಾಟ ನಡೆಸಿದ್ದಾರೆ.

ತುಂಗಭದ್ರ ಎಡದಂಡೆ ಕಾಲುವೆ ಬಳಿ ತಡರಾತ್ರಿಯವರೆಗೆ ಸಂಗೀತ ಕೇಳುತ್ತಾ ಕುಳಿತುಕೊಂಡಿದ್ದ ಇಸ್ರೇಲಿ ಮಹಿಳೆ ಮತ್ತು ಹೋಮ್ ಸ್ಟೇ ಒಡತಿ ಮೇಲೆ ಮೂವರು ಹಲ್ಲೆ ನಡೆಸಿ, ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಅಲ್ಲದೆ ಈ ವೇಳೆ ಸ್ಥಳದಲ್ಲಿದ್ದ ಇತರೆ ಮೂವರು ಪುರುಷರ ಮೇಲೂ ಹಲ್ಲೆ ಮಾಡಿ ಕಾಲುವೆಗೆ ತಳ್ಳಿದ್ದರು. ಈ ಪೈಕಿ ನಾಪತ್ತೆಯಾಗಿದ್ದ ಪ್ರವಾಸಿಯ ಶವ ಇಂದು ತುಂಗಭದ್ರಾ ಎಡದಂಡೆ ಕಾಲುವೆ ಬಳಿ ಪತ್ತೆಯಾಗಿದೆ. ಮೃತನನ್ನು ಒರಿಸ್ಸಾ ಮೂಲದ ಬೀಬಾಷಾ ಎಂದು ಗುರುತಿಸಲಾಗಿದೆ. ಈ ಮಧ್ಯೆ, ಗಂಗಾವತಿ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಪ್ರಕರಣ ದಾಖಲಿಸಿದ್ದು, ಸಂತ್ರಸ್ಥ ಮಹಿಳೆಯರ ದೂರಿನ ಆಧಾರದ ಮೇಲೆ ಶನಿವಾರ ಪೊಲೀಸರು ಗಂಗಾವತಿ ನಿವಾಸಿಗಳಾದ ಮಲ್ಲೇಶ್ ಅಲಿಯಾಸ್ ಹಂಡಿಮಲ್ಲ (22) ಮತ್ತು ಚೇತನ್ ಸಾಯಿ (21) ಎಂಬ ಆರೋಪಿಗಳನ್ನು ಬಂಧಿಸಿದ್ದಾರೆ. ಮೂರನೇ ಆರೋಪಿ ತಲೆಮರೆಸಿಕೊಂಡಿದ್ದಾನೆ.

ಅಂತೆಯೇ ವೈದ್ಯಕೀಯ ವರದಿಗಳು ಬಂದ ನಂತರ ಅತ್ಯಾಚಾರದ ಆರೋಪವನ್ನು ದೃಢೀಕರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ಪತ್ತೆಗೆ ತಂಡ ರಚನೆ: ಇನ್ನು ಆರೋಪಿಗಳನ್ನು ಪತ್ತೆಹಚ್ಚಲು ಪೊಲೀಸರು ಆರು ತಂಡಗಳನ್ನು ರಚಿಸಿದ್ದರು. ಇದೀಗ ಇಬ್ಬರ ಬಂಧನವಾಗಿದ್ದು ನಾಪತ್ತೆಯಾಗಿರುವ ಮೂರನೇ ಆರೋಪಿಗಾಗಿ ಶೋಧ ಕಾರ್ಯಾಚರಣೆ ನಡೆದಿದೆ.

ಪೆಟ್ರೋಲ್ ಗೆ 100 ರೂ ಕೊಡದಿದ್ದಕ್ಕೆ ಅತ್ಯಾಚಾರ: ಇನ್ನು ದುಷ್ಕರ್ಮಿಗಳು ಮದ್ಯ ಸೇವಿಸಿದ ನಂತರ ತಮ್ಮ ದ್ವಿಚಕ್ರ ವಾಹನದಲ್ಲಿ ಸುತ್ತುವ ಅಭ್ಯಾಸವನ್ನು ಹೊಂದಿದ್ದರು. ಇದೇ ರೀತಿ ಗುರುವಾರ ಅವರು ಸವಾರಿಯಲ್ಲಿದ್ದಾಗ ಪ್ರವಾಸಿಗರ ಗುಂಪನ್ನು ಭೇಟಿಯಾಗಿದ್ದಾರೆ. ಈ ವೇಳೆ ಮೊದಲು ಅವರು ಪೆಟ್ರೋಲ್ ಬಂಕ್ ಕುರಿತು ವಿಚಾರಿಸಿದ್ದು, ಪೆಟ್ರೋಲ್‌ಗೆ ಹಣ ನೀಡು ಎಂದು ಕೇಳಿದ್ದಾರೆ. ಪ್ರವಾಸಿಗರು ಹಣ ನೀಡಲಿಲ್ಲ ಎಂದು ಜಗಳ ತೆಗೆದಿದ್ದಾರೆ. ಬಳಿಕ ಅಲ್ಲಿದ್ದ ಪುರುಷರನ್ನು ಹೊಡೆದು ಅವರನ್ನು ನಾಲೆಗೆ ತಳ್ಳಿದ್ದಾರೆ. ನಂತರ ಇಸ್ರೇಲಿ ಮೂಲದ ಮಹಿಳೆ ಮತ್ತು ಹೋಮ್ ಸ್ಟೇ ಮಾಲಕಿಯ ಮೇಲೆ ಹಲ್ಲೆ ಮಾಡಿ ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ ಎಂದು ಹೇಳಲಾಗಿದೆ.

ನಾಲೆಗೆ ಬಿದ್ದ ಮೂರು ಪುರುಷರ ಪೈಕಿ ಇಬ್ಬರು ಈಜಿ ಜೀವ ಉಳಿಸಿಕೊಂಡಿದ್ದು, ಮತ್ತೊಬ್ಬ ಪ್ರವಾಸಿಗ ಈಜಲು ಬಾರದೇ ಸಾವನ್ನಪ್ಪಿದ್ದಾರೆ. ಈತನ ಮೃತದೇಹವನ್ನು ಪೊಲೀಸರು ಹೊರತೆಗೆದಿದ್ದಾರೆ.

ಕೆ.ಎಂ.ಹುಂಡಿ ಬಾಲಕ ನಾಪತ್ತೆ



ಮೈಸೂರು: ತಾಲೂಕಿನ ಕೆ.ಎಂ.ಹುಂಡಿ (ಕಡಕೊಳ) ಗ್ರಾಮದ ಎಂ.ವಿಶ್ವನಾಥಪ್ಪ ಅವರ ಮಗ ಎಂ.ವಿ.ಹೇಮೇಶ್ (14) ಫೆ.17ರಂದು ಬೆಳಗ್ಗೆ 5:30 ಸಮಯದಲ್ಲಿ ಶಾಲೆಗೆ ಹೋಗುವುದಾಗಿ ಹೇಳಿ ಹೊರ ಹೋದವನು ಇದುವರೆಗೂ ವಾಪಸ್ ಬಂದಿಲ್ಲ ಎಂದು ಹುಡುಗನ ತಂದೆ ವಿಶ್ವನಾಥಪ್ಪ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈತನ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ಸ್ಥಳೀಯ ಪೊಲೀಸ್ ಠಾಣೆಗಾಗಲಿ ಅಥವಾ ಹುಡುಗನ ತಂದೆ ವಿಶ್ವನಾಥಪ್ಪ ಮೊ.ಸಂ. 9620696864 ಸಂಪರ್ಕಿಸಲು ಕೋರಲಾಗಿದೆ.

ಮೈಸೂರು ಓಪನ್ ಪೋರಂನಲ್ಲಿ 'ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ವಿಶ್ವ ವ್ಯವಸ್ಥೆಗೆ ಸವಾಲು' ಕುರಿತ ಚರ್ಚಾಕೂಟ

ಭವಿಷ್ಯದಲ್ಲಿ ಟ್ರಂಪ್ ನಿರ್ಧಾರಗಳು ಅತ್ಯಂತ ಪರಿಣಾಮಕಾರಿಯಾಗಿರುತ್ತೆ...

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅಭಿಮತ

- ಟ್ರಂಪ್ ರಾಜಕಾರಣಿ ಮಾತ್ರವಲ್ಲ, ಒಬ್ಬ ಯಶಸ್ವಿ ಉದ್ಯಮಿ
- ಅಕ್ರಮ ವಲಸಿಗರಿಗೆ ನಿರ್ಬಂಧ
- ಪರಿಣಾಮಕಾರಿ ಆಡಳಿತಕ್ಕಾಗಿ ತಂಡಕ್ಕೆ ಬುದ್ಧಿವಂತರ ಆಯ್ಕೆ
- ಅಮೆರಿಕಾ ಪೌರತ್ವ ಬೇಕಿದ್ದರೆ 5 ಮಿಲಿಯನ್ ಡಾಲರ್ ಕೊಡಬೇಕಿದೆ





ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಕಲ್ಪ ಕ್ಷೇತ್ರ ಸಭಾಂಗಣದಲ್ಲಿ ಶನಿವಾರ ಮೈಸೂರು ಓಪನ್ ಫೋರಂ ಆಯೋಜಿಸಿದ್ದ 'ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ವಿಶ್ವ ವ್ಯವಸ್ಥೆಗೆ ಸವಾಲು' ಕುರಿತು ಆಯೋಜಿಸಿದ್ದ ಚರ್ಚಾಕೂಟದಲ್ಲಿ (ಎಡದಿಂದ) 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ಭಾರತ ಸರ್ಕಾರದ ಕ್ಯಾಬಿನೆಟ್ ಸೆಕ್ರೆಟರಿಯೇಟ್‌ನ ನಿವೃತ್ತ ಜಂಟಿ ಕಾರ್ಯದರ್ಶಿ ರವಿ ಜೋಷಿ, ಸಾಮಾಜಿಕ ಹೋರಾಟಗಾರರೂ ಆದ ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ ಮಾತನಾಡಿದರು. ಚರ್ಚಾಕೂಟದಲ್ಲಿ ಭಾಗವಹಿಸಿದ್ದ ಗಣ್ಯರನ್ನು (ಬಲಚಿತ್ರ) ಕಾಣಬಹುದು.

ಮೈಸೂರು, ಮಾ.8(ಬಿಎಲ್‌ಯು)– ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮುಂದಿನ ನಾಲ್ಕು ವರ್ಷಗಳ ಅಧಿಕಾರಾವಧಿಯಲ್ಲಿ ಕೈಗೊಳ್ಳುವ ಹಲವು ನಿರ್ಧಾರಗಳು ಅತ್ಯಂತ ಪರಿಣಾಕಾರಿಯಾಗಿರುತ್ತವೆ ಎಂದು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಡಾ. ಕೆ.ಬಿ.ಗಣಪತಿ (ಕೆಬಿಜಿ) ಅವರು ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಕಲ್ಪ ಕ್ಷೇತ್ರ ಸಭಾಂಗಣದಲ್ಲಿ ಇಂದು ಅಮೆರಿಕಾ 'ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ವಿಶ್ವ ವ್ಯವಸ್ಥೆಗೆ ಸವಾಲು' ಕುರಿತು ಮೈಸೂರು ಓಪನ್ ಫೋರಂ ಆಯೋಜಿಸಿದ್ದ ಚರ್ಚಾಕೂಟದಲ್ಲಿ ಮಾತನಾಡಿದ ಅವರು, ಡೊನಾಲ್ಡ್ ಟ್ರಂಪ್ ಅವರ ಆಡಳಿತ ವೈಖರಿ ಕುರಿತಂತೆ ವಿಶ್ಲೇಷಣೆ ಮಾಡುವ ಮೊದಲು ಅವರ ಆರಂಭದ ಜೀವನ, ವಿದ್ಯಾರ್ಹತೆ, ರಾಜಕೀಯ ಹೆಜ್ಜೆ ಗುರುತುಗಳ ಬಗ್ಗೆ ತಿಳಿದುಕೊಳ್ಳುವುದು ಅತ್ಯವಶ್ಯಕ.

ಎರಡನೇ ಬಾರಿ ಅಮೆರಿಕಾದ ಅಧ್ಯಕ್ಷರಾಗಿ ಆಯ್ಕೆಗೊಂಡಿರುವ ಡೊನಾಲ್ಡ್ ಟ್ರಂಪ್ ಒಬ್ಬ ಯಶಸ್ವಿ ಉದ್ಯಮಿ ಕೂಡ ಆಗಿದ್ದಾರೆ. ಅಮೆರಿಕಾ ಸೇರಿದಂತೆ ವಿಶ್ವದ ಹಲವೆಡೆ ಇರುವ ಟ್ರಂಪ್ ಟವರ್‌ಗಳೇ ಇದನ್ನು ಸಾರಿ–ಸಾರಿ ಹೇಳುತ್ತವೆ. ಮೊದಲ ಬಾರಿ ಅಮೆರಿಕಾದ ಅಧ್ಯಕ್ಷರಾಗಿ ಅಧಿಕಾರ ನಡೆಸಿದ ಡೊನಾಲ್ಡ್ ಟ್ರಂಪ್ ಅವರ ಕಾರ್ಯವೈಖರಿ ಬಗ್ಗೆ ವಿಮರ್ಶೆ ಮಾಡಿದ ಕೆಬಿಜಿ, ಟ್ರಂಪ್ ಅವರ ಚಿಂತನಾ ಕ್ರಮದ ಬಗ್ಗೆ ಹಲವು ಮಾಹಿತಿ ಹಂಚಿಕೊಂಡರು.

ಟ್ರಂಪ್ ಅವರ ಮುಂದಿನ ಆಡಳಿತ ಸುಧಾರಣೆಗಳು ಬಹಳ ಪರಿಣಾಮಕಾರಿಯಾಗಿರುತ್ತವೆ. ಆಟದಲ್ಲಿ ಜಯಗಳಿಸಲು ಒಬ್ಬ ಕ್ಯಾಪ್ಟನ್ ಇನ್ನಿತರ ಬುದ್ಧಿವಂತ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುವಂತೆ ಡೊನಾಲ್ಡ್ ಟ್ರಂಪ್ ಕೂಡ ತನ್ನ ತಂಡಕ್ಕೆ ಬುದ್ಧಿವಂತರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈ ಮೂಲಕ ಪರಿಣಾಮಕಾರಿ ಆಡಳಿತ ಸುಧಾರಣೆ ತರಲು ಮುಂದಾಗಿದ್ದಾರೆ ಎಂದು ಹೇಳಿದರು.

ಎರಡನೇ ಬಾರಿ ಅಧ್ಯಕ್ಷರಾಗಿ ಆಯ್ಕೆಗೊಂಡ ಆರಂಭದಲ್ಲಿ ಟ್ರಂಪ್ ಕೈಗೊಂಡಿರುವ ವಲಸೆ ನೀತಿ, ಅಮೆರಿಕಾ ಫಸ್ಟ್, ನಾಗರಿಕ ಹಕ್ಕು ಸೇರಿದಂತೆ ಅವರ ಇತ್ತೀಚಿನ ರಾಜತಾಂತ್ರಿಕತೆ ಇದನ್ನು ಸ್ಪಷ್ಟಪಡಿಸುತ್ತದೆ.

ಅಮೆರಿಕಾಕ್ಕೆ ವಲಸಿಗರಿಗೆ ನಿರ್ಬಂಧ ಹೇರುವ ನಿಟ್ಟಿನಲ್ಲಿ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳೂ ಕೂಡ ಡೊನಾಲ್ಡ್ ಟ್ರಂಪ್ ಅವರ ಆಡಳಿತ ಸುಧಾರಣೆಗೆ ಹಿಡಿದ ಕೈಗನ್ನಡಿಯಾಗಿದೆ. ಅಮೆರಿಕಾ ಗಡಿ ನುಸುಳಿದವರು ಅವರಾಗೇ ವಾಪಸು ಹೋಗಲಿ ಎಂಬುದು ಟ್ರಂಪ್ ಅವರ ಗಟ್ಟಿ ನಿರ್ಧಾರದ ಚಿಂತನಾ ಶೈಲಿ ಎಂದು ಹೇಳಿದರು.

ಈ ಮೊದಲು ವಲಸೆ ಬಂದ ಗರ್ಭಿಣಿಯರು ಅಮೆರಿಕಾದಲ್ಲಿ ಮಗುವಿಗೆ ಜನ್ಮ ನೀಡಿ, ಅಲ್ಲಿನ ಪೌರತ್ವ ಪಡೆಯುವ ಬುದ್ಧಿವಂತಿಕೆ ಪ್ರದರ್ಶಿಸುತ್ತಿದ್ದರು. ಇದಕ್ಕೂ ಈಗ ನಿರ್ಬಂಧ ಹೇರಿರುವ ಟ್ರಂಪ್, ಒಂದು ವೇಳೆ ಅಮೆರಿಕಾದ ಪೌರತ್ವ ಪಡೆಯಲೇಬೇಕೆಂದರೆ 5 ಮಿಲಿಯನ್ ಡಾಲರ್ ಪಾವತಿಸಿ, ಗೋಲ್ಡ್ ಕಾರ್ಡ್ ಪಡೆಯುವಂತೆ ತಾಕೀತು ಮಾಡಿದ್ದಾರೆ. ಸೋವಿಯತ್ ಯೂನಿಯನ್ ವಿಸರ್ಜನೆಗೊಂಡ ನಂತರ ರೂಪುಗೊಂಡ ರಷ್ಯಾ ಹಾಗೂ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುತ್ತಿರುವ ಚೈನಾ ದೇಶಗಳು ಅಮೆರಿಕಾದ ಪ್ರಭುತ್ವಕ್ಕೆ ದೊಡ್ಡ ಸವಾಲಾಗಿವೆ. ಈ ಹಿನ್ನೆಲೆ ಸಂಬಂಧ ಆಧಾರಿತ ವಿದೇಶಿ ರಾಜತಾಂತ್ರಿಕ ನೀತಿಯಲ್ಲಿ ಟ್ರಂಪ್ ಹಲವು ಮಾರ್ಪಾಡು ಮಾಡಿದ್ದು, ಇದು ಅವರ ಸೂಕ್ಷ್ಮ ಆಡಳಿತ ನೀತಿಗೆ ಸ್ಪಷ್ಟ ನಿದರ್ಶನವಾಗಿದೆ ಎಂದರು.

ಇದೇ ವೇಳೆ ಡಾ.ಕೆ.ಬಿ.ಗಣಪತಿ ಅವರು, ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹಿಂದಿನ, ಈಗಿನ ಹಾಗೂ ಭವಿಷ್ಯತ್ತಿನ ಆಡಳಿತದ ಬಗ್ಗೆ ಅವಲೋಕನ ಮಾಡಿದರು.

ಇದೇ ವೇಳೆ ಮಾತನಾಡಿದ ಸಾಮಾಜಿಕ ಹೋರಾಟಗಾರ, ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ ಅವರು, ಎರಡನೇ ವಿಶ್ವ ಮಹಾ ಯುದ್ಧದ ಪರಿಣಾಮ, ನ್ಯಾಟೊ ರಚನೆ, ಇದರ ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾದ ಶಿಥಿಲಾವಸ್ಥೆ ಬಗ್ಗೆ ವಿಶ್ಲೇಷಿಸಿದರು.

ಎರಡನೇ ಮಹಾಯುದ್ಧದ ನಂತರ ವಿವಿಧ ರಾಷ್ಟ್ರಗಳು ವಾಸ್ತವಿಕ ನೆಲೆಗಟ್ಟಿನಲ್ಲಿ ಜಾಗತಿಕವಾಗಿ ಆರು ಅಂಶಗಳಿಗೆ ಒತ್ತು ನೀಡಿವೆ. ಜನಸಂಖ್ಯೆ ನಿಯಂತ್ರಣ, ಆರ್ಥಿಕ ಬೆಳವಣಿಗೆ, ಬಡತನ ನಿರ್ಮೂಲನೆ, ಯುದ್ಧ ಹಾಗೂ ಸಂಘರ್ಷಮುಕ್ತ ವಾತಾವರಣ, ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ವಾಣಿಜ್ಯ ಬೆಳವಣಿಗೆ, ಹವಾಮಾನ ವೈಪರೀತ್ಯ ಹಾಗೂ ಜಾಗತಿಕ ತಾಪಮಾನ ಮುಕ್ತ ಮಾಡುವ ಕುರಿತಂತೆ ಬದ್ಧತೆ ಪ್ರದರ್ಶಿಸಿವೆ ಎಂದು ಒಂಬತ್ಕೆರೆ ತಿಳಿಸಿದರು.

ಭಾರತ ಸರ್ಕಾರದ ಕ್ಯಾಬಿನೆಟ್ ಸೆಕ್ರೇಟರಿಯೇಟ್‌ನ ನಿವೃತ್ತ ಜಂಟಿ ಕಾರ್ಯದರ್ಶಿ ರವಿ ಜೋಷಿ ಅವರು ಮಾತನಾಡಿ, ಜಾಗತಿಕ ಮಟ್ಟದಲ್ಲಿನ ನಾನಾ ಸವಾಲುಗಳ ಬಗ್ಗೆ ವಿಶ್ಲೇಷಣೆ ಮಾಡಿದರು. ಚರ್ಚಾಕೂಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ ಹಲವು ಗಣ್ಯರು ಭಾಗಿಯಾಗಿದ್ದರು.

ಸಿದ್ದರಾಮಯ್ಯ ಸರ್ಕಾರ ಸಾಲ ಮಾಡಿರುವುದೇ ದೊಡ್ಡ ತಪ್ಪೆಂದು ಬಿಜೆಪಿ–ಜೆಡಿಎಸ್ ಬಿಂಬಿಸುತ್ತಿವೆ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಕಿಡಿ



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮಾ.8(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ಸಾಲ ಮಾಡಿರುವುದೇ ದೊಡ್ಡ ತಪ್ಪು ಎಂದು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಜನರಿಗೆ ತಪ್ಪು ಅಭಿಪ್ರಾಯ ಮೂಡಿಸುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 1947ರಿಂದ 2013ರಲ್ಲಿ 1.70 ಲಕ್ಷ ಕೋಟಿ ಸಾಲವಿತ್ತು ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆ ಆದ ಸಂದರ್ಭದಲ್ಲಿ 2013ರಿಂದ 2018ರವರೆಗೆ ಒಟ್ಟು 2.85 ಲಕ್ಷ ಕೋಟಿ ಸಾಲ ಮಾಡಿದರು. ಆದರೆ ಬಿಜೆಪಿ ಮತ್ತು ಜೆಡಿಎಸ್ ಸರ್ಕಾರದ ಅವಧಿಯಲ್ಲಿ 5.75 ಲಕ್ಷ ಕೋಟಿ ಸಾಲ ಏರಿಕೆ ಮಾಡಿದರು ಎಂದು ಹೇಳಿದರು.

ಸಿದ್ದರಾಮಯ್ಯ ಎರಡನೇ ಬಾರಿಗೆ ಅಧಿಕಾರ ವಹಿಸಿಕೊಂಡಾಗ ಕಳೆದ ವರ್ಷ 65 ಸಾವಿರ, ಮತ್ತೆ ಈಗ 1.15 ಲಕ್ಷ ಕೋಟಿ ಸಾಲಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಆದರೆ ವಾಸ್ತವತೆಯನ್ನು ಮರೆಮಾಚುತ್ತಿರುವ ವಿರೋಧ ಪಕ್ಷಗಳು ಸಿದ್ದರಾಮಯ್ಯ ಸರ್ಕಾರ ಸಾಲದ ಹೊರೆ ಹೊರೆಸುತ್ತಿದೆ ಎಂದು ಜನರಿಗೆ ತಪ್ಪು ಸಂದೇಶ ನೀಡುತ್ತಿವೆ. ಆರೋಗ್ಯಕರ ಟೀಕೆಗಳಾದರೆ ಸ್ವಾಗತಿಸುತ್ತೇವೆ. ಆದರೆ ರಾಜಕೀಯ ಲಾಭಕ್ಕಾಗಿ ಆರೋಪ ಮಾಡಿದರೆ ಒಪ್ಪಲು ಹೇಗೆ ಆಗುತ್ತದೆ ಎಂದು ಪ್ರಶ್ನಿಸಿದರು.


ಕಾಂಗ್ರೆಸ್ ಸರ್ಕಾರ ಮುಸ್ಲಿಂ ತುಷ್ಟೀಕರಣದ ಬಜೆಟ್ ಮಂಡಿಸಿದೆ ಎಂದು ಬಿಜೆಪಿ ಆರೋಪಿಸಿದೆ. ಈ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ 4,100 ಕೋಟಿ ನೀಡಲಾಗಿದೆ. ಜನಸಂಖ್ಯೆ ಆಧಾರದ ಮೇಲೆ ಅಲ್ಪಸಂಖ್ಯಾತರಿಗೆ 60 ಸಾವಿರ ಕೋಟಿ ಕೊಡಬೇಕಾಗುತ್ತದೆ ಎಂದು ಸ್ಪಷ್ಟನೆ ನೀಡಿದ ಲಕ್ಷ್ಮಣ, ಮುಸ್ಲಿಂರ ಬಗ್ಗೆ ಮಾತನಾಡದೆ ಇದ್ದರೆ ಬಿಜೆಪಿಯವರಿಗೆ ನಿದ್ರೆ ಬರಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಹಿಂದೆ ಆಡಳಿತ ನಡೆಸಿದ ಬಿಜೆಪಿ ಸರ್ಕಾರದಲ್ಲಿ ಜಿಡಿಪಿ ಶೇಕಡ 6 ಇದ್ದರೆ, ಕಾಂಗ್ರೆಸ್ ಸರ್ಕಾರದ ಜಿಡಿಪಿ ಶೇಕಡ 7.4 ಇದೆ. ಈ ಮೂಲಕ ಬಿಜೆಪಿ ರಾಜ್ಯವನ್ನು ಅಧೋಗತಿಗೆ ತೆಗೆದುಕೊಂಡು ಹೋಗಿತ್ತು. ಆದರೆ ಈಗ ಸಿದ್ದರಾಮಯ್ಯ ಅವರು ಇದನ್ನು ತಹಬದಿಗೆ ತಂದಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಹಿಂದೆ ಇದ್ದ ಡಬಲ್ ಇಂಜಿನ್ ಸರ್ಕಾರ ಕರ್ನಾಟಕವನ್ನು ಸಂಕಷ್ಟಕ್ಕೆ ಸಿಲುಕಿಸಿತ್ತು. 40 ಸಾವಿರ ಕೋಟಿ ಗುತ್ತಿಗೆದಾರರ ಬಾಕಿ ಹೊರೆ ಹೊರೆಸಿತ್ತು. 15ನೇ ಹಣಕಾಸು ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಶೇಕಡ 23ರಷ್ಟು ಅನುದಾನ ಕಡಿತ ಮಾಡಿದ್ದು, ನಮಗೆ ನ್ಯಾಯಯುತವಾಗಿ ಸಲ್ಲಬೇಕಾದ ಹಣ ನೀಡಿಲ್ಲ. ಈ ಮೂಲಕ ತಾರತಮ್ಯ ಮಾಡುತ್ತಿರುವ ಕೇಂದ್ರದ ಎನ್‌ಡಿಎ ಸರ್ಕಾರ ಕರ್ನಾಟಕಕ್ಕೆ ಅನ್ಯಾಯ ಮಾಡಿದೆ ಎಂದು ಆಪಾದಿಸಿದರು.

ಈ ಬಾರಿ ಸಿದ್ದರಾಮಯ್ಯ ಮಂಡಿಸಿರುವ ಬಜೆಟ್‌ನಲ್ಲಿ ಮೈಸೂರಿಗೆ 24 ಯೋಜನೆಗಳಲ್ಲಿ 1,100 ಕೋಟಿ ನೀಡಿದ್ದಾರೆ. ಗ್ರೇಟರ್ ಮೈಸೂರು ಯೋಜನೆಗೂ ಒಪ್ಪಿಗೆ ಸೂಚಿಸಿದ್ದಾರೆ. ತಾಕತ್ತಿದ್ದರೆ ಅಂಕಿ ಅಂಶ ಇಟ್ಟುಕೊಂಡು ಚರ್ಚೆಗೆ ಬಂದರೆ ಅವರ ತಪ್ಪುಗಳನ್ನು ತಿಳಿಸುತ್ತೇನೆ ಎಂದು ಲಕ್ಷ್ಮಣ ಸವಾಲು ಹಾಕಿದರು. ಪತ್ರಿಕಾಗೋಷ್ಠಿಯಲ್ಲಿ ಮೈಸೂರು ನಗರ ಅಧ್ಯಕ್ಷ ಆರ್.ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಪ್ರಧಾನ ಕಾರ್ಯದರ್ಶಿ ಶಿವಣ್ಣ ಉಪಸ್ಥಿತರಿದ್ದರು.

ಉದ್ಯಮಿಗಳಿಗೆ ಪ್ರೇರಣೆ



ಮೈಸೂರಲ್ಲಿ ಶನಿವಾರ ನಡೆದ 'BUILD W/ AI DAY' ಕಾರ್ಯಕ್ರಮದಲ್ಲಿ ನಕ್ಷಾ ಬಿಲ್ಡರ್ಸ್ ಸಿಇಓ ವಿನಯ್ ಶಂಕರ್ ಅವರು ವ್ಯಾಪಾರ ಉದ್ಯಮಶೀಲತೆ ಮತ್ತು ಸವಾಲುಗಳನ್ನು ಎದುರಿಸುವ ಬಗ್ಗೆ ಬಿಸಿನೆಸ್ ಮಾಲೀಕರು ಹಾಗೂ ಸ್ಟಾರ್ಟಪ್ ಉದ್ಯಮಿಗಳು ಮಹತ್ವದ ಮಾಹಿತಿ ನೀಡಿದರು. ಇದೇ ವೇಳೆ ಲಾಭ–ನಷ್ಟಗಳು, ದೀರ್ಘಕಾಲೀನ ಸ್ಥಿರತೆ, ಹೊಸತನ್ನು ಆವಿಷ್ಕರಿಸುವ ತಂತ್ರಗಳ ವಿಚಾರವಾಗಿಯೂ ವಿಷಯ ಹಂಚಿಕೊಂಡರು. ಎಐ ಆಧಾರಿತ ಬಿಸಿನೆಸ್ ಪರಿಹಾರಗಳು, ತಜ್ಞರ ಸಲಹೆಗಳನ್ನು ಇದೇ ವೇಳೆ ಪ್ರಸ್ತುತಪಡಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಮುಸ್ಲಿಂ ತುಷ್ಟೀಕರಣದ ವಿರುದ್ಧ ಬಿಜೆಪಿ ಪ್ರತಿಭಟನೆ



ರಾಜ್ಯ ಕಾಂಗ್ರೆಸ್ ಸರ್ಕಾರದ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ತುಷ್ಟೀಕರಣ ಮಾಡಿದ್ದಾರೆಂದು ಆರೋಪಿಸಿ ಮೈಸೂರಿನಲ್ಲಿ ಶನಿವಾರ ಬಿಜೆಪಿ ಕಾರ್ಯಕರ್ತರು ಎತ್ತಿನ ಗಾಡಿಯಲ್ಲಿ ಸಾಗುವ ಮೂಲಕ ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.8(ಬಿಎಲ್‌ಯು)– ಮುಸ್ಲಿಂರ ತುಷ್ಟೀಕರಣ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಹಲಾಲ್ ಬಜೆಟ್ ಮಂಡಿಸಿದೆ ಎಂದು ಆರೋಪಿಸಿ ಮೈಸೂರಿನಲ್ಲಿ ಬಿಜೆಪಿ ಕಾರ್ಯಕರ್ತರು ಎತ್ತಿನ ಗಾಡಿಯಲ್ಲಿ ಸಾಗುವ ಮೂಲಕ ಪ್ರತಿಭಟನೆ ನಡೆಸಿದರು.

ನಗರದ ರಾಮಸ್ವಾಮಿ ವೃತ್ತದಿಂದ ಜಿಲ್ಲಾ ಪಂಚಾಯತ್ ಕಚೇರಿವರೆಗೆ ಮೆರವಣಿಗೆಯಲ್ಲಿ ಸಾಗಿದ ಬಿಜೆಪಿ ಕಾರ್ಯಕರ್ತರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಈ ಬಾರಿ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 42 ಸಾವಿರ ಕೋಟಿ ರೂಪಾಯಿ ಅನುದಾನ ಘೋಷಣೆ ಮಾಡಿದ್ದಾರೆ. ಆದರೆ ಇದರಲ್ಲಿ 13 ಸಾವಿರ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಟ್ಟ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಂಡರೆ ಬಿಜೆಪಿ ರಾಜ್ಯಾದ್ಯಂತ ಹೋರಾಟ ರೂಪಿಸಲಿದೆ ಎಂದು ಎಚ್ಚರಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಸೇರಿದಂತೆ ಹಲವು ಮುಖಂಡರು ಪ್ರತಿಭಟನೆಯಲ್ಲಿದ್ದರು.

ದೇಶ - ವಿದೇಶ

ರಷ್ಯಾದ ಮೇಲೆ ಹೊಸ ನಿರ್ಬಂಧಕ್ಕೆ ಮುಂದಾದ ಟ್ರಂಪ್



ವಾಷಿಂಗ್ಟನ್: ಉಕ್ರೇನ್‌ಗೆ ಮಿಲಿಟರಿ ನೆರವು ಬಂದ್ ಮಾಡಿದ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾದ ಮೇಲೆ ಹೊಸ ನಿರ್ಬಂಧ ಮತ್ತು ಸುಂಕದ ಬೆದರಿಕೆ ಹಾಕಿದ್ದಾರೆ.

ರಷ್ಯಾ ಇದೀಗ ಯುದ್ಧಭೂಮಿಯಲ್ಲಿ ಉಕ್ರೇನ್ ಅನ್ನು ಸಂಪೂರ್ಣವಾಗಿ ಬಡಿಯುತ್ತಿದೆ ಎಂಬ ಅಂಶವನ್ನು ಆಧರಿಸಿ ಕದನ ವಿರಾಮ ಮತ್ತು ಶಾಂತಿಯ ಅಂತಿಮ ಇತ್ಯರ್ಥ ಒಪ್ಪಂದ ಆಗುವವರೆಗೆ ರಷ್ಯಾದ ಮೇಲೆ ದೊಡ್ಡ ಪ್ರಮಾಣದ ಬ್ಯಾಂಕಿಂಗ್ ನಿರ್ಬಂಧಗಳು ಮತ್ತು ಸುಂಕಗಳನ್ನು ಹಾಕಲಾಗುವುದು ಎಂದು ಟ್ರಂಪ್ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ರಷ್ಯಾ ಮತ್ತು ಉಕ್ರೇನ್ ಈಗ ತಡಮಾಡದೆ ಮಾತುಕತೆ ನಡೆಸಿ ಎಂದು ಹೇಳಿದ್ದಾರೆ. ಉಕ್ರೇನ್‌ನ ಇಂಧನ ಮೂಲ ಸೌಕರ್ಯದ ಮೇಲೆ ರಷ್ಯಾ ಶುಕ್ರವಾರ ಪ್ರಮುಖ ಡ್ರೋನ್ ಮತ್ತು ಕ್ಷಿಪಣಿ ದಾಳಿಯನ್ನು ನಡೆಸಿದ ನಂತರ ಟ್ರಂಪ್ ಬೆದರಿಕೆ ಹಾಕಿದ್ದಾರೆ. ಕೆಲದಿನಗಳ ಹಿಂದೆ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಜೊತೆಗಿನ ವಾಕ್ಸಮರದ ನಂತರ ಟ್ರಂಪ್ ಆಡಳಿತ ಉಕ್ರೇನ್‌ಗೆ ಸೇನಾ ನೆರವನ್ನು ಸ್ಥಗಿತಗೊಳಿಸಿದ್ದರು.

ಇನ್ಮುಂದೆ ಕನ್ಫರ್ಮ್ ಟಿಕೆಟ್ ಇದ್ದರೆ ರೈಲು ನಿಲ್ದಾಣಕ್ಕೆ ಪ್ರವೇಶ



ನವದೆಹಲಿ: ಜನದಟ್ಟಣೆ ತಡೆಗಟ್ಟುವ ನಿಟ್ಟಿನಲ್ಲಿ ಹೆಜ್ಜೆ ಇರಿಸಿರುವ ಭಾರತೀಯ ರೈಲ್ವೆ ಇಲಾಖೆ ಬೆಂಗಳೂರು ಸೇರಿದಂತೆ ದೇಶದ 60 ಅತೀ ಹೆಚ್ಚು ಪ್ರಯಾಣಿಕರ ಸಂಚಾರ ಇರುವ ರೈಲು ನಿಲ್ದಾಣಗಳಲ್ಲಿನ ಪ್ಲಾಟ್‌ಫಾರ್ಮ್ ಪ್ರವೇಶಕ್ಕೆ 'ಕನ್ಫರ್ಮ್ ಟಿಕೆಟ್' ಕಡ್ಡಾಯಗೊಳಿಸಲು ಮುಂದಾಗಿದೆ. ಈ ಕುರಿತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಉನ್ನತ ಅಧಿಕಾರಿಗಳ ಜತೆಗೆ ಮಹತ್ವದ ಸಭೆ ನಡೆಸಿದ್ದಾರೆ. ರಿಸರ್ವ್ಡ್ ಟಿಕೆಟ್ (ಕಾಯ್ದಿರಿಸಲಾದ) ಖಾತ್ರಿಪಟ್ಟ ಪ್ರಯಾಣಿಕರಿಗೆ ಮಾತ್ರವೇ ಪ್ಲಾಟ್‌ಫಾರ್ಮ್‌ಗಳ ಪ್ರವೇಶಕ್ಕೆ ಅನುಮತಿ ನೀಡಲಾಗುವುದು. ಟಿಕೆಟ್ ಇಲ್ಲದವರು ಅಥವಾ ವೇಟಿಂಗ್ ಲಿಸ್ಟ್‌ನಲ್ಲಿ ಇರುವ ಪ್ರಯಾಣಿಕರು ಹಾಗೂ ಅವರ ಜತೆಗೆ ಆಗಮಿಸಿದವರು 'ಕಾಯುವಿಕೆ ಕೊಠಡಿ'ಯಲ್ಲಿ (ವೇಟಿಂಗ್ ರೂಮ್) ಇರಬೇಕಾಗುತ್ತದೆ. ಜತೆಗೆ ರೈಲು ನಿಲ್ದಾಣ ಪ್ರವೇಶಕ್ಕೆ ಇರುವ ಅನಧಿಕೃತ ಪ್ರವೇಶಗಳೆಲ್ಲವನ್ನೂ ಗುರುತಿಸಿ ಮುಚ್ಚಲಾಗುವುದು. ಈಗಾಗಲೇ ಹೊಸದಿಲ್ಲಿ, ಆನಂದ್ ವಿಹಾರ್, ವಾರಾಣಸಿ, ಅಯೋಧ್ಯೆ ಮತ್ತು ಪಟನಾ ರೈಲು ನಿಲ್ದಾಣಗಳಲ್ಲಿ ಪ್ರಾಯೋಗಿಕವಾಗಿ ಹೊಸ ವ್ಯವಸ್ಥೆ ಜಾರಿ ಮಾಡಲಾಗಿದೆ.

ಸುರಕ್ಷಿತ ದೇಶದ ಪೌರತ್ವ ಪಡೆದ ಲಲಿತ್ ಮೋದಿ



ಲಂಡನ್: ಇಂಡಿಯನ್ ಪ್ರೀಮಿಯರ್ ಲೀಗ್‌ನ ಮಾಜಿ ಮುಖ್ಯಸ್ಥ ಲಲಿತ್ ಮೋದಿ ಅವರು ತಮ್ಮ ಭಾರತೀಯ ಪಾಸ್‌ಪೋರ್ಟ್ ಅನ್ನು ಲಂಡನ್‌ನಲ್ಲಿರುವ ಭಾರತೀಯ ಹೈಕಮಿಷನ್‌ಗೆ ಸರೆಂಡರ್ ಮಾಡಿದ್ದಾರೆ ಎಂದು ವರದಿಯಾಗಿದೆ. ಭಾರತೀಯ ತನಿಖಾ ಸಂಸ್ಥೆಗಳು ಆರ್ಥಿಕ ಅಪರಾಧಿ ಎಂದು ಘೋಷಿಸಿರುವ ಮೋದಿ, ಪೆಸಿಫಿಕ್ ಮಹಾಸಾಗರದ ದ್ವೀಪ ರಾಷ್ಟ್ರವಾದ ವನವಾಟುವಿನ ಪೌರತ್ವವನ್ನು ಪಡೆದಿದ್ದಾರೆ.


ಈ ಬೆಳವಣಿಗೆಯನ್ನು ದೃಢಪಡಿಸಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಲಲಿತ್ ಮೋದಿ ಅವರು ಲಂಡನ್‌ನಲ್ಲಿರುವ ಭಾರತೀಯ ಹೈಕಮಿಷನ್‌ನಲ್ಲಿ ತಮ್ಮ ಪಾಸ್‌ಪೋರ್ಟ್ ಅನ್ನು ಸರೆಂಡರ್ ಮಾಡಲು ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳಿದ್ದಾರೆ. ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ಕಾರ್ಯವಿಧಾನಗಳ ಬೆಳಕಿನಲ್ಲಿ ಈ ಅರ್ಜಿಯನ್ನು ಪರಿಶೀಲಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು. ಅವರು ವನವಾಟು ಪೌರತ್ವವನ್ನು ಪಡೆದಿರುವುದು ನಮಗೆ ತಿಳಿದಿದೆ ಎಂದು ಜೈಸ್ವಾಲ್ ಹೇಳಿದರು.

ಮಣಿಪುರದ ಮುಕ್ತ ಚಳುವಳಿಯ ಮೊದಲ ದಿನವೇ ಘರ್ಷಣೆ



ಇಂಫಾಲ: ಸುಮಾರು 2 ವರ್ಷಗಳ ನಂತರ ಸಂಘರ್ಷ ಪೀಡಿತ ಮಣಿಪುರ ರಾಜ್ಯಾದ್ಯಂತ ಸಾರ್ವಜನಿಕ ಸಂಚಾರವನ್ನು ಪುನಃಸ್ಥಾಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ ಮೊದಲ ದಿನವೇ ಹಿಂಸಾಚಾರ ಭುಗಿಲೆದ್ದಿದೆ. ಇದರಿಂದ ಗಲಭೆ ಪೀಡಿತ ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ಮತ್ತೆ ಮುನ್ನೆಲೆಗೆ ಬಂದಿದ್ದು, ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯಲ್ಲಿ ಹಲವು ಬಸ್ಸುಗಳಿಗೆ ಬೆಂಕಿ ಹಚ್ಚಲಾಗಿದ್ದು, ರಸ್ತೆಗಳನ್ನು ನಿರ್ಬಂಧಿಸಲಾಗಿದೆ ಎಂದು ವರದಿಯಾಗಿದೆ. ಕಳೆದ ವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿಶೇಷ ನಿರ್ದೇಶನದ ಮೇರೆಗೆ ಮೈತೇಯಿ ಮತ್ತು ಕುಕಿ ಪ್ರಾಬಲ್ಯವಿರುವ ಪ್ರದೇಶಗಳ ನಡುವೆ ಜನರ ಮುಕ್ತ ಸಂಚಾರವು ಇಂದು ಮುಂಜಾನೆ ಪ್ರಾರಂಭವಾಯಿತು. ಇದಕ್ಕೂ ಮುನ್ನ ಕೆಲ ದಿನಗಳ ಹಿಂದೆ ಮಣಿಪುರದ ಭದ್ರತಾ ಪರಿಸ್ಥಿತಿಯನ್ನು ಪರಿಶೀಲಿಸಲು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಮಿತ್ ಶಾ ಅವರು, ರಾಜ್ಯದಲ್ಲಿ ಶಾಶ್ವತ ಶಾಂತಿಯನ್ನು ಪುನಃಸ್ಥಾಪಿಸಲು ಕೇಂದ್ರವು ಸಂಪೂರ್ಣವಾಗಿ ಬದ್ಧವಾಗಿದೆ ಮತ್ತು ಈ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲ ಸಹಾಯವನ್ನು ಒದಗಿಸುತ್ತಿದೆ ಎಂದು ಹೇಳಿದರು.

ಹಸ್ತಾಂತರ ಪ್ರಶ್ನಿಸಿದ್ದ ಉಗ್ರ ರಾಣಾ ಅರ್ಜಿ ತಿರಸ್ಕೃತ



ವಾಷಿಂಗ್ಟನ್: 26/11 ಮುಂಬೈ ದಾಳಿಯ ಸಂಚುಕೋರ ತಹಾವ್ವುರ್ ರಾಣಾ, ಭಾರತಕ್ಕೆ ತನ್ನನ್ನು ಹಸ್ತಾಂತರಿಸದಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಅಮೆರಿಕದ ಸುಪ್ರೀಂಕೋರ್ಟ್ ತಿರಸ್ಕರಿಸಿದೆ. ಈ ಹಿನ್ನೆಲೆಯಲ್ಲಿ ರಾಣಾ ಮತ್ತೊಂದು ಅರ್ಜಿ ಸಲ್ಲಿಸಿದ್ದು, ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್ ಪೀಠವೇ ಅರ್ಜಿ ಆಲಿಸಬೇಕೆಂದು ಮನವಿ ಮಾಡಿಕೊಂಡಿದ್ದಾನೆ.

ತಾನು ಪಾಕಿಸ್ತಾನಿ ಮೂಲದ ಮುಸ್ಲಿಂ ವ್ಯಕ್ತಿಯಾಗಿದ್ದು, ಭಾರತಕ್ಕೆ ತನ್ನನ್ನು ಹಸ್ತಾಂತರಿಸಿದರೆ ಅಲ್ಲಿ ಚಿತ್ರಹಿಂಸೆ ನೀಡುತ್ತಾರೆ. ಅಲ್ಲದೇ, ನನ್ನ ಆರೋಗ್ಯವೂ ತೀವ್ರವಾಗಿ ಕ್ಷೀಣಿಸಿದೆ. ಹೀಗಾಗಿ ಹಸ್ತಾಂತರ ಪ್ರಕ್ರಿಯೆಗೆ ತಡೆ ನೀಡಬೇಕು ಎಂದು ರಾಣಾ ಕೋರಿದ್ದ. ನ್ಯಾ.ಎಲೆನಾ ಕಾಗನ್ ಅವರ ಪೀಠವು ಈ ಅರ್ಜಿಯನ್ನು ವಜಾಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ರಾಣಾ ಹೊಸ ಅರ್ಜಿ ಸಲ್ಲಿಸಿದ್ದಾನೆ. ರಾಣಾನ ಹಸ್ತಾಂತರ ಪ್ರಕ್ರಿಯೆ ಚುರುಕುಗೊಂಡಿರುವಂತೆಯೇ ಈ ಬೆಳವಣಿಗೆ ವರದಿಯಾಗಿದೆ.

ಮೈಸೂರು ಮಿತ್ರ ಭಾನುವಾರ 9 ಮಾರ್ಚ್ 2025

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಲೋಗೋ ಅನಾವರಣ



ಲೋಗೋ ಅನಾವರಣಗೊಳಿಸಿ, ಎನ್‌ಎಸ್‌ಎಸ್ ಘಟಕಗಳಿಗೆ ಚಾಲನೆ ನೀಡಲಾಯಿತು.

ಮಡಿಕೇರಿ, ಮಾ.8– ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಲೋಗೋ ಅನಾವರಣಗೊಳಿಸುವ ಮೂಲಕ ಎನ್‌ಎಸ್ ಎಸ್ ಘಟಕಗಳಿಗೆ ಚಾಲನೆ ನೀಡಲಾಯಿತು.

ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಗೀತಾಂಜಲಿ ಮಾತನಾಡಿ, ಎನ್‌ಎಸ್‌ಎಸ್ ನಾನು ಸೇವೆಗೆ ಸಿದ್ಧ ಎನ್ನುವುದನ್ನು ಸೂಚಿಸುತ್ತದೆ. ಯುವ ಸಮೂಹ ರಾಷ್ಟ್ರೀಯ ಸೇವಾ ಯೋಜನೆಯ ಅವಕಾಶಗಳನ್ನು ಸದಾ ಬಳಸಿಕೊಳ್ಳಬೇಕು. ಇದರಿಂದ ನಮ್ಮ ಜೀವನದಲ್ಲಿ ಹೆಚ್ಚು ಅವಕಾಶಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಮೇಜರ್ ಪ್ರೊ. ರಾಘವ ಮಾತನಾಡಿ, 1969ರಲ್ಲಿ ಎನ್‌ಎಸ್‌ಎಸ್ ಆರಂಭವಾಗಿದ್ದು, ಅಂದಿನಿಂದ ಇಂದಿನವರೆಗೆ ರಾಷ್ಟ್ರ ನಿರ್ಮಾಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಪಾತ್ರ ಬಹಳ ಮುಖ್ಯವಾಗಿದೆ. ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಗಿರುವ ಎನ್‌ಎಸ್‌ಎಸ್, ಅದೆಷ್ಟೋ ನಾಯಕರನ್ನು ರಾಷ್ಟ್ರಕ್ಕೆ ನೀಡಿದೆ. 'ನನಗಲ್ಲ ನಿನಗೆ' ಎನ್ನುವ ಧ್ಯೇಯವನ್ನಿಟ್ಟುಕೊಂಡು ಸಮಾಜವನ್ನು ತಿದ್ದುವುದರೊಂದಿಗೆ, ಯಾವುದೇ ಆಕಾಂಕ್ಷೆಯನ್ನಿಟ್ಟುಕೊಳ್ಳದೆ ಇತರರಿಗಾಗಿ ಬದುಕುವುದನ್ನು ಧಾರೆ ಎರೆಯುವ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರ ಕುರಿತು ಹೆಮ್ಮೆ ಎನಿಸುತ್ತದೆ ಎಂದರು.

ಸಮಾಜಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಗಾಯತ್ರಿ ಮಾತನಾಡಿದರು. ಎನ್‌ಎಸ್‌ಎಸ್ ಘಟಕಗಳ ಯೋಜನಾಧಿಕಾರಿ ಡಾ.ಶೈಲಶ್ರೀ ಪ್ರಾಸ್ತಾವಿಕವಾಗಿ ನುಡಿದರು. ಬಳಿಕ ಸ್ವಯಂ ಸೇವಕರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕಾಲೇಜಿನ ಬೋಧಕ ಸಿಬ್ಬಂದಿಗಳಾದ ಡಾ ಪ್ರದೀಪ್ ಭಂಡಾರಿ, ಡಾ. ಸೌಮ್ಯಶ್ರೀ ಹಾಗೂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಚಂದನ್ ನಂದರಬೆಟ್ಟು, ನಿರ್ದೇಶಕ ಚರಣ್ ಬಲ್ಯದ, ವಿದ್ಯಾರ್ಥಿ ನಾಯಕರಾದ ವರ್ಷ ಟಿ.ವಿ, ಮಧುಸೂದನ್ ಬಿ.ವಿ, ಮನೋಜ್, ವರ್ಷ ಕೆ.ಟಿ ಉಪಸ್ಥಿತರಿದ್ದರು.

ಕೊಡವ ಕ್ರಿಕೆಟ್ ಲೆದರ್ ಬಾಲ್ ಪ್ರೀಮಿಯರ್ ಲೀಗ್ 2ನೇ ಆವೃತ್ತಿಯ ಯಶಸ್ವಿ ಹರಾಜು ಪ್ರಕ್ರಿಯೆ

ಹರಾಜಿನಲ್ಲಿ ಬಿಡ್ ಮೂಲಕ ನೆಚ್ಚಿನ ಆಟಗಾರರನ್ನು ತಂಡಕ್ಕೆ ಸೆಳೆದ ಫ್ರಾಂಚೈಸಿಗಳು

ಮೈಸೂರು, ಮಾ.8(ಎಂಕೆ)– ಐಪಿಎಲ್ ಮಾದರಿಯಲ್ಲಿ ಪ್ರತಿಭಾನ್ವಿತ ಕೊಡವ ಕ್ರಿಕೆಟ್ ಪ್ರತಿಭೆಗಳನ್ನು ಗುರ್ತಿಸಿ, ಪ್ರೋತ್ಸಾಹಿಸಲು ಕೂರ್ಗ್ ಕ್ರಿಕೆಟ್ ಫೌಂಡೇಷನ್ ವತಿಯಿಂದ ಆಯೋಜಿಸುವ 'ಕೊಡವ ಕ್ರಿಕೆಟ್ ಲೆದರ್ ಬಾಲ್ ಪ್ರೀಮಿಯರ್ ಲೀಗ್–2025' 2ನೇ ಆವೃತ್ತಿಯ ಹರಾಜು ಪ್ರಕ್ರಿಯೆ ಶನಿವಾರ ನಡೆಯಿತು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಬಿಡ್ಡಿಂಗ್‌ನಲ್ಲಿ ಫ್ರಾಂಚೈಸಿಗಳಾದ ಟೀಂ ಕೊಡವ ವಾರಿಯರ್ಸ್, ಟೀಂ ಕೂರ್ಗ್ ಯುನೈಟೆಡ್, ಟೀಂ ಕೊಡವ ಟ್ರೈಬ್, ಎಂಟಿಬಿ ರಾಯಲ್ಸ್, ಟೀಂ ವೈಲ್ಡ್ ಫ್ಲವರ್, ಟೀಂ ಪ್ರಗತಿ ಕ್ರಿಕೆಟರ್ಸ್, ಕೂರ್ಗ್ ಬ್ಲಾಸ್ಟರ್, ಕೊಡವ ರೈಸಿಂಗ್ ಸ್ಟಾರ್ಸ್, ವೆಸ್ಟರ್ನ್ ಘಾಟ್ ವಾರಿಯರ್ಸ್ ಹಾಗೂ ಟೀಂ ಲೆವರೇಜ್ ಪಾಲ್ಗೊಂಡಿದ್ದವು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶನಿವಾರ 'ಕೊಡವ ಕ್ರಿಕೆಟ್ ಲೆದರ್ ಬಾಲ್ ಪ್ರೀಮಿಯರ್ ಲೀಗ್' 2ನೇ ಆವೃತ್ತಿಯ ಹರಾಜು ಪ್ರಕ್ರಿಯೆ ನಡೆಯಿತು.

ರಣಜಿ ಹಾಗೂ ಕೌಂಟಿ ಕ್ರಿಕೆಟರ್‌ಗಳಾದ ಸಿ.ಎ.ಕಾರ್ತಿಕ್, ಸಿ.ಆರ್.ಅಯ್ಯಪ್ಪ ಕೆ.ಎಸ್. ದೇವಯ್ಯ ಸೇರಿದಂತೆ 180ಕ್ಕೂ ಹೆಚ್ಚು ಕೊಡವ ಕ್ರಿಕೆಟ್ ಆಟಗಾರರು ಹರಾಜಿನಲ್ಲಿ ಭಾಗವಹಿಸಿದ್ದು, ಫ್ರಾಂಚೈಸಿಗಳು ತಮ್ಮ ತಂಡಕ್ಕೆ ನೀಡಿದ್ದ ಮೊತ್ತಕ್ಕೆ ಸೀಮಿತವಾಗಿ ಐಪಿಎಲ್ ಮಾದರಿಯಲ್ಲೇ ಬಿಡ್ ಮಾಡುವ ಮೂಲಕ ಫೇವರಿಟ್ ಆಟಗಾರರನ್ನು ತಮ್ಮ ತೆಕ್ಕೆಗೆ ಪಡೆಯುವಲ್ಲಿ ಯಶಸ್ವಿಯಾದರು.

ರಣಜಿ ಆಟಗಾರ ಸಿ.ಎ.ಕಾರ್ತಿಕ್ ಕೂರ್ಗ್ ಬ್ಲಾಸ್ಟರ್ಸ್ ತಂಡದ ನಾಯಕರಾಗಿ ಆಯ್ಕೆಯಾದರೆ, ಸಿ.ಆರ್.ಅಯ್ಯಪ್ಪ ವೆಸ್ಟರ್ನ್ ಘಾಟ್ ವಾರಿಯರ್ಸ್ ತಂಡಕ್ಕೆ ಸೇರ್ಪಡೆಯಾದರು. ಪ್ರತೀ ಫ್ರಾಂಚೈಸಿಯೂ 14ರಿಂದ 17 ಮಂದಿ ಆಟಗಾರರನ್ನು ಖರೀದಿಸುವ ಮೂಲಕ 2ನೇ ಆವೃತ್ತಿಯ ಕೊಡವ ಕ್ರಿಕೆಟ್ ಲೀಗ್‌ಗೆ ಮುನ್ನುಡಿ ಬರೆದರು.

ಲೀಗ್‌ನಲ್ಲಿ 15 ವರ್ಷದಿಂದ 60 ವರ್ಷದೊಳಗಿನ ಕ್ರಿಕೆಟರ್‌ಗಳು ಭಾಗವಹಿಸಲು ಅವಕಾಶ ನೀಡಿದ್ದು, ಇಬ್ಬರು ಮಹಿಳಾ ಕ್ರಿಕೆಟರ್‌ಗಳು ಈ ಬಾರಿ ಆಡುತ್ತಿರುವುದು ವಿಶೇಷವಾಗಿದೆ. ಐಪಿಎಲ್ ಮಾದರಿಯಲ್ಲೇ ಟಿ20 ಲೀಗ್ ಇದಾಗಿದ್ದು, 10–12 ದಿನಗಳ ಕಾಲ ಕ್ರಿಕೆಟ್ ಅಭಿಮಾನಿಗಳ ಮನಸೂರೆಗೊಳ್ಳಲಿದೆ.

ಏ.1 ರಿಂದ ಆರಂಭ: 'ಕೊಡವ ಕ್ರಿಕೆಟ್ ಲೆದರ್ ಬಾಲ್ ಪ್ರೀಮಿಯರ್ ಲೀಗ್ ಸೀಸನ್–2' ಏ.1ರಿಂದ ಆರಂಭವಾಗಲಿದೆ ಎಂದು ಕೂರ್ಗ್ ಕ್ರಿಕೆಟ್ ಫೌಂಡೇಷನ್ ಅಧ್ಯಕ್ಷ ಪೊರುಕೊಂಡ ಸುನೀಲ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೊಡವ ಸಮುದಾಯ ಪ್ರತಿಭಾನ್ವಿತ ಕ್ರಿಕೆಟ್ ಆಟಗಾರರನ್ನು ಗುರ್ತಿಸಿ, ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕ್ರಿಕೆಟ್ ಟೂರ್ನಮೆಂಟ್ ಆಯೋಜನೆ ಮಾಡಲಾಗುತ್ತಿದೆ. ಕೊಡಗಿನ ಕ್ರಿಕೆಟ್ ಪ್ರತಿಭೆಗಳು ರಾಜ್ಯ, ರಾಷ್ಟ್ರ ಮಟ್ಟ ಹಾಗೂ ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆಸುವ ಮುಖ್ಯ ಉದ್ದೇಶವನ್ನು ಕೂರ್ಗ್ ಕ್ರಿಕೆಟ್ ಫೌಂಡೇಷನ್ ಹೊಂದಿದೆ ಎಂದು ಮಾಹಿತಿ ನೀಡಿದರು.

2ನೇ ಆವೃತ್ತಿಯ ಮೊದಲ ಹಂತವಾಗಿ ಹರಾಜು ಪ್ರಕ್ರಿಯೆ ನಡೆದಿದ್ದು, 10 ಫ್ರಾಂಚೈಸಿಗಳು ಹಾಗೂ 180ಕ್ಕೂ ಹೆಚ್ಚು ಕೊಡವ ಕ್ರಿಕೆಟ್ ಪಟುಗಳು ಬಿಡ್ಡಿಂಗ್‌ನಲ್ಲಿ ಭಾಗವಹಿಸಿದ್ದಾರೆ. ಕೊಡಗಿನ ಪಾಲಿಬೆಟ್ಟದ ಟಾಟಾ ಕಾಫಿ ಕ್ರಿಕೆಟ್ ಮೈದಾನದಲ್ಲಿ ಪಂದ್ಯಗಳು ನಡೆಯಲಿದ್ದು, ಸದ್ಯದಲ್ಲಿಯೇ ವೇಳಾಪಟ್ಟಿಯನ್ನು ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು. ಈ ವೇಳೆ ಕೂರ್ಗ್ ಕ್ರಿಕೆಟ್ ಫೌಂಡೇಷನ್‌ನ ಪಾಲಚಂಡ ಜಗನ್, ಮಡ್ಲಂಡ ದರ್ಶನ್, ಚೆರ್ಮಂದಂಡ ಸೋಮಣ್ಣ, ಚಂಡೀರ ರಚನ್, ಬಲ್ಲಂಡ ರೀನಾ ದೇವಯ್ಯ, ಕುಲಟೀರ ಶಾಂತ ಕಾಳಪ್ಪ, ಕೀತಿಯಂಡ ಗಣಪತಿ, ಅಣ್ಣಳಮಾಡ ರಾಯ್ ಚಿನ್ನಪ್ಪ ಮತ್ತಿತರರಿದ್ದರು.

ನಾಪೋಕ್ಲುವಿನ ಸಿ.ಜೆ.ಭಾಗ್ಯವತಿಗೆ ರಾಜ್ಯ ಪ್ರಶಸ್ತಿ

ನಾಪೋಕ್ಲು, ಮಾ.8(ದುಗ್ಗಳ)– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ನೀಡಲಾಗುವ ಉತ್ತಮ ಅಂಗನವಾಡಿ ಕಾರ್ಯಕರ್ತೆ ರಾಜ್ಯ ಪ್ರಶಸ್ತಿಯನ್ನು ನಾಪೋಕ್ಲು ಪಂಚಾಯಿತಿಯ ಹಳೆ ತಾಲೂಕು ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಸಿ.ಜೆ.ಭಾಗ್ಯವತಿ ಅವರಿಗೆ ಶನಿವಾರ ಪ್ರದಾನ ಮಾಡಲಾಯಿತು.



ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಸಮರ್ಪಕವಾಗಿ ಒದಗಿಸಲು ತೆಗೆದುಕೊಂಡಿರುವ ಕ್ರಮ ಹಾಗೂ ಉತ್ತಮ ಚಟುವಟಿಕೆಗಳನ್ನು ಗುರುತಿಸಿ ಇವರ ಉತ್ತಮ ಸೇವೆಗಾಗಿ ಕೊಡಗು ಜಿಲ್ಲೆಯಿಂದ ಇವರನ್ನು ಆಯ್ಕೆ ಮಾಡಲಾಗಿತ್ತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮಿ ಆರ್ ಹೆಬ್ಬಾಳ್ಕರ್ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ನಾಪೋಕ್ಲು ಬಳಿ ಹಾಡಹಗಲೇ ಕಾಫಿ ತೋಟಗಳಿಗೆ ಒಂಟಿಸಲಗ ದಾಳಿ

ಫಸಲು ನಾಶ, ಗ್ರಾಮಸ್ಥರಲ್ಲಿ ಆತಂಕ

ಮಡಿಕೇರಿ, ಮಾ.8– ನಾಪೋಕ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಳಕೇರಿ ಗ್ರಾಮದಲ್ಲಿ ಹಾಡಹಗಲೇ ಕಾಫಿ ತೋಟಗಳಿಗೆ ಒಂಟಿ ಸಲಗವೊಂದು ದಾಳಿ ನಡೆಸಿದ್ದು, ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದೆ. ನಾಪೋಕ್ಲು ಗ್ರಾಪಂ ವ್ಯಾಪ್ತಿಯ ಕೊಳಕೇರಿ ಗ್ರಾಮದ ಅಹಮದ್ ಹಾಗೂ ಮಹಮ್ಮದ್ ಎಂಬವರ ತೋಟಗಳಿಗೆ ಲಗ್ಗೆಯಿಟ್ಟ ಕಾಡಾನೆ ಕಾಫಿ ಇನ್ನಿತರ ಗಿಡಗಳನ್ನು ನಾಶಪಡಿಸಿದ್ದಲ್ಲದೇ, ಗ್ರಾಮದ ನಿವಾಸಿ ನಝೀರ್ ಎಂಬವರ ಗದ್ದೆಯಲ್ಲಿ ಮೇಯಲು ಕಟ್ಟಿದ್ದ ಹಸುವಿನ ಮೇಲೆ ದಾಳಿ ನಡೆಸಿದ್ದು, ಇದರಿಂದ ಹಸು ಗಾಯಗೊಂಡಿದೆ.



ಕೋಟೇರಿ ಗ್ರಾಮದ ಬೆಳೆಗಾರ ಅಪ್ಪಾರಂಡ ಸುಧೀರ್ ಅಯ್ಯಪ್ಪ ಎಂಬುವರ ತೋಟಕ್ಕೆ ಲಗ್ಗೆಯಿಟ್ಟ ಕಾಡಾನೆ, ತೋಟಕ್ಕೆ ಅಳವಡಿಸಲಾಗಿದ್ದ ಗೇಟ್ ಅನ್ನು ಧ್ವಂಸಗೊಳಿಸಿದೆ. ಬಳಿಕ ತೋಟದಲ್ಲಿ ಬೆಳೆದಿದ್ದ ಕಾಫಿ, ಬಾಳೆ, ಅಡಿಕೆ, ತೆಂಗು ಹಾಗೂ ಇನ್ನಿತರ ಕೃಷಿ ಫಸಲುಗಳನ್ನು ತಿಂದು, ತುಳಿದು ನಾಶಪಡಿಸಿದೆ. ಕಾಡಾನೆ ದಾಳಿಯಿಂದ ಅಪಾರ ನಷ್ಟ ಸಂಭವಿಸಿದೆ ಎಂದು ಬೆಳೆಗಾರ ಸುಧೀರ್ ಅಳಲು ತೋಡಿಕೊಂಡಿದ್ದಾರೆ.

ಇದೇ ಗ್ರಾಮದ ಆಬಿದ್ ಎಂಬವರ ಮನೆಯ ಮುಂಭಾಗದ ತೋಟದೊಳಗೆ ಕಾಡಾನೆ ಸಂಚರಿಸುವ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದ್ದು, ಇದರಿಂದ ಜನರು ಗ್ರಾಮದಲ್ಲಿ ಸಂಚರಿಸಲು ಭಯ ಪಡುವ ಪರಿಸ್ಥಿತಿ ಸೃಷ್ಟಿಯಾಗಿದೆ. ಈ ವ್ಯಾಪ್ತಿಯ ತೋಟಗಳಲ್ಲಿ ಇದೀಗ ಕಾಫಿ ಕೊಯ್ಲು ಹಾಗೂ ಇನ್ನಿತರ ಕೆಲಸಗಳು ನಡೆಯುತ್ತಿದ್ದು, ಗ್ರಾಮದಲ್ಲಿ ದಿಢೀರ್ ಕಾಡಾನೆ ಪ್ರತ್ಯಕ್ಷಗೊಂಡು ಕಾರ್ಮಿಕರು ಹಾಗೂ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದೆ.

ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಭಾಗಮಂಡಲ ಹಾಗೂ ಮಡಿಕೇರಿ ವಲಯದ ಅರಣ್ಯ ಇಲಾಖೆಯ ಸಿಬ್ಬಂದಿಗಳು, ಅರಣ್ಯಾಧಿಕಾರಿಗಳಾದ ರವೀಂದ್ರ ಹಾಗೂ ಫಿರೋಜ್ ಖಾನ್ ನೇತೃತ್ವದಲ್ಲಿ ಕಾಡಾನೆಯನ್ನು ಕಾಡಿಗಟ್ಟುವ ಕಾರ್ಯಾಚರಣೆ ಕೈಗೊಂಡಿದ್ದಾರೆ.

ವಿರಾಜಪೇಟೆ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 346 ನ್ಯಾಯಾಲಯದ ಪ್ರಕರಣಗಳು ಇತ್ಯರ್ಥ



ವಿರಾಜಪೇಟೆ ನ್ಯಾಯಾಲಯ ಸಮುಚ್ಚಯದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಿತು.

ವಿರಾಜಪೇಟೆ, ಮಾ.8– ವಿರಾಜಪೇಟೆ ನ್ಯಾಯಾಲಯ ಸಮುಚ್ಚಯದಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಒಟ್ಟು 734 ಪ್ರಕರಣಗಳನ್ನು ಇತ್ಯರ್ಥಪಡಿಸಲು ಆಯ್ದುಕೊಳ್ಳಲಾಗಿತ್ತು. ಅದರಲ್ಲಿ 346 ನ್ಯಾಯಾಲಯದ ಪ್ರಕರಣಗಳು ಇತ್ಯರ್ಥಗೊಂಡಿವೆ. ಹಾಗೂ ಒಟ್ಟು ಮೊತ್ತ 76,74.111 ರೂ. ಗಳಿಗೆ ಸಂಬಂಧಿಸಿದಂತೆ 46 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಿವೆ. ಸಿವಿಲ್ ಮೊಕದ್ದಮೆಗಳಲ್ಲಿ 37 ಪ್ರಕರಣಗಳು ಇತ್ಯರ್ಥಗೊಂಡಿದ್ದು, ಒಟ್ಟು ಮೊತ್ತ 3, 62, 59.655 ರೂಗಳಿಗೆ ಸಂಬಂದಪಟ್ಟಂತೆ ಬ್ಯಾಂಕ್ ಪೂರ್ವದಾವೆ ಒಟ್ಟು 1,138 ಪ್ರಕರಣಗಳು ಇತ್ಯರ್ಥಗೊಂಡಿವೆ ಲೋಕ್ ಅದಾಲತನಲ್ಲಿ 2ನೇ ಅಪರ ಜಿಲ್ಲಾ ಸತ್ರ ನ್ಯಾಯಾಧೀಶರಾದ ಎಸ್. ಸುಜಾತ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಆರ್.ಮಂಜುನಾಥ್, ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸಂತೋಷ ಕೊಟಾರಿ, ಮತ್ತು ವಕೀಲರಾದ ವಿ.ಎಸ್.ಪ್ರೀತಂ, ಬಿ.ಬಿ.ಮಾದಪ್ಪ, ಅನುಪಮ, ಕಿಶೋರ್ ಮತ್ತಿತರರಿದ್ದರು.

ಚಾ.ನಗರದಲ್ಲಿ ಯಶಸ್ವಿ ಲೋಕ್ ಅದಾಲತ್

ಹಲವು ಪ್ರಕರಣ ಇತ್ಯರ್ಥ



ಚಾಮರಾಜನಗರದಲ್ಲಿ ಲೋಕ್ ಅದಾಲತ್ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ, ಮಾ.8– ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಶನಿವಾರ ನಡೆದ ರಾಷ್ಟ್ರೀಯ ಮೆಗಾ ಲೋಕ ಅದಾಲತ್‌ನಲ್ಲಿ ಹಲವು ಪ್ರಕರಣಗಳು ಇತ್ಯರ್ಥಗೊಂಡು ಯಶಸ್ವಿಯಾಯಿತು.

ಜಿಲ್ಲಾ ಸೆಷನ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಅಧ್ಯಕ್ಷತೆಯಲ್ಲಿ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಲೋಕ್ ಅದಾಲತ್ ಕಾರ್ಯಕ್ರಮ ಜರುಗಿತು.

ಅದಾಲತ್‌ನಲ್ಲಿ ಬಾಕಿ ಇರುವ ಬ್ಯಾಂಕ್ ವಸೂಲಾತಿ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪ್ರಕರಣಗಳು, ಕೌಟುಂಬಿಕ ಪ್ರಕರಣಗಳು, ಕಾರ್ಮಿಕ ಸಂಬಂಧಿತ ವಿವಾದಗಳು, ಚೆಕ್ ಬೌನ್ಸ್ ಪ್ರಕರಣಗಳು, ಹಣ ವಸೂಲಾತಿ ಪ್ರಕರಣಗಳು, ಎಂಎಂಡಿಆರ್ ಕಾಯ್ದೆ ಪ್ರಕರಣಗಳು, ಜನನ ನೋಂದಣಿ ಪ್ರಕರಣಗಳು, ಪಾಲು ವಿಭಾಗ ದಾವೆ ಹಾಗೂ ಸಿವಿಲ್ ಪ್ರಕರಣಗಳು, ಕಂದಾಯ ಪ್ರಕರಣಗಳು ಸೇರಿದಂತೆ ಸಾವಿರಾರು ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಪಡಿಸಲಾಯಿತು.

ಇತ್ಯರ್ಥಗೊಂಡಿರುವ ಪ್ರಕರಣಗಳ ನಿಖರ ಸಂಖ್ಯೆ ಸದ್ಯಕ್ಕೆ ತಿಳಿದು ಬಂದಿಲ್ಲ. ನ್ಯಾಯಾಲಯದಲ್ಲಿ ಬಾಕಿ ಪ್ರಕರಣ, ವ್ಯಾಜ್ಯ ಪೂರ್ವ ಪ್ರಕರಣ ಸೇರಿದಂತೆ 10 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥ ಮಾಡುವ ಗುರಿಯನ್ನು ಈ ಬಾರಿ ಪ್ರಾಧಿಕಾರ ಹಾಕಿಕೊಂಡಿತ್ತು. ಹೀಗಾಗಿ, ಸೋಮವಾರ ಅಥವಾ ಮಂಗಳವಾರ ಇತ್ಯರ್ಥಗೊಂಡ ಪ್ರಕರಣಗಳ ನಿಖರ ಮಾಹಿತಿ ತಿಳಿಯಲಿದ್ದು, ಗುರಿ ತಲುಪುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ರಾಷ್ಟ್ರೀಯ ಮೆಗಾ ಲೋಕ ಅದಾಲತ್ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಕಕ್ಷಿದಾರರು ನ್ಯಾಯಾಲಯಕ್ಕೆ ಬೆಳಗ್ಗೆಯೇ ಬಂದಿದ್ದರು. ಬೆಳಗ್ಗೆ 11 ಗಂಟೆಯ ಸುಮಾರಿಗೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಅದಾಲತ್ ಆರಂಭವಾಯಿತು. ವಕೀಲರು, ಕಕ್ಷಿದಾರರ ಸಮ್ಮುಖದಲ್ಲಿ ನ್ಯಾಯಾಧೀಶರು ಪ್ರಕರಣಗಳ ವಿಚಾರಣೆಯನ್ನು ಮಾಡಿ ಬಹುತೇಕ ಪ್ರಕರಣಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಿದರು. ಉಳಿದಂತೆ ರಾಜಿಗೆ ಸಮ್ಮತಿಯಾಗದ ಪ್ರಕರಣಗಳಿಗೆ ಮುಂದಿನ ದಿನಾಂಕವನ್ನು ನೀಡಿದರು.

ಈ ವೇಳೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್. ಭಾರತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ನ್ಯಾಯಾಧೀಶರಾದ ಈಶ್ವರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್. ನಂಜಪ್ಪ, ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ ಸೇರಿದಂತೆ ಹಿರಿಯ ಹಾಗೂ ಕಿರಿಯ ವಕೀಲರು, ನ್ಯಾಯಾಲಯದ ಸಿಬ್ಬಂದಿ ಹಾಜರಿದ್ದರು.

ಅದಾಲತ್‌ನಲ್ಲಿ ಮುನಿಸು ಮರೆತು ಒಂದಾದ ದಂಪತಿ

ಪ್ರಧಾನ ಹಿರಿಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದ ಗುಂಡ್ಲುಪೇಟೆಯ ಅನಿಲ್‌ರಾಜ್ ಹಾಗೂ ನಂಜನಗೂಡು ತಾಲೂಕಿನ ಬದನವಾಳು ಗ್ರಾಮದ ಭಾಗೀರಥಿ ದಂಪತಿ ತಮ್ಮ ಹಲವು ವರ್ಷಗಳ ಮುನಿಸನ್ನು ಬದಿಗಿರಿಸಿ ಒಂದಾದರು.

ತಮ್ಮ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಆಗಮಿಸಿದ ದಂಪತಿ ಪ್ರಧಾನ ಹಿರಿಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಸುನೀಲ್ ಅವರ ಸಮ್ಮುಖದಲ್ಲಿ ರಾಜೀ ಸಂಧಾನ ಮಾಡಿಕೊಳ್ಳುವ ಮೂಲಕ ಹಲವು ವರ್ಷಗಳಿಂದ ನಡೆಯುತ್ತಿದ್ದ ಪ್ರಕರಣವನ್ನು ಇತ್ಯರ್ಥ ಮಾಡಿಕೊಂಡರು.

ಚಾ.ನಗರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಉತ್ತಮ ಶಿಕ್ಷಕಿಯರಿಗೆ ಪ್ರಶಸ್ತಿ ಪ್ರದಾನ



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಉತ್ತಮ ಶಿಕ್ಷಕಿಯರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಸಿ.ಎನ್. ರೇಣುಕಾದೇವಿ ಉದ್ಘಾಟಿಸಿದರು.

ಚಾಮರಾಜನಗರ, ಮಾ.8– ಗಡಿ ಜಿಲ್ಲೆಯಲ್ಲಿ ಮಹಿಳೆಯರನ್ನು ಸಶಕ್ತರಾಗಿಸಲು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಮುಂಬರುವ ಏಪ್ರಿಲ್ ಅಂತ್ಯ ಅಥವಾ ಮೇ ಮೊದಲ ವಾರದಲ್ಲಿ ಚಾಮರಾಜನಗರದಲ್ಲಿ ಬೃಹತ್ ಮಹಿಳಾ ಸಮಾವೇಶ ಹಮ್ಮಿಕೊಳ್ಳಲು ಚಿಂತನೆ ನಡೆಸಲಾಗಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಸಿ.ಎನ್. ರೇಣುಕಾದೇವಿ ಹೇಳಿದರು.

ನಗರದ ಪಾರ್ವತಿ ಬಾಲಮಂದಿರದ ವಿಶ್ವ ಹಿಂದೂ ಪರಿಷತ್ ಶಾಲೆಯಲ್ಲಿ ಚಾಮರಾಜನಗರ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಉತ್ತಮ ಶಿಕ್ಷಕಿಯರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರು ಶತ–ಶತಮಾನಗಳಿಂದಲೂ ತಮ್ಮ ಹಕ್ಕುಗಳನ್ನು ಪಡೆಯಲು ಹೋರಾಟ ನಡೆಸುತ್ತಾ ಬಂದಿದ್ದರು. ಇಂದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸೇವೆ ಸಲ್ಲಿಸುತ್ತಿದ್ದಾರೆ. ಇದಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಕಾರಣರಾಗಿದ್ದಾರೆ ಎಂದರು.

ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಯಲ್ಲಿ ಮಹಿಳಾ ಅಧಿಕಾರಿಗಳ ಪಾತ್ರ ಅಪಾರವಾಗಿದೆ. ಜಿಲ್ಲೆಯಲ್ಲಿ ಮಹಿಳಾ ಅಧಿಕಾರಿಗಳು ಉನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ವಿಶೇಷ. ಆ ಹಿನ್ನೆಲೆಯಲ್ಲೇ ಚಾಮರಾಜನಗರದಲ್ಲಿ ಮುಂದಿನ ದಿನಗಳಲ್ಲಿ ಮಹಿಳಾ ಸಮಾವೇಶ ಹಮ್ಮಿಕೊಳ್ಳುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದರು.

ನಂತರ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ ಮಾತನಾಡಿ, 18ನೇ ಶತಮಾನದವರೆಗೂ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಲು ಹಲವಾರು ನಿರ್ಬಂಧಗಳನ್ನು ಹೇರಲಾಗಿತ್ತು. 18ನೇ ಶತಮಾನದ ನಂತರ ನಡೆದ ಎರಡನೇ ಮಹಾಯುದ್ಧದ ನಂತರ ದೇಶದಲ್ಲಿ ಬದಲಾದ ವಾತಾವರಣದಿಂದಾಗಿ ಮಹಿಳೆಯರು ಮುಂಚೂಣಿಗೆ ಬರಲು ಅವಕಾಶವಾಯಿತು ಎಂದರು.

ಇದೇ ವೇಳೆ ತಾಲೂಕಿನ 20ಕ್ಕೂ ಹೆಚ್ಚು ಶಿಕ್ಷಕಿಯರಿಗೆ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಡಯಟ್‌ನ ಉಪನ್ಯಾಸಕರಾದ ಮಂಜುಳಾ, ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷ ಮಹದೇವಸ್ವಾಮಿ, ರಾಮಸ್ವಾಮಿ, ಭರತ್‌ಭೂಷಣ್, ನೇತ್ರಾವತಿ, ಸುಧಾ ಹಾಜರಿದ್ದರು.

ಟ್ರಾಕ್ಟರ್ ಮಗುಚಿ ರೈತ ಸಾವು

ಕೊಳ್ಳೇಗಾಲ, ಮಾ.8– ಟ್ರಾಕ್ಟರ್ ಮಗುಚಿ ಬಿದ್ದ ಪರಿಣಾಮ ತೀವ್ರವಾಗಿ ಗಾಯಗೊಂಡು ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೈತ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಘಟನೆ ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ




ತಾಲೂಕಿನ ಹೊಂಡರಬಾಳು ಗ್ರಾಮದ ಸಿದ್ದೇಶ್ (34) ಮೃತಪಟ್ಟವರಾಗಿದ್ದು, ಇವರು ಶುಕ್ರವಾರ ಹೊಂಡರಬಾಳು ಗ್ರಾಮದ ಜಮೀನಿನಲ್ಲಿ ಉಳುಮೆ ಮಾಡಿ, ಮನೆಗೆ ತೆರಳುವ ವೇಳೆ ನಿಯಂತ್ರಣ ತಪ್ಪಿ ಟ್ರಾಕ್ಟರ್ ಮಗುಚಿ ಬಿದ್ದ ಪರಿಣಾಮ ಸಿದ್ದೇಶ್ ತೀವ್ರವಾಗಿ ಗಾಯಗೊಂಡಿದ್ದರು. ತಕ್ಷಣ ಸ್ಥಳೀಯರು ಕೊಳ್ಳೇಗಾಲ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆಆರ್ ಆಸ್ಪತ್ರೆಗೆ ರವಾನಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಸಾವನ್ನಪ್ಪಿದ್ದಾರೆ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳಾ ರಕ್ಷಣಾ ಕಾನೂನು ಸದುಪಯೋಗದಿಂದ ಮಾತ್ರ ದೌರ್ಜನ್ಯ ತಡೆಯಲು ಸಾಧ್ಯ

ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಅಭಿಮತ

ಚಾಮರಾಜನಗರ, ಮಾ.8– ಮಹಿಳೆಯರ ಸುರಕ್ಷತೆ ಹಾಗೂ ರಕ್ಷಣೆಗಾಗಿ ಹಲವಾರು ಕಾನೂನುಗಳಿದ್ದು, ಇವುಗಳ ಸದುಪಯೋಗ ಪಡೆದುಕೊಂಡಾಗ ಮಾತ್ರ ದೌರ್ಜನ್ಯಗಳನ್ನು ತಡೆಯಲು ಸಾಧ್ಯ ಎಂದು ಜಿಲ್ಲಾ ವಕೀಲರ ಸಂಘದ ನಿಕಟಪೂರ್ವ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ತಿಳಿಸಿದರು.

ತಾಲೂಕಿನ ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಹಿಳೆಯರಿಗೆ ಕಾನೂನಿನ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ ಎಲ್ಲಾ ರಂಗಗಳಲ್ಲಿಯೂ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಮಹಿಳೆಯರಿಗೆ ಎಷ್ಟೇ ಕಠಿಣ ಕಾನೂನುಗಳು ಜಾರಿಯಲ್ಲಿದ್ದರೂ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿರುವುದು ವಿಷಾದನೀಯ. ಮಹಿಳೆಯರಿಗಿರುವ ಕಾನೂನುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆ ಹೊರತು ದುರ್ಬಳಕೆ ಮಾಡಿಕೊಳ್ಳಬಾರದು ಎಂದರು.



ಮಹಿಳೆಯರಿಗೆ ಕಾನೂನಿನ ಅರಿವು ಕಾರ್ಯಕ್ರಮವನ್ನು ಜಿಲ್ಲಾ ವಕೀಲರ ಸಂಘದ ನಿಕಟ ಪೂರ್ವ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಉದ್ಘಾಟಿಸಿದರು.

ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕಿ ಎಂ.ಗಿರಿಜಾ ಮಾತನಾಡಿ, ಮಹಿಳೆ ಅಬಲೆಯಲ್ಲ ಸಬಲೆ ಎಂಬುದನ್ನು ಸಾಬೀತುಪಡಿಸುವ ಮೂಲಕ ಇಂದು ಎಲ್ಲಾ ಕ್ಷೇತ್ರಗಳಲ್ಲೂ ಛಾಪು ಮೂಡಿಸುತ್ತಿದ್ದಾರೆ. ಮಹಿಳೆಯರು ಶತಮಾನಗಳಿಂದ ಇತಿಹಾಸ ಸೃಷ್ಟಿಸಿದ್ದಾರೆ. ಹೆಣ್ಣು ಎಂಬ ಕೀಳರಿಮೆ ಬಿಟ್ಟು ಎಲ್ಲಾ ರಂಗದಲ್ಲೂ ಶ್ರಮವಹಿಸಿದರೆ ಯಶಸ್ಸು ಕಾಣಬಹುದು ಎಂದರು.

ಜಿಪಂ ತರಬೇತಿ ಸಂಯೋಜಕ ಟಿ.ಜೆ.ಸುರೇಶ್ ಮಾತನಾಡಿ, ಮಹಿಳೆಯರು ಅಡುಗೆ ಮನೆಗೆ ಸೀಮಿತವಾಗದೆ ಸಮಾಜದ ಮುಖ್ಯವಾಹಿನಿಗೆ ಬರಬೇಕು. ಸಮಾಜದಲ್ಲಿ ನಡೆಯುವ ಬಾಲ್ಯ ವಿವಾಹ, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಥಿಯೊಡರ್ ಲೂಥರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಉಪನ್ಯಾಸಕರಾದ ಡಾ.ಶಶಿಕಲಾ, ಶಿವಕುಮಾರ್, ದಿಲೀಪ್, ಬಸವಣ್ಣ, ಲಿಂಗರಾಜು, ವಾಣಿ, ಅಶೋಕ್, ಕು. ಸಿಂಧು ಇದ್ದರು.

ಕೆಎಸ್‌ಆರ್‌ಟಿಸಿ ಬಸ್ ಡ್ರೈವರ್ ಮೇಲೆ ಹಲ್ಲೆ; ದೂರು ದಾಖಲು

ಯಳಂದೂರು, ಮಾ. 8– ಕೆಎಸ್‌ಆರ್‌ಟಿಸಿ ಬಸ್ ಡ್ರೈವರ್ ಮೇಲೆ ಇಬ್ಬರು ಹಲ್ಲೆ ನಡೆಸಿದ್ದು, ಈ ಬಗ್ಗೆ ಅಗರ–ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ರಾತ್ರಿ ದೂರು ದಾಖಲಾಗಿದೆ.

ಕೊಳ್ಳೇಗಾಲದಿಂದ ಚಾಮರಾಜನಗರಕ್ಕೆ ಬಸ್ ತೆರಳುತ್ತಿದ್ದ ವೇಳೆ ಅಗರ ಗ್ರಾಮದ ಮಹೇಶ್ ಮತ್ತು ಶ್ರೀನಿವಾಸ್ ಮತ್ತಿಬ್ಬರು ಅಗರ ಗ್ರಾಮದ ಬಳಿ ಕುಡಿದು ಬೈಕ್‌ನ್ನು ಅಡ್ಡಾದಿಡ್ಡಿಯಾಗಿ ಓಡಿಸಿಕೊಂಡು ಹೋಗುತ್ತಿದ್ದರು.

ನಂತರ ಇವರು ಬಸ್‌ಗೆ ಅಡ್ಡಲಾಗಿ ಬೈಕ್ ನಿಲ್ಲಿಸಿ, ಬಸ್‌ನ ಡ್ರೈವರ್ ಶಾಂತರಾಜು ಅವರಿಗೆ ಬೈಯ್ದಿದ್ದಲ್ಲದೆ, ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ ಎಂದು ಡ್ರೈವರ್ ಶಾಂತರಾಜು ನೀಡಿದ ದೂರು ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ವಹಿಸಿದ್ದಾರೆ.

ಇಂದು ಪೊಲೀಸ್ ರನ್ ಮ್ಯಾರಥಾನ್

ಚಾಮರಾಜನಗರ, ಮಾ.8– ಚಾಮರಾಜನಗರ ಜಿಲ್ಲಾ ಪೊಲೀಸ್ ವತಿಯಿಂದ 'ಕರ್ನಾಟಕ ಪೊಲೀಸ್ ರನ್' ಶೀರ್ಷಿಕೆಯಡಿ ಮಾ.9ರಂದು ಬೆಳಿಗ್ಗೆ 6 ಗಂಟೆಗೆ 5 ಕಿ.ಮೀ ಮ್ಯಾರಥಾನ್ ಹಮ್ಮಿಕೊಳ್ಳಲಾಗಿದೆ. ಮ್ಯಾರಥಾನ್ ಪೊಲೀಸ್ ಕವಾಯತು ಮೈದಾನದಿಂದ ಪ್ರಾರಂಭವಾಗಿ ರಾಮಸಮುದ್ರದ ಅಂಬೇಡ್ಕರ್ ಪ್ರತಿಮೆ ತಲುಪಿ ಅಲ್ಲಿಂದ ಯೂಟರ್ನ್ ಪಡೆದು ಭುವನೇಶ್ವರಿ ವೃತ್ತ ತಲುಪಿ ವಾಪಸ್ ಪೊಲೀಸ್ ಕವಾಯತು ಮೈದಾನದಲ್ಲಿ ಅಂತ್ಯವಾಗಲಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯ ನೌಕರರು, ಇತರೆ ಇಲಾಖೆಗಳ ನೌಕರರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹಾಗೂ ಎಲ್ಲಾ ಜನರು ಮುಕ್ತವಾಗಿ ಭಾಗವಹಿಸಬಹುದಾಗಿದೆ.

ನಿಧನ

ಹೆಚ್.ಬಿ.ಶಿವಬಸಪ್ಪ

ಬೇಗೂರು: ಸಮೀಪದ ಹೆಗ್ಗಡಹಳ್ಳಿ ಗ್ರಾಮದ ವೀರಶೈವ ಸಮಾಜದ ಹೆಚ್.ಬಿ. ಶಿವಬಸಪ್ಪ (75) ನಿಧನರಾದರು.



ಮೃತರು ಪತ್ನಿ ವೇದಾವತಿ ಶಿವಬಸಪ್ಪ, ಪುತ್ರ ಎಸ್.ನವೀನ್, ಪುತ್ರಿ ನಂದಿನಿ, ಅಳಿಯ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಮಾ.9) ಬೆಳಗ್ಗೆ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೇಗೂರು ಸಿದ್ದಮ್ಮ

ಬೇಗೂರು: ಗ್ರಾಮದ ನಿವಾಸಿ, ಸರ್ಕಾರಿ ಪ್ರೌಢಶಾಲೆಯ ನಿವೃತ್ತ ನೌಕರ ಹೊನ್ನಶೆಟ್ಟಿರ ಪತ್ನಿ ಸಿದ್ದಮ್ಮ (82) ಶನಿವಾರ ನಿಧನರಾದರು.



ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ರುದ್ರಭೂಮಿಯಲ್ಲಿ ಶನಿವಾರ ಸಂಜೆ ನೆರವೇರಿತು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ವಿಶೇಷ

ಕಾನೂನು ರಕ್ಷಣೆ; ಕ್ರೀಡೆಯಲ್ಲೂ ಸಾಧನೆ } ಕೆ.ಅಶ್ವಿನಿ

■ ಮೋಹನ್ ಕಾಯಕ
ಮೊ.9341296257

ತಾಯಿಯ ಬುದ್ಧಿ ಮಾತು... ತಂದೆಯ ಆರೈಕೆ... ಅಕ್ಕನ ಪ್ರೇರಣೆಯೊಂದಿಗೆ ಪೊಲೀಸ್ ಇಲಾಖೆಗೆ ಸೇರಿರುವ ಹುಣಸೂರು ತಾಲೂಕಿನ ಹಳ್ಳದಕೊಪ್ಪಲಿನ ಕೆ.ಅಶ್ವಿನಿ, ಸೇವಾ ನಿಷ್ಠತೆ ಮಾತ್ರವಲ್ಲದ ಕ್ರೀಡೆಯಲ್ಲೂ ಎಲ್ಲರ ಗಮನ ಸೆಳೆದಿದ್ದಾರೆ.

ಪೊಲೀಸ್ ಇಲಾಖೆ ವತಿಯಿಂದ ನಡೆಯುವ ರಾಜ್ಯ, ಜಿಲ್ಲೆ ಹಾಗೂ ನಗರ ವಾರ್ಷಿಕ ಕ್ರೀಡಾಕೂಟಗಳಲ್ಲಿ ಇಲಾಖೆಯ ಗಮನ ಸೆಳೆದಿರುವ ಅಶ್ವಿನಿ, ತಮ್ಮ ಸಹೋದ್ಯೋಗಿಗಳಿಗೆ, ಶಾಲಾ-ಕಾಲೇಜು ಯುವತಿಯರಿಗೆ ಮಾದರಿಯಾಗಿದ್ದಾರೆ.

ತಾಯಿ ಸುಮಿತ್ರ, ತಂದೆ ಕುಮಾರ್ ಅವರ ದ್ವಿತೀಯ ಪುತ್ರಿಯಾಗಿರುವ ಅಶ್ವಿನಿ ಹಾಗೂ ಅವರ ಸಹೋದರಿ(ಅಕ್ಕ) ನಾಗವೇಣಿ ಅವರೂ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರೆ, ಸಹೋದರ (ತಮ್ಮ) ಹೆಚ್.ಕೆ.ಅಶೋಕ್ ಕುಮಾರ್ ಭಾರತೀಯ ಗಡಿ ಭದ್ರತಾ ಪಡೆ (ಬಿಎಸ್‌ಎಫ್)ಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ತಂದೆ-ತಾಯಿ ಇಬ್ಬರೂ ಓದಿಲ್ಲದಿದ್ದರೂ ವ್ಯವಸಾಯ ಮಾಡಿಕೊಂಡು ತಮ್ಮ

> ಕೆಲಸ ಯಾವುದಾದರೂ ಸಹ ನ್ಯಾಯ ಒದಗಿಸಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂಬುದೇ ನನ್ನ ಗುರಿ. ಮುಂದಿನ ದಿನಗಳಲ್ಲಿ ವೃತ್ತಿಯ ಜೊತೆ ಜೊತೆಗೆ ಓದು ಮುಂದುವರೆಸಿ, ಉನ್ನತ ಹುದ್ದೆ ಪಡೆಯಬೇಕು ಎಂಬ ಗುರಿ ಇಟ್ಟುಕೊಂಡಿದ್ದೇನೆ. ಹಾಗೆಯೇ ಶಾಲಾ-ಕಾಲೇಜುಗಳಲ್ಲಿ ಓದುತ್ತಿರುವ ಹೆಣ್ಣು ಮಕ್ಕಳು ಧೈರ್ಯವಾಗಿರಬೇಕು. ಓದಿನ ಕಡೆಗೆ ಗಮನ ಹರಿಸಬೇಕು ಎಂಬ ಸಲಹೆ ನೀಡುತ್ತೇನೆ.
> **-ಕೆ.ಅಶ್ವಿನಿ, ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್, ಕುವೆಂಪುನಗರ ಪೊಲೀಸ್ ಠಾಣೆ**

ಮೂವರು ಮಕ್ಕಳಿಗೆ ಶಿಕ್ಷಣ ಕೊಡಿಸಿದರ ಫಲವಾಗಿ ಮೂವರು ಕೂಡ ಸರ್ಕಾರಿ ಸೇವೆ ಮಾಡುತ್ತಿರುವುದು ವಿಶೇಷ. ಸದ್ಯ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್‌ಸ್ಟಬಲ್ ಆಗಿರುವ ಕೆ.ಅಶ್ವಿನಿ, ವೃತ್ತಿಯ ಜೊತೆ ಜೊತೆಗೆ ಕ್ರೀಡೆಯಲ್ಲೂ ಗಮನಾರ್ಹ ಸಾಧನೆ ಮಾಡಿದ್ದಾರೆ. ಚಿಕ್ಕ ವಯಸ್ಸಿನಿಂದಲೂ



ಕಬ್ಬಡಿ, ಖೋ ಖೋ, ಹೈ ಜಂಪ್, ಲಾಂಗ್ ಜಂಪ್ ಸೇರಿದಂತೆ ಅಥ್ಲೆಟಿಕ್ಸ್‌ನಲ್ಲಿ ಭಾಗ



ವಹಿಸುತ್ತಿದ್ದ ಅವರು, ರಾಜ್ಯ ಮಟ್ಟದಲ್ಲಿ ಪದಕ ಗಳಿಸಿರುವುದು ಮಾತ್ರವಲ್ಲ ಪೊಲೀಸ್ ಇಲಾಖೆಯ ವಾರ್ಷಿಕ ಕ್ರೀಡಾಕೂಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

2020ರಲ್ಲಿ ಮೈಸೂರು ಜಿಲ್ಲಾ ಪೊಲೀಸ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುವ ವೇಳೆ ನಡೆದ ವಾರ್ಷಿಕ ಕ್ರೀಡಾಕೂಟದಲ್ಲಿ ವೈಯಕ್ತಿಕ ವಿಭಾಗದಲ್ಲಿ ಚಾಂಪಿಯನ್ ಆಗಿದ್ದರು. ಹಾಗೆಯೇ 2024ರಲ್ಲಿ ಮೈಸೂರು ನಗರ ಪೊಲೀಸ್ ವಿಭಾಗದ ವಾರ್ಷಿಕ ಕ್ರೀಡಾಕೂಟದಲ್ಲಿಯೂ ವೈಯಕ್ತಿಕ ವಿಭಾಗದಲ್ಲಿ ಸರ್ವೋತ್ತಮ ಪ್ರಶಸ್ತಿ ಭಾಜನರಾಗಿದ್ದಾರೆ.

ಅಷ್ಟು ಮಾತ್ರವಲ್ಲದೆ 2023ರಲ್ಲಿ ಬೆಂಗಳೂರಿನ ಕೆಎಸ್‌ಆರ್‌ಪಿ ಮೈದಾನದಲ್ಲಿ ನಡೆದ ರಾಜ್ಯಮಟ್ಟದ ಪೊಲೀಸ್ ಇಲಾಖೆಯ ಕ್ರೀಡಾಕೂಟದಲ್ಲಿ ಹೈ ಜಂಪ್‌ನಲ್ಲಿ ಪ್ರಥಮ, ಲಾಂಗ್ ಜಂಪ್ ಮತ್ತು ಟ್ರಿಬಲ್ ಜಂಪ್‌ನಲ್ಲಿ ತೃತೀಯ ಬಹುಮಾನ ಗೆದ್ದಿದ್ದಾರೆ. ಶಾಲಾ ದಿನಗಳಲ್ಲಿಯೂ ಹಲವಾರು ಕ್ರೀಡಾಕೂಟಗಳಲ್ಲಿ ಭಾಗವಹಿಸಿ, ತಾವು ಓದಿರುವ ಶಾಲೆಗಳಿಗೂ ಕೀರ್ತಿ ತಂದಿರುವ 28 ವರ್ಷದ ಕೆ.ಅಶ್ವಿನಿ, ನನ್ನ ತಂದೆ-ತಾಯಿ ಹಾಗಾಗ ಹೇಳುತ್ತಿದ್ದ ಬುದ್ಧಿಮಾತುಗಳು, ಅಕ್ಕ ಪೊಲೀಸ್ ಇಲಾಖೆಗೆ ಸೇರಿದ್ದರ ಪ್ರೇರಣೆಯಿಂದಾಗಿ ನಾನು ಕೂಡ ಪೊಲೀಸ್ ಇಲಾಖೆಗೆ ಸೇರಲು ಸಾಧ್ಯವಾಯಿತು ಎಂದು ತಮ್ಮ ಮನದಾಳ ಮಾತುಗಳ 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ. ನಮ್ಮದು ಮಧ್ಯಮ ಕುಟುಂಬ. ವ್ಯವಸಾಯ ನಮ್ಮ ಕುಟುಂಬದ ಆದಾಯದ ಮೂಲವಾಗಿದ್ದು, ಅಪ್ಪ-ಅಮ್ಮ ಇಬ್ಬರು ಜಮೀನಿನಲ್ಲಿ ದುಡಿದು ಓದಿಸಿದ್ದಾರೆ. ಚೆನ್ನಾಗಿ ಓದಬೇಕು, ದೊಡ್ಡ ಸ್ಥಾನಕ್ಕೆ ಹೋಗಬೇಕು. ತಪ್ಪು ದಾರಿ ಹಿಡಿಯಬಾರದು ಎಂಬ ಅಮ್ಮನ ಎಚ್ಚರಿಕೆ ಮಾತುಗಳು ಹಾಗಾಗ ನನ್ನನ್ನು ಎಚ್ಚರಿಸಿ, ಓದಿನ ಕಡೆಗೆ ಗಮನ ಹರಿಸುವಂತೆ ಮಾಡಿತು ಎಂದರು.

2020ರಲ್ಲಿ ಮೈಸೂರು ಜಿಲ್ಲಾ ಪೊಲೀಸ್‌ಗೆ ಸೇರಿ ಎರಡು ವರ್ಷ ಕರ್ತವ್ಯ ನಿರ್ವಹಿಸಿದ ನಂತರ ಮತ್ತೊಮ್ಮೆ ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆ ಬರೆದು 2022ರಲ್ಲಿ ಮೈಸೂರು ನಗರ ಪೊಲೀಸ್ ವಿಭಾಗದಲ್ಲಿ ಸೇವೆ ಸಲ್ಲಿಸಲು ಅವಕಾಶ ದೊರೆಯಿತು. ಆರಂಭದಲ್ಲಿ ದಿನದ 24 ಗಂಟೆಯೂ ಕೆಲಸ ಮಾಡಬೇಕಾದ ಸಂದರ್ಭಗಳು ಬಂದಿವೆ. ಆದರೆ, ವೃತ್ತಿಯ ಮೇಲೆ ಅಪಾರ ವಿಶ್ವಾಸವಿದೆ. ನೊಂದವರಿಗೆ ಸಣ್ಣ ಪ್ರಮಾಣದಲ್ಲಾದರೂ ನ್ಯಾಯ ಕೊಡಿಸಬಹುದಲ್ಲಾ, ಸುರಕ್ಷತೆ ಒದಗಿಸಬಹುದಲ್ಲ ಎಂಬ ಆತ್ಮತೃಪ್ತಿ ಇದೆ ಎಂದರು.

ಎಳನೀರು } ಸ್ವಾವಲಂಬಿ ಬದುಕು ಕಟ್ಟಿಕೊಡ್ತು...

■ ಎಸ್.ಪಿ.ನಂಜಪ್ಪ
ಮೊ.9620755161



ಎಳನೀರು ಕೊಚ್ಚುತ್ತಿರುವ ನಾಗಮ್ಮ

ಬದುಕಿನ ಬಂಡಿ ಸಾಗಲು ಯಾವ ಕೆಲಸವಾದರೂ ಸರಿ ಎನ್ನುತ್ತದೆ ಮನಸ್ಸು. ಸದ್ಯಕ್ಕೆ ಈ ಕೆಲಸ ಹೊಟ್ಟೆ-ಬಟ್ಟೆಗೆ ಭದ್ರತೆ ಕೊಟ್ಟಿದೆ ಎನ್ನುತ್ತಾರೆ ಎಳನೀರು ಮಾರಾಟ ಮಾಡುವ ನಾಗಮ್ಮ. ಸ್ವತಂತ್ರ ಬದುಕನ್ನು ಕಟ್ಟಿಕೊಟ್ಟಿದೆ ಎಂದು ಎಳನೀರು ಕತ್ತರಿಸುತ್ತಾರೆ!

ಹೆಣ್ಣು ಮಕ್ಕಳು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ಆಗ ಮಾತ್ರ ಸ್ವತಂತ್ರ ಜೀವನ ನಡೆಸಲು ಸಾಧ್ಯ. ಆ ಕೆಲಸ, ಈ ಕೆಲಸ ಎನ್ನದೆ, ವಿದ್ಯೆ ಇಲ್ಲ ಎಂದು ಅಂಜದೆ ಸಿಕ್ಕ ಕೆಲಸದಲ್ಲೇ ನೆಮ್ಮದಿಯ ಬದುಕು ಕಟ್ಟಿಕೊಳ್ಳುವುದನ್ನು ಹೆಣ್ಣು ಮಕ್ಕಳು ಕಲಿಯಬೇಕು ಎನ್ನುತ್ತಾರೆ 60 ವರ್ಷದ ಎಳನೀರು ವ್ಯಾಪಾರಿ ನಾಗಮ್ಮ.

ಮೂಲತಃ ಮಂಡ್ಯ ಜಿಲ್ಲೆಯ ಕೆರಗೋಡು ಹೋಬಳಿಯ ಕೆಗೌಡಗೆರೆ ಗ್ರಾಮದವರಾಗಿರುವ ನಾಗಮ್ಮ, ಪ್ರಸ್ತುತ ಮೈಸೂರು ಜನತಾನಗರದಲ್ಲಿ ನೆಲೆಸಿದ್ದಾರೆ. 45 ವರ್ಷಗಳ ಹಿಂದೆ ಗೌಡಗೆರೆ ಗ್ರಾಮದ ಲೋಕೇಶ್ ಎಂಬುವವರಿಗೆ ನಮ್ಮ ಪೋಷಕರು ಅತೀ ಚಿಕ್ಕವಯಸ್ಸಿನಲ್ಲೇ ಮದುವೆ ಮಾಡಿ ಕೊಟ್ಟರು. ಪತಿ ಕಳೆದ ಮೂರೂವರೆ ವರ್ಷದ ಹಿಂದೆ ಅನಾರೋಗ್ಯದಿಂದ ಮೃತಪಟ್ಟರು. ಅಂದಿನಿಂದ ಅವರು ಮಾಡುತ್ತಿದ್ದ ಕಾಯಕ ಎಳನೀರು ವ್ಯಾಪಾರನ್ನೇ ಮುಂದುವರೆಸಿದ್ದೇನೆ ಎನ್ನುತ್ತಾರೆ.

ನಾನು ಓದು-ಬರಹ ಕಲಿತಿಲ್ಲ. ಆದರೂ ಗ್ರಾಹಕರೊಂದಿಗೆ ವ್ಯವಹರಿಸುತ್ತಲೇ ವ್ಯವಹಾರ ಜ್ಞಾನ ಕಲಿತೆ. ಇಲ್ಲಿಯವರೆಗೂ ಯಾವುದೇ ತೊಂದರೆ ಆಗಿಲ್ಲ.

ಗೌಡಗೆರೆಯಲ್ಲಿ ನಾನು ಮತ್ತು ಪತಿ ತುಂಬು ಕುಟುಂಬದಲ್ಲಿ ನೆಲೆಸಿದ್ದೆವು. ಊರಿನಲ್ಲಿ 10 ಗುಂಟೆ ಗದ್ದೆ, 10 ಗುಂಟೆ ಹೊಲ ನಮ್ಮ ಯಜಮಾನರಿಗೆ ಪಿತ್ರಾರ್ಜಿತವಾಗಿ ಬಂದಿತ್ತು ಆದರೆ, ಈ ಜಮೀನಿಂದ ಬರುವ ಕೃಷಿ ಆದಾಯ ಕಡಿಮೆ. ಇದರಿಂದ ಬದುಕು ನಿರ್ವಹಣೆ ಅಸಾಧ್ಯ ಎಂಬುದನ್ನು ಅರಿತು, 15 ವರ್ಷಗಳ ಹಿಂದೆಯೇ ಕೆಲಸ ಅರಸಿ ಮೈಸೂರಿಗೆ ಬಂದೆವು. ಬಂದ ಹೊಸದರಲ್ಲಿ ಅಲ್ಲಿ-ಇಲ್ಲಿ ಸಣ್ಣಪುಟ್ಟ ಕೆಲಸ ಮಾಡಿದೆವು. ಆದರೆ ಆ ಕೆಲಸದಿಂದ ಬರುವ ಹಣ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ.

ಸ್ವತಂತ್ರ ಬದುಕಿಗೆ ನಾಂದಿ: ಹಾಗಾಗಿ ನನ್ನ ಪತಿ, ಕೆಲವರ ಸಲಹೆ ಮೇರೆಗೆ ನ್ಯೂ ಕಾಂತರಾಜ ಅರಸು ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬಳಿ(ನಿವೇದಿತಾ ನಗರ ಆರ್ಚ್ ಬಳಿ) ಕಳೆದ ಹದಿಮೂರು ವರ್ಷಗಳಿಂದ ಎಳನೀರು ವ್ಯಾಪಾರವನ್ನು ಸಣ್ಣದಾಗಿ ಆರಂಭಿಸಿದೆವು. ಅಂದಿನಿಂದಲೂ ಈಗ ಪತಿಯ ಕೆಲಸದಲ್ಲಿ ನಾನು ನೆರವಾಗುತ್ತಿದ್ದೆ. ಕ್ರಮೇಣ ನಿತ್ಯವೂ 150ರಿಂದ 200 ಎಳನೀರು ಮಾರಾಟವಾಗುತ್ತಿದ್ದವು. ಹಾಗೆ ವ್ಯಾಪಾರ ಮುಂದುವರೆದಿತ್ತು. ಇದಕ್ಕಿದ್ದಂತೆ ನಮ್ಮ ಯಜಮಾನರು (ಮೂರೂವರೆ ವರ್ಷದ ಹಿಂದೆ) ಅನಾರೋಗ್ಯದಿಂದ ಮೃತಪಟ್ಟರು.

ನಂತರ ಜೀವನೋಪಾಯಕ್ಕಾಗಿ ಆರಂಭಿಸಿದ ಎಳನೀರು ವ್ಯಾಪಾರವೇ ನನ್ನ ಮುಂದಿನ ಬದುಕಿಗೂ ಆಧಾರವಾಯ್ತು. ಈ ವ್ಯಾಪಾರ ಎರಡು ಹೊತ್ತಿನ ಊಟಕ್ಕೆ ಪರವಾಗಿಲ್ಲ. ಪತಿ ಲೋಕೇಶ್ ಇದ್ದಾಗ ಎಳನೀರು ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದರಿಂದಲೇ ಈಗ ಸ್ವತಂತ್ರ ಜೀವನ ಕಟ್ಟಿಕೊಳ್ಳಲು ಸಾಧ್ಯವಾಗಿದೆ ಎಂದು ಪತಿ ನೆನೆದು ನಾಗಮ್ಮ ಭಾವುಕರಾದರು.


ನನಗೆ ಇಬ್ಬರು ಗಂಡು ಮಕ್ಕಳು ಉಮೇಶ, ರಾಜೇಶ. ಅವರಿಬ್ಬರಿಗೂ ಮದುವೆ ಆಗಿ ಅವರವರ ಹೆಂಡತಿ-ಮಕ್ಕಳ ಜೊತೆ ವಾಸವಿದ್ದಾರೆ. ಇಬ್ಬರು ಆಟೋ ಓಡಿಸಿ ಜೀವನ ಕಟ್ಟಿಕೊಂಡಿದ್ದಾರೆ. ಅವರಲ್ಲಿ ಒಬ್ಬ ಆಟೋ ಎಳನೀರಿನ ವ್ಯಾಪಾರವನ್ನು ಮಾಡುತ್ತಿದ್ದಾರೆ. ನನಗೂ ಸಹಾಯವಾಗುತ್ತಿದ್ದಾನೆ.

ನನಗೂ ನಾಟಕದ ಅಭಿರುಚಿ: ಕೆ.ಗೌಡಗೆರೆಯಲ್ಲಿದ್ದಾಗ ಪತಿ ಲೋಕೇಶ್, ಗ್ರಾಮಸ್ಥರೊಂದಿಗೆ ಸೇರಿ ಶನಿಮಹಾತ್ಮ, ಕುರುಕ್ಷೇತ್ರ ಸೇರಿದಂತೆ ಇತರೆ ಪೌರಾಣಿಕ ನಾಟಕದಲ್ಲಿ ಪಾತ್ರ ಮಾಡಿ ಸೈ ಎನಿಸಿಕೊಂಡಿದ್ದರು. ಅವರ ಅಭಿನಯವನ್ನು ನೋಡಿ, ನಾನೂ ಸಹ ನಾಟಕದಲ್ಲಿ ಸಣ್ಣಪುಟ್ಟ ಪಾತ್ರ ಮಾಡಿದ್ದ ನೆನಪು ಮಾಡಿಕೊಂಡು, 'ಶನಿಮಹಾತ್ಮ' ನಾಟಕದ ಹಾಡಿನ ತುಣುಕೊಂದನ್ನು ಹೇಳಿ ಸಂತೋಷಪಟ್ಟರು. ಈಗಲೂ ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಬೇಕೆಂಬ ಆಸೆಯಿದೆ. ಆದರೆ, ವಯಸ್ಸಾದ ಕಾರಣ ಆ ಗೋಜಿಗೆ ಹೋಗಿಲ್ಲ ಎಂದು ತಮ್ಮ ನಾಟಕ ಅಭಿನಯದ ಆಸೆಯನ್ನು ನಾಗಮ್ಮ ಬಿಚ್ಚಿಟ್ಟರು.


ಕೈಕಾಲು ಗಟ್ಟಿ ಇರುವತನಕ ಎಳನೀರು ಕೊಚ್ಚುತ್ತೇನೆ: ನನ್ನ ಪತಿ ನಿಧನರಾದ ಮೇಲೆ ಕೆಲ ದಿನ ಆತ್ಮಸ್ಥೈರ್ಯ ಕಳೆದುಕೊಂಡಿದ್ದೆ. ಕ್ರಮೇಣ ಸುಧಾರಿಸಿಕೊಂಡೆ. ಮಕ್ಕಳು-ಸೊಸೆಯಂದಿರ ಮೇಲೆ ಅವಲಂಭಿತವಾಗದೇ, ಕೈಕಾಲು ಗಟ್ಟಿ ಇರುವ ತನಕ ಈ ಕೆಲಸ ಮುಂದುವರೆಸುತ್ತೇನೆ. ಬೆಳಗ್ಗೆ 7.30ಕ್ಕೆ ವ್ಯಾಪಾರ ಸ್ಥಳಕ್ಕೆ ಬಂದರೆ, ಸಂಜೆ 6 ಗಂಟೆಯವರೆಗೂ ವ್ಯಾಪಾರ ಮಾಡುತ್ತೇನೆ. 6 ಗಂಟೆ ನಂತರ ನನ್ನ ಮಗ ವ್ಯಾಪಾರ ಮುಂದುವರೆಸುತ್ತಾನೆ. ಬಳಿಕ ಮನೆಗೆ ಹೋಗಿ ಬೇರೆ ಕೆಲಸಗಳಲ್ಲಿ ತೊಡಗುತ್ತೇನೆ ಎಂದು ಹೇಳಿ ಮಾತು ಮುಗಿಸಿದರು.

ಮಕ್ಕಳ ಚಿತ್ರಕಥೆ 'ನಾನೂ ಬುದ್ಧಿವಂತ ಎನ್ನಿಸಿಕೊಳ್ಳಬೇಕು...!'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಅದೊಂದು ದಡ್ಡರ ಸಂಘ. ಅಲ್ಲಿರುವವರೆಲ್ಲಾ ತಾವೇ ಬುದ್ಧಿವಂತರೆಂದು ಬಿಂಬಿಸಲು ಪ್ರಯತ್ನಿಸಿ ಸೋತವರು. ಒಂದು ದಿನ ಮೀಟಿಂಗ್ ಕರೆದರು. ಏನೇಆಗಲಿ ಇದಕ್ಕೊಂದು ಪರಿಹಾರ ಕಂಡುಹಿಡಿಯಲೇಬೇಕು. ಕನಿಷ್ಠ ಪಕ್ಷ ಒಬ್ಬ ಮನುಷ್ಯನಾದರೂ ನಮ್ಮನ್ನು ಬುದ್ಧಿವಂತರೆಂದು ಒಪ್ಪಿಕೊಳ್ಳುವಂತೆ ಮಾಡಬೇಕು ಅಂದುಕೊಂಡರು.




ಎಷ್ಟೇ ಮಾತುಕತೆಯಾದರೂ ಯಾರಿಗೂ ಏನೂ ಹೊಳೆಯಲಿಲ್ಲ. ಅವರಲ್ಲೊಬ್ಬ ಸಭೆಯಿಂದ ಹೊರಗಡೆ ಇದ್ದ ಬೀಡಾ ಅಂಗಡಿಯವನ ಬಳಿ ಬಂದ. ಅಂಗಡಿಯಲ್ಲಿ ಬೀಡಾ ಕಟ್ಟುತ್ತಿದ್ದವನನ್ನು ಮಾತನಾಡಿಸಿ,"ದಯವಿಟ್ಟು ಏನಾದರೊಂದು ಪ್ರಶ್ನೆ ಕೇಳಿ, ನಾನು ಉತ್ತರ ಹೇಳಿ ಬುದ್ಧಿವಂತ ಎನಿಸಿಕೊಳ್ಳಬೇಕಿದೆ" ಎಂದ.




ಸರಿ, ಅಂಗಡಿಯವ ಒಂದು ಪ್ರಶ್ನೆ ಕೇಳಿದ "ನಮ್ಮಪ್ಪನಿಗೆ ಇಬ್ಬರು ಗಂಡುಮಕ್ಕಳು, ಒಬ್ಬ ಅಮೆರಿಕಾದಲ್ಲಿದ್ದಾನೆ. ಇನ್ನೊಬ್ಬ ಎಲ್ಲಿದ್ದಾನೆ...?". ಇವನಿಗೆ ಏನೇ ಮಾಡಿದರೂ ಉತ್ತರ ಹೊಳೆಯಲಿಲ್ಲ. ಕಡೆಗೆ "ಗೊತ್ತಿಲ್ಲ" ಎಂದ.




ಅದಕ್ಕೆ ಅಂಗಡಿಯವನು "ಅಷ್ಟೂ ಗೊತ್ತಾಗಲಿಲ್ಲ ಅಂದ್ರೆ ನೀನು ಬುದ್ಧಿವಂತ ಹೇಗೆ ಆಗಲು ಸಾಧ್ಯ. ದಡ್ಡ... ದಡ್ಡ...., ಆ ಇನ್ನೊಬ್ಬ ನಾನೇ ಅಲ್ವಾ...!" ಎಂದ.



ಸರಿ, ಇವನು ತನ್ನ ಸಂಘದ ಇತರರ ಬಳಿಯಾದರೂ ಈ ಪ್ರಶ್ನೆ ಕೇಳಿ ನೋಡುವಾ...!" ಎಂದುಕೊಂಡು ಒಳಬಂದವನೇ ಎಲ್ಲರಿಗೂ ಅದೇ ಪ್ರಶ್ನೆ ಕೇಳಿದ,"ನಮ್ಮಪ್ಪನಿಗೆ ಇಬ್ಬರು ಗಂಡು ಮಕ್ಕಳು. ಒಬ್ಬ ಅಮೇರಿಕಾದಲ್ಲಿದ್ದಾನೆ... ಇನ್ನೊಬ್ಬ ಎಲ್ಲಿದ್ದಾನೆ...?. ಎಲ್ಲಾ ಸದಸ್ಯರೂ ತಲೆಕೆಡಿಸಿಕೊಂಡರೂ, ಯಾರಿಗೂ ಉತ್ತರ ಒಳೆಯಲಿಲ್ಲ.



ಕೊನೆಗೆ ಅಲ್ಪಸ್ವಲ್ಪ ಸುಧಾರಿಸಿಕೊಂಡಿದ್ದ ದಡ್ಡನೊಬ್ಬ ಅನುಮಾನಿಸುತ್ತಲೇ ಕೇಳಿದ, "ಬಹುಶಃ ಆ ಇನ್ನೊಬ್ಬ ನೀನೇ ಇರಬೇಕಲ್ವಾ...?". ತಕ್ಷಣ ಇವ ಹೇಳಿದ,"ತಪ್ಪು...ತಪ್ಪು... ಅದು ನಾನಲ್ಲಾ....ಹೊರಗೆ ಬೀಡಾ ಅಂಗಡಿ ಇಟ್ಟುಕೊಂಡಿದ್ದಾನಲ್ಲಾ ಅವನು....!".



ವಾರಭವಿಷ್ಯ

09.03.2025 ರಿಂದ 15.03.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕುಂಭ, ಮೀನ, ಚಂದ್ರ-ಮಿಥುನ, ಕಟಕ, ಸಿಂಹ, ಕನ್ಯಾ, ಕುಜ-ಮಿಥುನ, ಬುಧ, ಮೀನ, ಗುರು-ವೃಷಭ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ರೆಡಿಮೇಡ್ ವಸ್ತ್ರಗಳು ಹಾಗೂ ಅಲಂಕಾರಿಕ ವಸ್ತುಗಳ ವ್ಯಾಪಾರಗಳು ಭರಾಟೆಯಿಂದ ಸಾಗುವುದು. ವಿದೇಶ ಪ್ರಯಾಣಕ್ಕೆ ಪೂರ್ವ ಸಿದ್ಧತೆಗಳು ನಡೆದೀತು. ನೆರೆಹೊರೆಯವರ ವಿಚಾರದಲ್ಲಿ ಸಮಾಧಾನ ಚಿತ್ತದಿಂದ ವರ್ತಿಸಿ. ಹೊಸ ಯೋಜನೆಗಳು ಸಾಕಾರಗೊಳ್ಳಲು ಗುರುಬಲವಿದೆ. ಪ್ರಯತ್ನಶೀಲರಾಗಿ, ನೇಗಿಲಯೋಗಿಗಳಿಗೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು.
ಶ್ರೀ ಗಣಪತಿ ಪ್ರಾರ್ಥನೆ. ಶುಭ ಸಂಖ್ಯೆ-1

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಸರ್ಕಾರಿ ನೌಕರರು ತಮ್ಮ ಕಚೇರಿ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿ. ಅನ್ಯಥಾ ತೊಂದರೆಗೆ ಸಿಲುಕುವಿರಿ. ಐಟಿ-ಬಿಟಿ ಅಭ್ಯರ್ಥಿಗಳಿಗೆ ವಿದೇಶಿ ಉದ್ಯೋಗಕ್ಕೆ ಕರೆ ಬರಬಹುದು. ಮುಖ್ಯ ವಿಷಯಗಳಲ್ಲಿ ಮನೆಯ ಹಿರಿಯರೊಡನೆ ಚರ್ಚಿಸಿ ಮುಂದುವರೆದರೆ ಒಳಿತಾಗುವುದು. ವಾರಾಂತ್ಯಕ್ಕೆ ವನಿತಾಮಣಿಯರು ಪ್ರಸಾಧನ ಹಾಗೂ ಮನೋರಂಜನೆ ವಿಷಯಗಳಿಗೆ ಹೆಚ್ಚಿನ ಹಣ ವ್ಯಯಿಸುವರು.
ಶ್ರೀ ಚಾಮುಂಡೇಶ್ವರಿ ಆರಾಧನೆ. ಶುಭ ಸಂಖ್ಯೆ-3

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ಚಂದ್ರಗ್ರಹದ ಒಲುಮೆಯಿಂದ ಮನದಲ್ಲೂ ಮನೆಯಲ್ಲೂ ಸಂತಸದ ವಾತಾವರಣ ಇರುತ್ತದೆ. ನಂಬಿಕಸ್ಥ ಮಹಿಳೆಯೊಬ್ಬರು ನಿಮ್ಮ ಸಹಾಯಕ್ಕೆ ಬರುವರು. ಪಶುಪಾಲಕರಿಗೆ ಪಶು ಸಂಪತ್ತಿನ ವೃದ್ಧಿ ಉಂಟಾಗಲಿದೆ. ಕ್ಷೀರಜನ್ಯ ವಸ್ತು ವ್ಯಾಪಾರ ಹಾಗೂ ವಿತರಕರಿಗೆ ಉತ್ತಮ ಲಾಭ ದೊರೆಯುವುದು. ಫುಡ್ ಪಾಯ್ಸನ್‌ನಿಂದ ಆರೋಗ್ಯ ಕೆಟ್ಟು, ವೈದ್ಯರ ಭೇಟಿ ಅನಿವಾರ್ಯವಾದೀತು.
ಶ್ರೀ ವಿಷ್ಣುನಾಮ ಸ್ಮರಣೆ, ಶುಭ ಸಂಖ್ಯೆ-8

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ಹೊಸ ವ್ಯಾಪಾರ, ಉದ್ಯಮ ಸ್ಥಾಪನೆಯ ಪ್ರಯತ್ನಗಳಿಗೆ ಗುರುಗ್ರಹದ ಕೃಪೆ ಇದೆ. ಪ್ರಯತ್ನಗಳು ಮುಂದುವರೆಯಲಿ. ಧಾನ, ಧರ್ಮ ಕಾರ್ಯಗಳಲ್ಲಿ ಭಾಗವಹಿಸಿ ಜನಮನ್ನಣೆಗೆ ಪಾತ್ರರಾಗುವಿರಿ. ದೂರ ಸರಿದಿದ್ದವರು ಹತ್ತಿರ ಬರುವರು. ವಿದ್ಯಾ ಪ್ರಸಂಗಗಳಲ್ಲಿ ಉತ್ತಮ ಸಾಧನೆಯಿಂದ ಮಾನಸಿಕ ತೃಪ್ತಿ. ನ್ಯಾಯಾಲಯ ವಿಚಾರಗಳಲ್ಲಿ ಹಿನ್ನಡೆ ಉಂಟಾಗುವುದು. ರಾಜಕಾರಿಣಿಗಳಿಗೆ ಹಲವು ರೀತಿಯ ಅಗ್ನಿ ಪರೀಕ್ಷೆಗಳು.
ಶ್ರೀ ದುರ್ಗಾ ಸ್ತುತಿ. ಶುಭ ಸಂಖ್ಯೆ-4

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)
ಅಂದುಕೊಂಡಿದ್ದು ಜೀವನವಲ್ಲ, ಹೊಂದಿಕೊಂಡು ಹೋಗುವುದೇ ಜೀವನ. ರಿಯಲ್ ಎಸ್ಟೇಟ್ ಹೂಡಿಕೆಗಳನ್ನು ಚತುರತೆಯಿಂದ ಮಾಡಬೇಕು. ಸರ್ಕಾರಿ ಕಚೇರಿಗಳಿಗೆ ಅಲೆದಾಟ ತಪ್ಪದು. ವಾರದ ಉತ್ತರಾರ್ಧಕ್ಕೆ ಸಣ್ಣ ಉದ್ಯಮಪತಿಗಳಿಗೆ ಕೈತುಂಬಾ ಕೆಲಸ ಹಾಗೂ ಧನ ಲಾಭವಾಗುವುದು. ಸರ್ಕಾರಿ ನೌಕರರು ಅಡ್ಡ ಮಾರ್ಗದಲ್ಲಿ ಸಾಗಿ ತೊಂದರೆಗೆ ಗುರಿಯಾಗುವರು. ಮನೆ ದೇವರ ದರ್ಶನದಿಂದ ಮನಃಶಾಂತಿ.
ಶ್ರೀ ಸೂರ್ಯೋಪಾಸನೆ. ಶುಭ ಸಂಖ್ಯೆ-6

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದಾರಂಭಕ್ಕೆ ಕೆಲವರ ತಲೆಮರೆಯ ಕೆಲಸಗಳಿಂದ ತಲೆಬಿಸಿ. ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ಅವಕಾಶ ಒದಗಿ ಬಂದಿದೆ. ಕೌಟುಂಬಿಕ ವಿಚಾರಗಳಲ್ಲಿ ಉಂಟಾಗಿದ್ದ ವಿವಾದಗಳು ಹಿರಿಯರ ಮಧ್ಯಸ್ಥಿಕೆಯಿಂದ ದೂರವಾಗುವುದು. ನೂತನ ವಾಹನ ಹೊಂದಲು ಗ್ರಹಗಳ ಕೃಪೆಯಿದೆ. ವಾರಾಂತ್ಯಕ್ಕೆ ಮಕ್ಕಳ ಸಾಧನೆಯಿಂದ ಹರ್ಷ. ಐಹಿಕ ಸುಖ ಭೋಗಗಳನ್ನು ಅನುಭವಿಸುವಿರಿ.
ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ-7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಸ್ಪಷ್ಟತೆ ಇಲ್ಲದೆ ಮಾಡುವ ಕೆಲಸಗಳಲ್ಲಿ ನಕಾರಾತ್ಮಕ ಫಲಿತಾಂಶ ದೊರೆಯುವುದು. ಭಾಗ್ಯ ಬಂದಾಗ ಕಣ್ಣು ಮುಚ್ಚಿ ಕೂರಬೇಡಿ. ಹಣಕಾಸಿನ ಸ್ಥಿತಿ ಯಥಾಸ್ಥಿತಿಯಾಗಿ ಮುಂದುವರೆಯುವುದು. ವಾರದ ಉತ್ತರಾರ್ಧಕ್ಕೆ ಶುಭ ಕಾರ್ಯಗಳಿಗೆ ಮಾನಸಿಕ ಸಿದ್ಧತೆ. ಎಣ್ಣೆಕಾಳು ವ್ಯಾಪಾರಗಳಲ್ಲಿ ಅಧಿಕ ಲಾಭ. ಅಸಹಾಯಕರಿಗೆ ನೆರವಾಗಿ ಮನಸ್ಸಿಗೆ ಶಾಂತಿ, ತೀರ್ಥಕ್ಷೇತ್ರ ಸಂದರ್ಶನ.
ಶ್ರೀ ಗೋಮಾತೆಯ ಸೇವೆ ಮಾಡಿ. ಶುಭ ಸಂಖ್ಯೆ-9

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ
ಪ್ರೇಮ ಪ್ರಸಂಗಗಳಲ್ಲಿ ಸಂತಸ ದೊರೆಯುವುದು. ವಿವಾಹ ಯೋಗ್ಯರಿಗೆ ವಿಳೈಶಾಸ್ತ್ರ ಸಂಭವ. ಕುಟುಂಬ ಸಮೇತ ಪುಣ್ಯ ಸ್ಥಳ ಸಂದರ್ಶನ. ಪಶು-ಮಹಿಷ ವ್ಯಾಪಾರದಲ್ಲಿ ಧನಲಾಭ. ಸರಾಫ್ ವ್ಯಾಪಾರಿಗಳಿಗೆ ಬಂಪರ್ ವ್ಯಾಪಾರ. ವಾರ ಮಧ್ಯೆ ಮನೆಗೆ ಅತಿಥಿ, ಅಭ್ಯಾಗತರ ಆಗಮನ. ಅವರ ಆದರೋಪಚಾರಕ್ಕೆ ಹಣ ವ್ಯಯ. ಸಮಾಜ ಸೇವಾ ಕಾರ್ಯದಲ್ಲಿ ತೊಡಗಿ ಗೌರವಕ್ಕೆ ಪಾತ್ರರಾಗುವಿರಿ. ವಾಯುಪ್ರಕೋಪ ಕಾಡಬಹುದು.
ಶ್ರೀ ನರಸಿಂಹ ಪೂಜೆ. ಶುಭ ಸಂಖ್ಯೆ-5

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಸಪ್ತಾಹದ ಆದಿಗೆ ಸಜ್ಜನರ ಭೇಟಿಯಿಂದ ಸನ್ಮಾರ್ಗ ದರ್ಶನ. ಆದಾಯ-ವೆಚ್ಚಗಳು ಸಮನಾಗಿ ಸಾಗುವುದು. ರಫ್ತು ವ್ಯಾಪಾರಿಗಳಿಗೆ ಭರಪೂರ ಲಾಭ ದೊರೆಯುವುದು. ಕಬ್ಬಿಣ, ಸಿಮೆಂಟ್, ಫ್ಯಾಬ್ರಿಕೇಶನ್ ಉದ್ಯಮದವರಿಗೆ ಉತ್ತಮ ಆದಾಯ. ಆಡಿಟರ್‌ಗಳಿಗೆ ಬೇಡಿಕೆ ಹಾಗೂ ಉತ್ತಮ ಕಕ್ಷಿಗಾರರು ದೊರೆಯುವರು. ವಾರಾಂತ್ಯಕ್ಕೆ ವಾಹನ ರಿಪೇರಿ ಖರ್ಚುಗಳು ಎದುರಾಗುವುದು.
ಶ್ರೀ ರಾಹು-ಕೇಗು ಮಂತ್ರ ಜಪಿಸಿ. ಶುಭ ಸಂಖ್ಯೆ-3

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದಾರಂಭಕ್ಕೆ ಕೊಂಚ ಆರೋಗ್ಯದಲ್ಲಿ ವ್ಯತ್ಯಯ ಹಾಗೂ ಕಾರ್ಯವಿಘ್ನಗಳು ಕಾಡುತ್ತವೆ. ನಂತರ ಪ್ರೀತಿ ಪಾತ್ರರು ಹತ್ತಿರ ಬರುವರು. ವಿಶ್ವಾಸಾರ್ಹ ವ್ಯಕ್ತಿಯಿಂದ ಮಹತ್ವ ಯೋಜನೆಯು ಕಾರ್ಯರೂಪಕ್ಕೆ ಬರುವುದು. ಮನೆಯಲ್ಲಿ ಶುಭ, ಶೋಭನಾದಿ ಕಾರ್ಯಗಳು ಜರುಗುವುದು. ವಾರಾಂತ್ಯಕ್ಕೆ ಜಾತ್ರಾ ಮಂಗಳೋತ್ಸವಗಳಲ್ಲಿ ಭಾಗಿಯಾಗುವಿರಿ. ವಾತ ಸಂಬಂಧ ತೊಂದರೆ ಕಾಡುವುದು.
ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-8

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಈ ವಾರ ಸ್ವಲ್ಪ ಒತ್ತಡಭರಿತವಾಗಿರುತ್ತದೆ. ಹಣಕಾಸಿನ ವ್ಯವಹಾರಗಳನ್ನು ತುಂಬಾ ಎಚ್ಚರಿಕೆಯಿಂದ ಮಾಡಬೇಕು. ಯತ್ನ ಕಾರ್ಯಗಳು ನಿಧಾನಗತಿಯಿಂದ ಸಾಗುವುದು. ಚಂದ್ರಗ್ರಹ ಪ್ರಭಾವದಿಂದ ಶತ್ರುನಾಶ, ಋಣಮುಕ್ತಿ, ರೋಗ ನಿವೃತ್ತಿಯಂತಹ ಶುಭ ಚಿಹ್ನೆಗಳು ಕಾಣಬರುತ್ತವೆ. ವೈಯಕ್ತಿಕ ಕೆಲಸ ಕಾರ್ಯಗಳಲ್ಲಿ ವಿಶೇಷ ಆಸಕ್ತಿ ವಹಿಸುವಿರಿ. ಲೆಕ್ಕ ಪರಿಶೋಧಕರಿಗೆ ಉತ್ತಮ ವಾರ.
ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ಆಪ್ತೇಷ್ಟರ ಮಿಲನ, ಸಂತೋಷ ಕೂಟಗಳು. ಸಂದರ್ಭೋಚಿತ ಮಾತಿನಿಂದ ಕಾರ್ಯಾನುಕೂಲ. ಶಿಕ್ಷಕ ವರ್ಗದವರಿಗೆ ಸಂಶೋಧನೆಯಲ್ಲಿ ಆಸಕ್ತಿ. ವಿದ್ಯಾರ್ಥಿಗಳು ಅಭ್ಯಾಸದಲ್ಲಿ ನಿರಾಸಕ್ತಿ ತೋರುವರು. ಸರ್ಕಾರಿ ಅಧಿಕಾರಿಗಳು ಕಾನೂನುಬಾಹಿರ ಕೃತ್ಯವೆಸಗಿ ತೊಂದರೆಗೆ ಸಿಲುಕುವರು. ಯಾರೋ ಮಾಡಿದ ತಪ್ಪಿಗೆ ಬಲಿಪಶು ಆಗುವ ಸಾಧ್ಯತೆ ಇರುತ್ತದೆ.
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-7

ಮೈಸೂರು ಮಿತ್ರ ಭಾನುವಾರ 9 ಮಾರ್ಚ್ 2025

ಆಲಗೂಡು ಕೃಷಿ ಸಹಕಾರ ಸಂಘದ ಚುನಾವಣೆಯಲ್ಲಿ ನಟರಾಜು ಬಣ ಜಯಭೇರಿ

10 ಮಂದಿ ನಿರ್ದೇಶಕರಾಗಿ ಆಯ್ಕೆ, ನಿಕಟಪೂರ್ವ ಅಧ್ಯಕ್ಷರ ಬಣಕ್ಕೆ ಮುಖಭಂಗ

ತಿ.ನರಸೀಪುರ, ಮಾ.8– ಸಾರ್ವಜನಿಕ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದ್ದ ತಾಲೂಕಿನ ಆಲಗೂಡು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿಯಮಿತದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಪಿ.ನಟರಾಜು ನೇತೃತ್ವದ ಬಣ ಭರ್ಜರಿ ಜಯಗಳಿಸಿದ್ದು, ನಿಕಟಪೂರ್ವ ಅಧ್ಯಕ್ಷ ಬಿ.ವೀರಭದ್ರಪ್ಪ ಹಾಗೂ ಧರ್ಮಯ್ಯನಹುಂಡಿ ಮಲ್ಲಣ್ಣ ನೇತೃತ್ವದ ಬಣ ತೀವ್ರ ಮುಖಭಂಗ ಅನುಭವಿಸಿದೆ.

ಸಹಕಾರ ಸಂಘದ ಮಾಜಿ ಅಧ್ಯಕ್ಷ ಪಿ.ನಟರಾಜು ಬಣದಿಂದ 10 ಮಂದಿ ಸದಸ್ಯರು (ಅವಿರೋಧ ಆಯ್ಕೆ ಅಭ್ಯರ್ಥಿ ಸೇರಿ)ಗೆಲುವು ಸಾಧಿಸಿದರೆ, ಬಿ.ವೀರಭದ್ರಪ್ಪ ಹಾಗೂ ಮಲ್ಲಣ್ಣ ಬಣದಿಂದ ಕಣದಲ್ಲಿದ್ದ ಅಭ್ಯರ್ಥಿಗಳೆಲ್ಲರೂ ಸೋಲನುಭವಿಸಿದ್ದು, ತಂಡದ ನಾಯಕರು ಮಾತ್ರವೇ ಜಯಗಳಿಸಲು ಸಾಧ್ಯವಾಗಿದೆ.

ಬಿ.ವೀರಭದ್ರಪ್ಪ ಹಾಗೂ ಮಲ್ಲಣ್ಣ ಮಾತ್ರವೇ ತಮ್ಮ ತಮ್ಮ ತಂಡದಿಂದ ಗೆಲುವು ಸಾಧಿಸಿದರೆ, ಹೆಳವರಹುಂಡಿ ನಟರಾಜು ತಮ್ಮ ತಂಡದಿಂದ ಸ್ಪರ್ಧೆಗಿಳಿಸಿದ್ದ ಅಭ್ಯರ್ಥಿಗಳನ್ನೆಲ್ಲಾ ಗೆಲ್ಲಿಸುವ ಮೂಲಕ ಗೆಲುವಿನ ನಗೆ ಬೀರಿದ್ದಾರೆ.

ಆಲಗೂಡು ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆ ಸಂಬಂಧ ನಡೆದ ಚುನಾವಣೆಯನ್ನು ಮೂರು ಬಣದ ಸದಸ್ಯರು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದ ಹಿನ್ನೆಲೆಯಲ್ಲಿ ಚುನಾವಣೆ ಪೂರ್ವದಲ್ಲಿಯೇ ಫಲಿತಾಂಶದ ಬಗ್ಗೆ ಲೆಕ್ಕಾಚಾರಗಳು ಆರಂಭಗೊಂಡಿದ್ದವು. ಮೂರು ಬಣದವರು ಜಿದ್ದಿಗೆ ಬಿದ್ದವರಂತೆ ತಮ್ಮ ತಂಡದ ಅಭ್ಯರ್ಥಿಗಳೊಂದಿಗೆ ಗೆಲ್ಲುವ ಪಣದೊಂದಿಗೆ ಮತದಾರರನ್ನು ಭೇಟಿ ಮಾಡಿ ಮತಯಾಚನೆ ಮಾಡಿ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ್ದರು.



ತಿ.ನರಸೀಪುರ ತಾಲೂಕು ಆಲಗೂಡು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿಯಮಿತದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಪಿ.ನಟರಾಜು ನೇತೃತ್ವದ ಬಣ ಭರ್ಜರಿ ಜಯಗಳಿಸಿತು.

ಹೆಳವರಹುಂಡಿ ಸಹಕಾರ ಸಂಘದಲ್ಲಿ ಬೆಳಗ್ಗೆ 9 ಗಂಟೆಯಿಂದ ಆರಂಭವಾದ ಮತದಾನ ಪ್ರಕ್ರಿಯೆ ಸಂಜೆ 4 ರ ತನಕ ಬಿರುಸಿನಿಂದ ನಡೆದು 7 ಗಂಟೆ ವೇಳೆಗೆ ಫಲಿತಾಂಶ ಪ್ರಕಟವಾಯಿತು. ಚುನಾವಣಾಧಿಕಾರಿ ಹಸೀನಾ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೋಮಣ್ಣ, ಚುನಾವಣೆ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಸಹಕಾರ ಸಂಘದ ಮುಂದೆ ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಸಾಲಗಾರರ ಕ್ಷೇತ್ರದಿಂದ ಪಿ.ನಟರಾಜು (340), ನಾಗಣ್ಣ(278), ಮಹದೇವ (219), ಶಿವಣ್ಣ(212), ಮಹದೇವಮ್ಮ (254), ಕಾಂತಮ್ಮ(213), ಹೆಚ್.ಮರಿಸ್ವಾಮಿ (236), ಜಯಣ್ಣ (144) ಮತ ಪಡೆದರೆ, ಸಾಲಗಾರರಲ್ಲದ ಕ್ಷೇತ್ರದಿಂದ ಹೆಳವರಹುಂಡಿ ಸಹದೇವ 154 ಮತ ಪಡೆದು ಜಯಗಳಿಸಿದರು.

ಇನ್ನುಳಿದಂತೆ ಬಣದ ನಾಯಕತ್ವ ವಹಿಸಿದ್ದ ಬಿ.ವೀರಭದ್ರಪ್ಪ (230) ಹಾಗೂ ಮಲ್ಲಣ್ಣ (256) ಮತ ಪಡೆದು ತಮ್ಮ ತಂಡದಿಂದ ಜಯಗಳಿಸಿದರು. ಆಲಗೂಡು ಕ್ಷೇತ್ರದಿಂದ ನಂಜುಂಡ ಅವಿರೋಧವಾಗಿ ಆಯ್ಕೆಯಾದರು.

ಈ ವೇಳೆ ಮಾತನಾಡಿದ ಮಾಜಿ ಅಧ್ಯಕ್ಷ ಪಿ.ನಟರಾಜು, ಸಹಕಾರ ಸಂಘದ ವ್ಯಾಪ್ತಿಗೊಳಪಡುವ ಮತ ಬಾಂಧವರು ನಮ್ಮಮೇಲೆ ವಿಶ್ವಾಸವಿಟ್ಟು ಭರ್ಜರಿ ಜಯ ತಂದು ಕೊಟ್ಟಿದ್ದಾರೆ,ಅವರ ನಂಬಿಕೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಾಮಾಣಿಕವಾದ ಕೆಲಸ ಮಾಡುತ್ತೇನೆ ಎಂದರು.

ಸಾಲಗಾರರಲ್ಲದ ಕ್ಷೇತ್ರದಿಂದ ಗೆಲುವು ಸಾಧಿಸಿದ ಎಂ.ಕೆ.ಸಹದೇವ ಮಾತನಾಡಿ ಸಹಕಾರ ಸಂಘದಿಂದ ರೈತರಿಗೆ ದೊರಕಬಹುದಾದ ಎಲ್ಲ ಸವಲತ್ತುಗಳನ್ನು ರೈತರಿಗೆ ನೇರವಾಗಿ ತಲುಪಿಸಲಾಗುತ್ತದೆ ಎಂದರು.

ಈ ವೇಳೆ ಪುರಸಭಾ ಸದಸ್ಯರಾದ ಬಾದಾಮಿ ಮಂಜು, ಎಸ್. ಕೆ. ಕಿರಣ್, ಅಲಗೂಡು ನಾಗಣ್ಣ, ರಾಚಪ್ಪ, ಮುದ್ದಬೀರನಹುಂಡಿ ಗುರುಸ್ವಾಮಿ, ವೃಷಭೇಂದ್ರ, ಬನ್ನಳ್ಳಿಹುಂಡಿ ಶಿವಕುಮಾರ್, ತಾಪಂ ಮಾಜಿ ಸದಸ್ಯ ರಮೇಶ್, ಅಮಾವಾಸ್ಯೆ ಗೌಡ, ತಾಲೂಕು ಕುರುಬರ ಸಂಘದ ನಿರ್ದೇಶಕರಾದ ಮೋಹಿತ್, ಮಹೇಶ್, ಮೂಗೂರು ಹರೀಶ್, ಚೌವಳ್ಳಿ ಗುರುಮಲ್ಲ, ಸಿದ್ದೇಗೌಡ, ಗಣೇಶ್, ಕಿಶೋರ್ ಕುಮಾರ್, ಮಂಜು, ಎಚ್. ಬಿ ಚಿಕ್ಕನಂಜಯ್ಯ, ಅರುಣ್ ಕುಮಾರ್, ಸ್ಟಾರ್ ಮಲ್ಲೇಶ್, ಸುರೇಶ್ ಮತ್ತಿತರಿದ್ದರು.

ಆಸ್ತಿಗಾಗಿ ಸಹೋದರರು ಕೋರ್ಟ್ ಮೆಟ್ಟಿಲೇರುತ್ತಿದ್ದಾರೆ

ಲೋಕ್ ಅದಾಲತ್‌ನಲ್ಲಿ ನ್ಯಾಯಾಧೀಶರಾದ ಸುರೇಶ್ ವಿಷಾದ



ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮವನ್ನು ಪ್ರಧಾನ ಸಿವಿಲ್ ಜೆಎಮ್‌ಎಫ್‌ಸಿ ನ್ಯಾಯಾಧೀಶರಾದ ಎಸ್.ಎನ್.ಸುರೇಶ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಮಾ.8– ಇತ್ತೀಚಿನ ದಿನಗಳಲ್ಲಿ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಸಹೋದರರು ಆಸ್ತಿಗಾಗಿ ಕಚ್ಚಾಡಿಕೊಂಡು ನ್ಯಾಯಾಲಯದ ಮೆಟ್ಟಿಲೇರುತ್ತಿದ್ದಾರೆ ಎಂದು ಪ್ರಧಾನ ಸಿವಿಲ್ ಜೆಎಮ್‌ಎಫ್‌ಸಿ ನ್ಯಾಯಾಧೀಶರಾದ ಎಸ್.ಎನ್. ಸುರೇಶ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಶನಿವಾರ ನಡೆದ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹೋದರರು ಆಸ್ತಿಯನ್ನು ಹಣ್ಣನ್ನು ಹಂಚಿಕೊಂಡ ರೀತಿ ಸಮವಾಗಿ ಹಂಚಿಕೊಂಡರೆ ಯಾವುದೇ ವ್ಯಾಜ್ಯಗಳು ಇರುವುದಿಲ್ಲ, ಸಮವಾಗಿ ಹಂಚಿಕೊಳ್ಳದ ಹಿನ್ನೆಲೆ ಅವರು ನ್ಯಾಯಾಲಯದ ಮೆಟ್ಟಿಲೇರುವ ಸ್ಥಿತಿ ಉದ್ಭವಿಸುತ್ತಿದೆ ಎಂದ ಅವರು, ಹತ್ತಾರು ವರ್ಷಗಳು ವ್ಯಾಜ್ಯ ನಡೆದ ಬಳಿಕ ನ್ಯಾಯಾಲಯದಲ್ಲಿ ಸಮವಾಗಿ ಆಸ್ತಿಯನ್ನು ಹಂಚಲಾಗುವುದು ಎಂದರು.

ಹಿರಿಯ ಸಿವಿಲ್ ಜೆಎಮ್‌ಎಫ್‌ಸಿ ನ್ಯಾಯಾಧೀಶರಾದ ಬಿ. ಸಂದೇಶ್ ಪ್ರಭು ಮಾತನಾಡಿ, ಸಣ್ಣ ವ್ಯಾಜ್ಯಗಳನ್ನು ಪ್ರತಿಷ್ಠೆಗಾಗಿ ಕೋರ್ಟ್‌ವರೆಗೂ ತರಲಾಗುತ್ತಿದೆ. ಆಧುನಿಕ ಯುಗದಲ್ಲಿ ಸತಿ–ಪತಿಯರ ಕಲಹಗಳು ಹೆಚ್ಚುತ್ತಾ ಸಾಗಿವೆ. ಸತಿ–ಪತಿಯರ ಜಗಳಗಳು ಇಂದು ಡೈವೋರ್ಸ್‌ನಲ್ಲಿ ಕೊನೆಗೊಳ್ಳುತ್ತಿವೆ ಎಂದರು.

ಸಣ್ಣ ಸಣ್ಣ ಜಗಳಗಳಲ್ಲಿ ಸತಿಯಾಗಲಿ, ಪತಿಯಾಗಲಿ ಅನುಸರಿಸಿಕೊಂಡು ಹೋಗುವ ಗುಣವನ್ನು ಬೆಳೆಸಿಕೊಂಡು ಹೋದಲ್ಲಿ ಸುಖೀ ಸಂಸಾರಕ್ಕೆ ಅನುವಾಗುತ್ತದೆ, ಕೋರ್ಟ್ ವ್ಯಾಜ್ಯಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಲಿವೆ ಎಂದರು. ಇದೇ ವೇಳೆ ಲೋಕ್ ಅದಾಲತ್‌ಗೆ ಸಂಬಂಧಿಸಿದ ವೀಡಿಯೋವನ್ನು ಬಿತ್ತರಿಸಲಾಯಿತು.

ಇದೇ ಸಂದರ್ಭದಲ್ಲಿ ಎರಡನೇ ಹೆಚ್ಚುವರಿ ನ್ಯಾಯಾಧೀಶರಾದ ಸುಷ್ಮಾ, ವಕೀಲರ ಸಂಘದ ಅಧ್ಯಕ್ಷ ಗಂಗರಾಜು, ಮುನಿರಾಜ್ ಇದ್ದರು

ಡೈವೋರ್ಸ್‌ಗೆ ಬಂದಿದ್ದ ದಂಪತಿಗಳನ್ನು ಒಂದುಗೂಡಿಸಿದ ನ್ಯಾಯಾಧೀಶರು



ಇದೇ ಸಂದರ್ಭದಲ್ಲಿ ಮಾಚನಾಯಕನಹಳ್ಳಿ ಗ್ರಾಮದ ಗೌರಮ್ಮ ಶಿವಲಿಂಗಶೆಟ್ಟಿ ದಂಪತಿಗಳ ಪುತ್ರಿ ಜಯಶ್ರೀ ಮತ್ತು ಮೈಸೂರಿನ ಗಾಯಿತ್ರಿರವರ ಪುತ್ರ ವಿನಯಕುಮಾರ್ ಕಳೆದ 9 ವರ್ಷಗಳ ಹಿಂದೆ ಮದುವೆಯಾಗಿ ಕಳೆದ ಒಂದು ವರ್ಷದ ಹಿಂದೆ ವೈಮನಸ್ಸಿನಿಂದ ಬೇರೆ ಬೇರೆಯಾಗಿದ್ದರು. ಈ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಿ ಲೋಕ್ ಅದಾಲತ್‌ನಲ್ಲಿ ಇಬ್ಬರು ದಂಪತಿಗಳನ್ನು ಒಂದುಗೂಡಿಸಿದರು. ನ್ಯಾಯಾಲಯದ ಸಿಬ್ಬಂದಿ ನವೀನ್ ಪೌರೋಹಿತ್ಯವನ್ನು ವಹಿಸಿದರು. ಇಬ್ಬರು ದಂಪತಿಗಳನ್ನು ನ್ಯಾಯಾಲಯದಲ್ಲಿ ಪೋಷಕರು ಮತ್ತು ನ್ಯಾಯ ದೇವತೆಯ ಮುಂದೆ ಮರುಮದುವೆ ಮಾಡುವುದರ ಮೂಲಕ ಲೋಕ್ ಅದಾಲತ್ ಯಶಸ್ಸಿಗೆ ಕಾರಣರಾದರು. ನಂತರ ದಂಪತಿಗಳಿಗೆ ಒಂದಾಗಿ ಬಾಳುವಂತೆ ತಿಳಿ ಹೇಳಿದರು.

ಹಲ್ಲರೆ ಪಿಎಸಿಎಸ್‌ಗೆ ಅಧ್ಯಕ್ಷರಾಗಿ ಬಸವರಾಜ್ ಅವಿರೋಧ ಆಯ್ಕೆ



ನೂತನ ಅಧ್ಯಕ್ಷರಾಗಿ ಬಸವರಾಜ್ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಮಲ್ಕುಂಡಿ, ಮಾ.8– ಸಮೀಪದ ಹಲ್ಲರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಸವರಾಜ್ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಸವರಾಜ್, ಉಪಾಧ್ಯಕ್ಷ ಸ್ಥಾನಕ್ಕೆ ಪುಟ್ಟಮಾದಯ್ಯ ನಾಮಪತ್ರ ಸಲ್ಲಿಸಿದರು. ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಇವರ ಆಯ್ಕೆಯನ್ನು ಚುನಾವಣೆ ಅಧಿಕಾರಿ ಅವಿನಾಶ್ ಘೋಷಣೆ ಮಾಡಿದರು.

ನೂತನ ಅಧ್ಯಕ್ಷ ಬಸವರಾಜ್ ಮಾತನಾಡಿ, ಸಂಘದಿಂದ ದೊರೆಯುವ ಸೌಲಭ್ಯಗಳನ್ನು ಸಕಾಲಕ್ಕೆ ತಲುಪಿಸುವ ಕೆಲಸ ಮಾಡುತ್ತೇನೆ. ಎಲ್ಲಾ ಸದಸ್ಯರ ಸಹಕಾರದೊಂದಿಗೆ ಸಂಘದ ಬೆಳವಣಿಗೆಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ತಿಳಿಸಿದರು. ಉಪಾಧ್ಯಕ್ಷ ಪುಟ್ಟಮಾದಯ್ಯ, ನಿರ್ದೇಶಕರುಗಳಾದ ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಸಿ.ಮಹದೇವಸ್ವಾಮಿ, ಶಿವಮೂರ್ತಿ, ಶಿವಣ್ಣನಾಯಕ, ಬಸವಣ್ಣ ರಾಜಪ್ಪ ಸೈವುಲ್ಲಾ, ಭಾಗ್ಯ ಚೆನ್ನಮ್ಮ ಶಿವಣ್ಣ ಸ್ವಾಮಿ, ಮುಖಂಡರುಗಳಾದ ಶಿವಬುದ್ದಿ, ನಾಗರಾಜು, ಸ್ವಾಮಿ, ನಂಜುಂಡಪ್ಪ, ಮುದ್ದಮಲ್ಲಪ್ಪ, ಪ್ರಕಾಶ್, ಸಿಇಓ ಹೆಚ್.ಡಿ.ಶಿವಕುಮಾರ್, ಗುಮಾಸ್ತ ಮಹದೇವಸ್ವಾಮಿ, ಅಟೆಂಡರ್ ರಮೇಶ್, ಸೇರಿದಂತೆ ಪ್ರಮುಖರು ಹಾಜರಿದ್ದರು

ಮಾ.11, ಶ್ರೀ ದುರ್ಗಮ್ಮ–ಮರ್ಗಮ್ಮ ದೇವಿಯ 118ನೇ ವರ್ಷದ ಅಡ್ಡಪಲ್ಲಕ್ಕಿ ಉತ್ಸವ

ಹುಣಸೂರು, ಮಾ.8– ನಗರದ ಸರಸ್ವತಿಪುರಂನಲ್ಲಿ ನೆಲೆಸಿರುವ ಐತಿಹಾಸಿಕ ಶ್ರಿ ದುರ್ಗಮ್ಮ–ಮರುಗಮ್ಮ ದೇವಿಯ 118ನೇ ವರ್ಷದ ವಾರ್ಷಿಕೋತ್ಸವ ಮತ್ತು ಅಡ್ಡಪಲ್ಲಕ್ಕಿ ಉತ್ಸವ ಮಾ.11 ರಿಂದ 13ರವರೆಗೆ ಮೂರು ದಿನಗಳ ಕಾಲ ಅದ್ದೂರಿಯಾಗಿ ನಡೆಯಲಿದೆ ಎಂದು ದೇವಸ್ಥಾನದ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.



ಮಾ.11 ಮಂಗಳವಾರ ಬೆಳಿಗ್ಗೆ 6 ಗಂಟೆಗೆ ಅಭಿಷೇಕ ಹೂವಿನ ಅಲಂಕಾರ ಹಾಗೂ ಕುಂಕುಮಾರ್ಚನೆ ನಡೆಯಲಿದೆ ಮತ್ತು ಬೆಳಿಗ್ಗೆ 11 ಗಂಟೆಗೆ ಮಹಾ ಮಂಗಳಾರತಿ ಸಂಜೆ 4 ಗಂಟೆಗೆ ಲಕ್ಷ್ಮಣ ತೀರ್ಥ ನದಿಯಿಂದ ಅಡ್ಡಪಲ್ಲಕ್ಕಿಯಲ್ಲಿ ಶುದ್ಧ ಗಂಗಾಜಲದೊಂದಿಗೆ ಶ್ರೀದುರ್ಗಮ್ಮ–ಮರ್ಗಮ್ಮ ದೇವಿಯರಿಗೆ ಹೋಮ ಹವನ ಹಾಗೂ ದೇವರ ಪೂಜಾ ಅಲಂಕಾರದೊಂದಿಗೆ ಹುಣಸೂರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಕರೆತರಲಾಗುವುದು. ಮಾ.12ರಂದು ಬೆಳಗ್ಗೆ 5.30ಕ್ಕೆ ಸರಸ್ವತಿಪುರಂನಿಂದ ನಗರದ ಪ್ರಮುಖ ಬೀದಿಗಳಲ್ಲಿ ತಂಬಿಟ್ಟು ಆರತಿ ಮೆರವಣಿಗೆಯಲ್ಲಿ ಬಂದು ಶ್ರೀದುರ್ಗಮ್ಮ–ಮರ್ಗಮ್ಮ ದೇವಿಯವರಿಗೆ ತಂಬಿಟ್ಟು ಆರತಿ, ತಂಪು ತಲುಪಿದ ನಂತರ ಮಹಾ ಮಂಗಳಾರತಿ ಮಾಡಲಾಗುವುದು. ಮಾ.13ರಂದು ಬೆಳಗ್ಗೆ 8 ಗಂಟೆಯಿಂದ ಹೋಳಿ ಹಬ್ಬವನ್ನು ಆಚರಿಸಲಾಗುವುದು. ಈ ಎಲ್ಲಾ ಕಾರ್ಯಕ್ರಮಗಳಿಗೆ ಭಕ್ತಾದಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿ ಕೃಪೆಗೆ ಪಾತ್ರರಾಗಬೇಕೆಂದು ಆಚರಣಾ ಸಮಿತಿಯ ಅಧ್ಯಕ್ಷರು ಮತ್ತು ನಗರಸಭಾ ಸದಸ್ಯರು ಕೋರಿದ್ದಾರೆ.

ಜಿಂಕೆಗಳ ಹಾವಳಿ, ಸುನಾಮಿ ಬೆಳೆ ನಾಶ





ಜಿಂಕೆಗಳ ಹೆಜ್ಜೆ ಗುರುತು.

ಹನಗೋಡು, ಮಾ.8– ಜಿಂಕೆಗಳು ರಾತ್ರಿ ಸಮಯದಲ್ಲಿ ರೈತರ ಜಮೀನಿಗೆ ಲಗ್ಗೆ ಇಟ್ಟು ಸುನಾಮಿ (ಸಾಂಬಾರು ಸೌತೆಕಾಯಿ) ಬೆಳೆಯನ್ನು ತಿಂದು ನಾಶ ಮಾಡಿರುವ ಘಟನೆ ಹನಗೋಡು ಹೋಬಳಿ ಬಿ.ಆರ್ ಕಾವಲು ಗ್ರಾಮದಲ್ಲಿ ನಡೆದಿದೆ.

ಬಿ.ಆರ್.ಕಾವಲು ಗ್ರಾಮದ ರೈತ ಸಣ್ಣೇಗೌಡರ ಮಗ ನಾಗೇಗೌಡರವರಿಗೆ ಸೇರಿದ ಜಮೀನಿನಲ್ಲಿ ರಾತ್ರಿ ವೇಳೆಯಲ್ಲಿ ಜಿಂಕೆಗಳು ಬೆಳೆಯನ್ನು ತಿಂದು ನಾಶ ಮಾಡಿವೆ. ಸುಮಾರು ಒಂದು ಎಕರೆಯಷ್ಟು ಬೆಳೆಯನ್ನು ತಿಂದಿದ್ದು, ಅಂದಾಜು 50 ರಿಂದ 80 ಸಾವಿರ ರೂಪಾಯಿಗಳಷ್ಟು ನಷ್ಟವಾಗಿದೆ. ಅಂಬು ಹಬ್ಬಿ ಬೆಳೆ ಕಟಾವಿಗೆ ಬರುವ ಹೊತ್ತಿನಲ್ಲಿ ಪ್ರಾಣಿಗಳು ನಾಶ ಮಾಡುತ್ತಿವೆ.

ರೈತ ನಾಗೇಗೌಡ ಮಾತನಾಡಿ, ಸಾಲ ಮಾಡಿ ವ್ಯವಸಾಯ ಮಾಡಿದ್ದರೂ ಈ ರೀತಿಯ ಬೆಳೆ ನಾಶದಿಂದ ಮತ್ತೆ ನಾವು ಸಾಲದ ಸುಳಿಗೆ ಸಿಲುಕುವಂತಾಗುತ್ತಿದೆ. ಕಾಡಂಚಿನ ಭಾಗದಲ್ಲಿ ಅರಣ್ಯಾಧಿಕಾರಿಗಳ ನಿರ್ಲಕ್ಷ್ಯದಿಂದ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ, ಮೊದಲೆ ಬೆಳೆದ ಬೆಳೆಗೆ ಬೆಲೆಯಿಲ್ಲದೆ ಕಂಗಾಲಾಗಿರುವ ನಮಗೆ ಈ ರೀತಿಯ ಕಾಡುಪ್ರಾಣಿಗಳ ಹಾವಳಿಯಿಂದ ಮತ್ತಷ್ಟು ಸಂಕಷ್ಟ ಎದುರಾಗುತ್ತಿದೆ. ಈ ಬಗ್ಗೆ ಅರಣ್ಯಾಧಿಕಾರಿಗಳು ಗಮನವಹಿಸಿ ಪ್ರಾಣಿಗಳ ಹಾವಳಿಯನ್ನು ತಡೆಗಟ್ಟಿ ಸೂಕ್ತ ಪರಿಹಾರ ನೀಡಬೇಕಾಗಿದೆ ಎಂದಿದ್ದಾರೆ.

ಯತೀಶ್‌ಕುಮಾರ್‌ಗೆ ಪಿಎಚ್.ಡಿ



ಮೈಸೂರು: ಡಾ. ಬಿ. ಮಹದೇವಪ್ಪ ಅವರ ಮಾರ್ಗದರ್ಶನದಲ್ಲಿ ಯತೀಶ್‌ಕುಮಾರ್ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸತ್ಯ ಶೋಧನೆಯೇ ವಿಜ್ಞಾನದ ಗುರಿ

ನಂಜನಗೂಡು, ಮಾ.8– ವಿಜ್ಞಾನದ ಆವಿಷ್ಕಾರಗಳು ಆವಿಷ್ಕಾರಗಳಾಗಿ ಉಳಿಯುದೇ ನಿತ್ಯ ಜೀವನದಲ್ಲಿ ಪ್ರಾಯೋಗಿಕವಾಗಿ ಬಳಕೆಯಾದಾಗ ಮಾತ್ರ ಸಂಶೋಧನೆ ಸಾರ್ಥಕತೆಯಾಗುತ್ತದೆ ಎಂದು ಶಿಕ್ಷಣ ಇಲಾಖೆಯ ರಾಜ್ಯ ಸಂಪನ್ಮೂಲ ವ್ಯಕ್ತಿ ಹಾಗೂ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಎಸ್.ಹರ್ಷ ಹೇಳಿದರು.



ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆಯ ರಾಜ್ಯ ಸಂಪನ್ಮೂಲ ವ್ಯಕ್ತಿ ಹಾಗೂ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಎಸ್.ಹರ್ಷ ಉದ್ಘಾಟಿಸಿದರು.

ತಾಲೂಕಿನ ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸತ್ಯ ಶೋಧನೆಯೇ ವಿಜ್ಞಾನದ ಗುರಿಯಾಗಿರುವುದರಿಂದ ಅನೇಕ ಸತ್ಯ ಸಂಗತಿಗಳು ಬೆಳಕಿಗೆ ಬರಲು ಸಾಧ್ಯವಾಗಿದೆ. ಸಂಶೋಧನೆಗಳು ಹಾಗೂ ಆವಿಷ್ಕಾರಗಳು ನಮ್ಮ ಬದುಕಿನಲ್ಲಿ ಪ್ರಾಯೋಗಿಕವಾಗಿ ಬಳಕೆಯಾಗಬೇಕು. ವಿದ್ಯಾರ್ಥಿಗಳಿಗೆ ಸರಳ ನಿದರ್ಶನಗಳ ಮೂಲಕ ವಿಜ್ಞಾನವನ್ನು ಅರ್ಥ ಮಾಡಿಸಬೇಕು. ವಿಷಯದ ಕ್ಲಿಷ್ಟತೆ ಮತ್ತು ಸರಳತೆ ಬೋಧಿಸುವವರ ಮೇಲೆ ನಿರ್ಧಾರವಾಗುತ್ತದೆ, ಆದ್ದರಿಂದ ಶಿಕ್ಷಕರು ಸದಾ ಸಂಶೋಧಕನಾಗಿ ಹೊಸ ಹೊಸ ಬೋಧನಾ ವಿಧಾನಗಳನ್ನು ಕಂಡುಕೊಂಡು ಬೋಧಿಸಿದಾಗ ವಿಷಯದ ಮೇಲೆ ವಿದ್ಯಾರ್ಥಿಗಳಿಗೆ ಆಸಕ್ತಿ ಹೆಚ್ಚುತ್ತದೆ ಎಂದು ತಿಳಿಸಿದರು.

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ ಮಾತನಾಡಿ, ವಿಜ್ಞಾನದಿಂದ ವಿಕಾಸ, ವಿಜ್ಞಾನದಿಂದಲೇ ವಿನಾಶ ಎಂಬ ಮಾತಿದೆ. ಹಾಗಾಗಿ ವಿಜ್ಞಾನದ ಆವಿಷ್ಕಾರಗಳನ್ನು ಅಭಿವೃದ್ಧಿಗೆ ಬಳಸಿಕೊಂಡು ಪ್ರಕೃತಿ ನಿಯಮಗಳಿಗೆ ಬದ್ಧರಾಗಿ ಬದುಕುವ ಕಲೆಯನ್ನು ರೂಢಿಸಿಕೊಂಡು ಜ್ಞಾನ ಸಂಪಾದನೆಯೊಂದಿಗೆ ಮಾದರಿ ಶಿಕ್ಷಕರಾಗಬೇಕು ಎಂದು ಹೇಳಿದರು.

ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಎಚ್.ಎಂ. ಮಹೇಶ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಶೋಧನಾತ್ಮಕ ಮನೋಭಾವವಿರಬೇಕು. ನಮ್ಮ ದಿನನಿತ್ಯದ ಬದುಕಿನಲ್ಲಿ ವಿಜ್ಞಾನ ಹಾಸುಹೊಕ್ಕಾಗಿದೆ. ಹಾಗಾಗಿ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಕೌತುಕವನ್ನು ಅರಿಯುವ ಕುತೂಹಲವನ್ನು ಬೆಳಸಬೇಕು. ಸರಿಯಾದ ಉದ್ದೇಶದೊಂದಿಗೆ ವಿಜ್ಞಾನದ ಕಲಿಕೆಗೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಬೇಕು ಎಂದು ತಿಳಿಸಿದರು.

ಸಹಾಯಕ ಸಂಯೋಜನಾಧಿಕಾರಿ ವೀರಭದ್ರಯ್ಯ ಸೇರಿದಂತೆ ಸಹಾಯಕ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಇಂದು ಶ್ರೀ ಕಾಳಒಡೆಯ ಗುರುಗಳ ದಾಸೋಹ ಭವನ ಉದ್ಘಾಟನೆ

ಸರಗೂರು, ಮಾ.8– ಸರಗೂರು ಪಟ್ಟಣದ ಬಿಡಗಲು ಪಡುವಲು ಶ್ರೀವಿರಕ್ತ ಮಠದಲ್ಲಿ ಶ್ರೀ ಕಾಳಒಡೆಯ ಗುರುಗಳ ಆರಾಧನೆ ಹಾಗೂ ಶ್ರೀ ಕಾಳಒಡೆಯ ಗುರುಗಳ ದಾಸೋಹ ಭವನ ಉದ್ಘಾಟನೆ ಹಾಗೂ ವೀರಶೈವ ಲಿಂಗಾಯತ ವಧು–ವರರ ಉಚಿತ ಸಾಮೂಹಿಕ ವಿವಾಹ ಭಾನುವಾರ (ಮಾ.9) ನಡೆಯಲಿದೆ.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ದಿವ್ಯಸಾನ್ನಿಧ್ಯ ವಹಿಸಲಿದ್ದು, ಕನಕಪುರ ದೇಗುಲ ಮಠದ ಚನ್ನಬಸವಸ್ವಾಮೀಜಿ ದಿವ್ಯ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮವನ್ನು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ್ ಬಿ.ಖಂಡ್ರೆ ಉದ್ಘಾಟಿಸಲಿದ್ದಾರೆ. ಬಸವೇಶ್ವರ ಭಾವಚಿತ್ರ ಅನಾವರಣ ಸಮಾಜ ಕಲ್ಯಾಣ ಇಲಾಖೆ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಮಾಡುವರು.

ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಸಲಿದ್ದಾರೆ, ಚಾಮರಾಜನಗರ ಲೋಕಸಭಾ ಸದಸ್ಯ ಸುನೀಲ್ ಬೋಸ್, ಗುಂಡ್ಲುಪೇಟೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್, ಮೈಸೂರು ಅಪಾರ ಜಿಲ್ಲಾಧಿಕಾರಿ ಪಿ.ಶಿವರಾಜು ಸೇರಿದಂತೆ ವಿವಿಧ ಮಠಾಧೀಶರು, ಸಮಾಜದ ಗಣ್ಯರು ಭಾಗವಹಿಸುವರು.

ಕೋರ್ಟ್ ಆದೇಶದ ಮೇರೆಗೆ ಮತ ಎಣಿಕೆ

ತಿ.ನರಸೀಪುರ ಪ್ರಾಥಮಿಕ ಕೃಷಿ, ಗ್ರಾಮೀಣ ಬ್ಯಾಂಕಿಗೆ ಮಹದೇವಣ್ಣ ಬಣ ಜಯಭೇರಿ

ತಿ.ನರಸೀಪುರ, ಮಾ.8– ನ್ಯಾಯಾಲಯದ ಆದೇಶದ ಮೇರೆಗೆ ತಡೆಹಿಡಿಯಲಾಗಿದ್ದ ತಿ.ನರಸೀಪುರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಇಬ್ಬರು ನಿರ್ದೇಶಕರ ಸ್ಥಾನದ ಆಯ್ಕೆಗೆ ಶನಿವಾರ ಮತ ಎಣಿಕೆ ನಡೆದು ಹಾಲಿ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ಬಣದ ಸದಸ್ಯರು ಭರ್ಜರಿ ಜಯಸಾಧಿಸಿದರು.

ಸಾಲಗಾರರಲ್ಲದ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎನ್.ಅನಿಲ್‌ಕುಮಾರ್ ಹಾಗೂ ಬನ್ನೂರು ಸಾಲಗಾರರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಆರ್.ಮಹೇಶ್ ಜಯ ಸಾಧಿಸುವ ಮೂಲಕ ಹಾಲಿ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ತಮ್ಮ ಅಧ್ಯಕ್ಷ ಸ್ಥಾನದ ಕುರ್ಚಿ ಭದ್ರಪಡಿಸಿಕೊಂಡಿದ್ದಾರೆ.



ತಿ.ನರಸೀಪುರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಾಲಗಾರರಲ್ಲದ ಕ್ಷೇತ್ರದಿಂದ ಎನ್.ಅನಿಲ್ ಕುಮಾರ್, ಬನ್ನೂರು ಸಾಲಗಾರರ ಕ್ಷೇತ್ರದಿಂದ ಆರ್.ಮಹೇಶ್ ಜಯಗಳಿಸಿದರು.

ಸಾಲಗಾರರಲ್ಲದ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎನ್.ಅನಿಲ್‌ಕುಮಾರ್ 169 ಮತಗಳನ್ನು ಪಡೆದು ಭರ್ಜರಿ ಗೆಲುವು ದಾಖಲಿಸಿದರೆ, ಪ್ರತಿಸ್ಪರ್ಧಿಗಳಾಗಿದ್ದ ಬಿ.ಎಲ್. ಕೃಷ್ಣೇಗೌಡ 128 ಹಾಗೂ ಕೆ.ಪ್ರಭುಸ್ವಾಮಿ14 ಮತ ಪಡೆದು ಪರಾಭವಗೊಂಡರು. ಎನ್.ಅನಿಲ್‌ಕುಮಾರ್ ರವರು ಅಂತಿಮ ಅರ್ಹ ಮತದಾರರ ಪಟ್ಟಿ ರೀತ್ಯ 100 ಮತಗಳನ್ನು ಪಡೆದರೆ ಉಚ್ಚ ನ್ಯಾಯಾಲಯದ ಆದೇಶದಂತೆ 69 ಮತಗಳನ್ನು ಪಡೆದುಕೊಂಡರು.

ಬನ್ನೂರು ಸಾಲಗಾರರ ಕ್ಷೇತ್ರದಿಂದ ಆರ್.ಮಹೇಶ್ 69 ಮತ ಪಡೆದು ಜಯಪಡೆದರೆ, ಕೆ.ರಾಜೇಶ್ 48 ಮತ ಪಡೆದರು. ಹಾಲಿ ನಿರ್ದೇಶಕ ಬಿ.ಸಿ.ಪಾರ್ಥಸಾರಥಿ ಕೇವಲ 7 ಮತ ಪಡೆಯುವ ಮೂಲಕ ತೀವ್ರ ಮುಖಭಂಗ ಅನುಭವಿಸಿದರು.

ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಒಟ್ಟು 14 ಸ್ಥಾನಗಳ ನಿರ್ದೇಶಕರ ಆಯ್ಕೆಗಾಗಿ ಫೆ.2 ರಂದು ಚುನಾವಣೆ ನಡೆದು ಹೆಮ್ಮಿಗೆ ಸೋಮಣ್ಣ, ಲಿಂಗಪ್ಪಾಜಿ, ಎಸ್.ಮಹೇಶ್, ಎಂ.ಎಸ್.ಶಿವಮೂರ್ತಿ ಹಾಗೂ ಟಿ.ಎಸ್. ಪ್ರಸನ್ನ ಜಯಗಳಿಸಿದ್ದರು.

ಬ್ಯಾಂಕಿನ ಹಾಲಿ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಕೆ.ವಜ್ರೇಗೌಡ, ಎಂ.ಮಹದೇವ, ಎನ್.ಎನ್.ಮಹದೇವಸ್ವಾಮಿ, ರಾಜಮಣಿ, ಎಂ.ನಾಗರತ್ನ, ಎಂ.ಮಲ್ಲಿಕಾರ್ಜುನ ಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬನ್ನೂರು ಸಾಲಗಾರರ ಕ್ಷೇತ್ರ ಹಾಗೂ ಸಾಲಗಾರರಲ್ಲದ ಕ್ಷೇತ್ರದ ಚುನಾವಣೆ ಮತಎಣಿಕೆ ಕಾರ್ಯವನ್ನು ನ್ಯಾಯಾಲಯದ ಆದೇಶದ ಮೇರೆಗೆ ತಡೆಹಿಡಿಯಲಾಗಿತ್ತು. ಉಚ್ಚ ನ್ಯಾಯಾಲಯದ ಆದೇಶದಂತೆ ಶನಿವಾರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಿಸಲಾಯಿತು.

ಚುನಾವಣಾಧಿಕಾರಿ ಮನೋಜ್ ಕುಮಾರ್ ಮತ ಎಣಿಕೆ ಪ್ರಕ್ರಿಯೆ ನಡೆಸಿ ಫಲಿತಾಂಶ ಪ್ರಕಟಿಸಿದರು. ಈ ವೇಳೆ ಬ್ಯಾಂಕಿನ ಮುಂದೆ ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ವೇಳೆ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹಾದೇವಣ್ಣ, ಬನ್ನೂರು ಪುರಸಭೆ ಅಧ್ಯಕ್ಷ ಕೃಷ್ಣೇಗೌಡ, ನಿರ್ದೇಶಕರಾದ ಎನ್.ಎನ್. ಮಹದೇವಸ್ವಾಮಿ, ಎನ್. ಲಿಂಗಪ್ಪಾಜಿ, ತುರಗನೂರು ಪ್ರಸನ್ನ, ಎಸ್.ಮಹೇಶ್, ಹೆಮ್ಮಿಗೆ ಸೋಮಣ್ಣ, ತಾಪಂ ಮಾಜಿ ಸದಸ್ಯ ನರಸೇಗೌಡ, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಹೇಶ್, ಗುತ್ತಿಗೆದಾರ ರಮೇಶ್, ಸೋಮಣ್ಣ, ಪುರಸಭಾ ಮಾಜಿ ಅಧ್ಯಕ್ಷ ಎನ್. ಸೋಮು, ಸದಸ್ಯ ಸಿ. ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ಆನಂದ್, ರಘು, ಕೆ.ಎಸ್. ಮಹೇಶ್, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಗೋಪಿ, ಮುಡುಕನಪುರ ನಾಗಭೂಷಣ, ಚೌಹಳ್ಳಿ ಗುರುಮಲ್ಲ, ಮೂಗೂರು ಹರೀಶ್, ಸೇರಿದಂತೆ ಮತ್ತಿತರಿದ್ದರು.

ಸಹಕಾರ ಸಂಘದ ಅಭಿವೃದ್ಧಿಗೆ ಶ್ರಮಿಸುವೆ....!

ಸಹಕಾರ ಸಂಘದಿಂದ ರೈತ ಸಮುದಾಯಕ್ಕೆ ದೊರಕಬಹುದಾದ ಸವಲತ್ತುಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನದ ಜೊತೆಗೆ ಹಿರಿಯರ ಮಾರ್ಗದರ್ಶನದಲ್ಲಿ ಸಂಘದ ಅಭಿವೃದ್ಧಿಗೆ ಅಧ್ಯಕ್ಷ –ಉಪಾಧ್ಯಕ್ಷರ ಸಹಕಾರ ನೀಡಿ ತಾಲೂಕಿನಲ್ಲಿಯೇ ನಮ್ಮ ಬ್ಯಾಂಕನ್ನು ಮಾದರಿ ಬ್ಯಾಂಕ್ ಮಾಡಲು ಶ್ರಮಿಸುತ್ತೇನೆ, ನನ್ನ ಗೆಲುವಿಗೆ ಶಾಸಕ ಯತೀಂದ್ರ, ಪಕ್ಷಾತೀತವಾಗಿ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಕೃಷ್ಣೇಗೌಡ ಹಾಗೂ ಹಾಲಿ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ಸೇರಿದಂತೆ ಇನ್ನಿತರೆ ಮುಖಂಡರು ಕಾರಣಕರ್ತರಾಗಿದ್ದು ಅವರಿಗೆಲ್ಲ ಅಭಿನಂದನೆ ಸಲ್ಲಿಸುತ್ತೇನೆ.

-ಎನ್.ಅನಿಲ್ ಕುಮಾರ್

ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ನೂತನ ನಿರ್ದೇಶಕ

ಕುಮಾರಿ ನಂಜಪ್ಪ ನಿಧನ



ಹುಣಸೂರು, ಮಾ.8– ನಗರದ ಕರಿಗೌಡರ ಬೀದಿ ವಾಸಿ ಲೇಟ್ ಸೊಸೈಟಿ ನಂಜಪ್ಪ ಅವರ ಪತ್ನಿ ಕುಮಾರಿ ನಂಜಪ್ಪ (73) ಇಂದು ಸಂಜೆ ನಿಧನರಾದರು.

ಮೃತರು ಇಬ್ಬರು ಪುತ್ರರಾದ ತಾಪಂ ಮಾಜಿ ಉಪಾಧ್ಯಕ್ಷ ಹಾಗೂ ಟಿಎಪಿಸಿಎಂಎಸ್ ಸೊಸೈಟಿಯ ಮಾಜಿ ಅಧ್ಯಕ್ಷ ಜಿ.ಎನ್.ವೆಂಕಟೇಶ್ (ಪಾಪು) ಹಾಗೂ ಗುತ್ತಿಗೆದಾರ ಜಿ.ಎನ್.ಸತ್ಯನಾರಾಯಣ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಮಾ.9) ಮಧ್ಯಾಹ್ನ ಹಜಾದ್‌ನಗರದ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮದ್ಯ, ಮಾದಕ ವಸ್ತುಗಳಿಗೆ ದಾಸರಾಗಿ ಬದುಕು ಹಾಳು ಮಾಡಿಕೊಳ್ಳಬೇಡಿ

● ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಯುವ ಸಮೂಹಕ್ಕೆ ಕಿವಿಮಾತು

● 'ಮದ್ಯ, ಮಾದಕ ವಸ್ತುಗಳ ದುಷ್ಪರಿಣಾಮ' ಕುರಿತ ವಿಚಾರ ಸಂಕಿರಣ



ಮೈಸೂರಿನ ಯುವರಾಜ ಕಾಲೇಜಿನಲ್ಲಿ ಆಯೋಜಿಸಿದ್ದ 'ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ' ಕುರಿತ ವಿಚಾರ ಸಂಕಿರಣವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಉದ್ಘಾಟಿಸಿದರು.

ಮೈಸೂರು, ಮಾ.8– ಮದ್ಯ ಹಾಗೂ ಮಾದಕ ವಸ್ತುಗಳಿಗೆ ದಾಸರಾಗಿ ನಿಮ್ಮ ಬದುಕನ್ನು ನಾಶ ಮಾಡಿಕೊಳ್ಳಬೇಡಿ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ, ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಯುವರಾಜ ಕಾಲೇಜು ಅಮೃತ ಮಹೋತ್ಸವ ಭವನದಲ್ಲಿ ಆಯೋಜಿಸಿದ್ದ 'ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ' ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮದ್ಯ ಹಾಗೂ ಮಾದಕ ವಸ್ತುಗಳ ದಾಸರಾದರೆ ಸುಂದರ ಬದುಕು ನಾಶವಾಗುತ್ತದೆ. ಒಮ್ಮೆ ದುಶ್ಚಟಕ್ಕೆ ಬಲಿಯಾದರೆ, ಅದರಿಂದ ಹೊರಬರುವುದು ಸುಲಭವಲ್ಲ. ಹಾಗಾಗಿ ಯಾವುದೇ ಕಾರಣಕ್ಕೂ ಮಾದಕ ವಸ್ತುಗಳ ಸೆಳೆತಕ್ಕೆ ಬಲಿಯಾಗಬೇಡಿ ಎಂದು ಸಲಹೆ ನೀಡಿದರು.

ನಿಮಗೆ ಸರಿ–ತಪ್ಪುಗಳ ಬಗ್ಗೆ ಅರಿವಿದೆ. ನಿಮ್ಮ ಬದುಕು ಹೇಗಿರಬೇಕೆಂದು ನೀವೇ ನಿರ್ಧರಿಸಿಕೊಂಡು, ಆ ನಿಟ್ಟಿನಲ್ಲಿ ಮುನ್ನಡೆಯಬೇಕು. ಸ್ವಯಂಪ್ರೇರಣೆಯಿಂದ ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಉತ್ತಮ ಸ್ನೇಹಿತರ ಒಡನಾಟದಲ್ಲಿರಬೇಕು. ಒಳ್ಳೆಯದನ್ನು ಅನುಸರಿಸಿ, ಕೆಟ್ಟದನ್ನು ತಿರಸ್ಕರಿಸುವ ಮನಃಸ್ಥಿತಿ ಬೆಳೆಸಿಕೊಳ್ಳಬೇಕು. ಯಾವುದೇ ಪರಿಸ್ಥಿತಿಯಲ್ಲೂ ಮಾದರಿಯಾಗಿರಲು ಪ್ರಯತ್ನಿಸಬೇಕು. ಮದ್ಯ, ಮಾದಕ ವಸ್ತುಗಳಂತೆ ಮೊಬೈಲ್‌ಗೆ ದಾಸರಾಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದು ತಿಳಿಸಿದರು.

ನಗರ ಪೊಲೀಸ್ ಸಂಚಾರ ವಿಭಾಗದ ಎಸಿಪಿ ಶಿವಶಂಕರ್ ಮಾತನಾಡಿ, ಯುವಜನತೆ ದೇಶದ ಉತ್ತಮ ಪ್ರಜೆಗಳಾಗುವ ಸಂಕಲ್ಪ ತೊಡಬೇಕು. ಮೆದುಳು ಮತ್ತು ಉದರದ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಭವಿಷ್ಯವೇ ಹಾಳಾಗುತ್ತದೆ. ಮಾದಕ ವ್ಯಸನಿಗಳಾದರೆ ನಿಮ್ಮ ಮೆದುಳು ಕೆಟ್ಟದನ್ನೇ ಯೋಚಿಸುತ್ತದೆ. ಅದರಿಂದ ಉದರವೂ ಹಾಳಾಗಿ ಕಾಯಿಲೆಗಳಿಗೆ ತುತ್ತಾಗಬೇಕಾಗುತ್ತದೆ. ಕೆಲವರು ಜೊತೆಗಾರರನ್ನೂ ಹಾಳು ಮಾಡುತ್ತಾರೆ. ಈ ಬಗ್ಗೆ ಎಚ್ಚರವಿರಲಿ ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ಮಾತನಾಡಿ, ಆರೋಗ್ಯ ಇಲ್ಲದೇ ನಾವು ಏನನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ದುಶ್ಚಟಕ್ಕೆ ಬಲಿಯಾದರೆ ಎಷ್ಟೇ ಬುದ್ಧಿವಂತರಾಗಿದ್ದರೂ ಪ್ರಯೋಜನವಿಲ್ಲ. ಒಳ್ಳೆಯ ವಿಚಾರಗಳನ್ನು ಅಧ್ಯಯನ ಮಾಡಿ, ಆ ಬಗ್ಗೆ ಚರ್ಚಿಸಿ. ಒಳ್ಳೆಯವರ ಸಹವಾಸ ಇಟ್ಟುಕೊಳ್ಳಿ. ಮದ್ಯ ಹಾಗೂ ತಂಬಾಕು ವ್ಯಸನಿಗಳಾದರೆ ಚಿಕ್ಕ ವಯಸ್ಸಿನಲ್ಲೇ ಬಹು ಅಂಗಾಂಗ ವೈಫಲ್ಯವಾಗುತ್ತದೆ ಎಂದು ತಿಳಿಸಿದರು.

ಕೆ.ಆರ್.ಆಸ್ಪತ್ರೆ ಮನೋರೋಗ ತಜ್ಞರಾದ ಡಾ.ಬಿ.ಎನ್.ರವೀಶ್ ಮಾತನಾಡಿ, ಬೆಳಗ್ಗೆ ಎದ್ದ ತಕ್ಷಣ ನಿಮ್ಮನ್ನು ನೀವು ನೋಡಿಕೊಳ್ಳಿ. ಸ್ವಯಂ ನಿಯಂತ್ರಣವಿದ್ದರೆ ದುಶ್ಚಟಗಳಿಗೆ ಬಲಿಯಾಗಲು ಸಾಧ್ಯವಿಲ್ಲ. ಮಾದಕ ವಸ್ತುಗಳಿಂದ ಜನರ ಆರೋಗ್ಯ ಕೆಡುವುದರ ಜೊತೆಗೆ ಅಪರಾಧ ಹೆಚ್ಚಾಗುತ್ತಿದೆ. ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗುತ್ತಿರುವುದು ದುರ್ದೈವ. ಹಾಗಾಗಿ ಇಂತಹ ಅರಿವು ಕಾರ್ಯಕ್ರಮಗಳನ್ನು ಹೆಚ್ಚಾಗಿ ನಡೆಸಬೇಕು. ಪೋಷಕರು ತಮ್ಮ ಮಕ್ಕಳ ಮೇಲೆ ಗಮನವಿಡಬೇಕು. ನಮ್ಮ ಬದುಕಿಗೆ ನಾವೇ ಶಿಲ್ಪಿಗಳಾಗಬೇಕು. ದೇಹ ಮತ್ತು ಮೆದುಳಿಗೆ ದುಷ್ಪರಿಣಾಮ ಬೀರುವ ಯಾವುದೇ ವಸ್ತುವಾದರೂ ಅದು ಮಾದಕ ಎನ್ನುವುದನ್ನು ತಿಳಿದಿರಬೇಕು. ಕುತೂಹಲಕ್ಕೂ ಇಂತಹ ಕೆಲಸಗಳಿಗೆ ಮುಂದಾಗದೆ, ಒಳ್ಳೆಯ ಅಭ್ಯಾಸಗಳನ್ನು ರೂಪಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ತಿಳಿಹೇಳಿದರು.

ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಟಿ.ಕೆ.ಹರೀಶ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಮುಖ್ಯ ವರದಿಗಾರ ಎಸ್.ಟಿ. ರವಿಕುಮಾರ್, ಯುವರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಮಹದೇವಮೂರ್ತಿ, ಆಡಳಿತಾಧಿಕಾರಿ ಅಜಯ್ ಕುಮಾರ್ ಸೇರಿದಂತೆ ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ರಾಕ್ಷಸ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಕ್ಷಸ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಕ್ಷಸ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಶಬ್ದಂ(ತ)	4 ಪ್ರದರ್ಶನಗಳು
ಸಂಗಂ	
ಕಪಾತಿ (ಕ)+ ಸೂರಿ ಲವ್ಸ್ ಸಂಧ್ಯಾ(ಕ)	2+2 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಕ್ಷಸ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಹಿಳಾ ದಿನಾಚರಣೆ ಅಂಗವಾಗಿ ಕೃತಕ ಕಾಲು ಜೋಡಣೆ ಕಾರ್ಯಕ್ರಮ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಲಯನ್ಸ್ ಗೋಲ್ಡನ್ ಸಿಟಿ, ಸ್ತ್ರೀಶಕ್ತಿ ಮಹಿಳಾ ವೇದಿಕೆಯಿಂದ ಕೃತಕ ಕಾಲು ಜೋಡಣೆ ಕಾರ್ಯಕ್ರಮ ನಡೆಸಲಾಯಿತು.

ಮೈಸೂರು, ಮಾ.8(ಜಿಎ)–ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಲಯನ್ಸ್ ಗೋಲ್ಡನ್ ಸಿಟಿ, ಸ್ತ್ರೀಶಕ್ತಿ ಮಹಿಳಾ ವೇದಿಕೆಯಿಂದ ಕೃತಕ ಕಾಲು ಜೋಡಣೆ ಕಾರ್ಯಕ್ರಮ ನಡೆಸಲಾಯಿತು.

ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಈ ಕಾರ್ಯಕ್ರಮವನ್ನು ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷ ಡಾ.ಸಿ.ಪಿ. ಮಧು ಉದ್ಘಾಟಿಸಿದರು. ನಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಉದ್ಯಮಿಗಳಾದ ಹೇಮಂತ್ ಬನ್ನಾಲಿ, ಎಂ. ಬಸವರಾಜು, ಕೆಎಂಎಫ್ ಹಿರಿಯ ಉಪ ನಿರ್ದೇಶಕ ಪೂರ್ಣಚಂದ್ರ ತೇಜಸ್ವಿ, ರೋಟರಿ ಮೈಸೂರು ಸ್ಟಾರ್ ಫೌಂಡರ್‌ನ ಸಂತೋಷ್ ಎಸ್.ಗೌಡ ಕೃತಕ ಕಾಲು ವಿತರಿಸಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಮಹಿಳಾ ದಿನಾಚರಣೆ ದಿನದಂದು ಈ ರೀತಿಯ ಉತ್ತಮ ಕಾರ್ಯ ಮಾಡುತ್ತಿರುವುದು ಸಂತಸದ ವಿಚಾರವಾಗಿದೆ. ಪ್ರತಿಯೊಬ್ಬರ ಯಶಸ್ಸಿನ ಹಿಂದೆ ಮಹಿಳೆಯ ಪಾತ್ರ ಪ್ರಮುಖವಾಗಿದ್ದು, ಅದಕ್ಕೆ ಮಹಿಳೆಯರ ಬಗ್ಗೆ ಅಪಾರ ಗೌರವವಿದೆ. ಸದ್ಯದಲ್ಲಿಯೇ ಕಾಂಗ್ರೆಸ್ ವತಿಯಿಂದ ಉಚಿತ ಆರೋಗ್ಯ ತಪಾಸಣೆ ನಡೆಸಲಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ಸ್ತ್ರೀಶಕ್ತಿ ಮಹಿಳಾ ವೇದಿಕೆ ಅಧ್ಯಕ್ಷೆ ಎಸ್. ಪ್ರಮೀಳಾ ಸ್ವಾಗತಿಸಿದರು. ಲಯನ್ಸ್‌ಕ್ಲಬ್ ಗೋಲ್ಡನ್ ಸಿಟಿಯ ಕಾರ್ಯದರ್ಶಿ ಟಿ. ಸುರೇಶ್ ಉಪಸ್ಥಿತರಿದ್ದರು.

ಮಾತೃಭಾಷೆ ಕನ್ನಡ ಪ್ರೀತಿಸಿ, ಜೊತೆಗೆ ಇಂಗ್ಲಿಷ್ ಕಲಿಯಿರಿ

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಕರೆ



ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಇಂಗ್ಲಿಷ್ ವಿಭಾಗವು ಪ್ರಕಟಿಸಿರುವ ನಾಲ್ಕು ಪಠ್ಯ ಪುಸ್ತಕಗಳನ್ನು ಶನಿವಾರ ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಬಿಡುಗಡೆಗೊಳಿಸಿದರು.

ಮೈಸೂರು, ಮಾ.8(ಜಿಎ)–ಮಾತೃಭಾಷೆ ಕನ್ನಡವನ್ನು ಪ್ರೀತಿಸಿ, ಅದರ ಜೊತೆಗೆ ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿಯಿರಿ ಎಂದು ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ, ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಇಂಗ್ಲಿಷ್ ವಿಭಾಗವು ಪ್ರಕಟಿಸಿರುವ ನಾಲ್ಕು ಪಠ್ಯ ಪುಸ್ತಕಗಳನ್ನು ಶನಿವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, ಕನ್ನಡ ಮಾಧ್ಯಮದಲ್ಲಿ ಓದಿದ ನಾನು ಪ್ರಾಥಮಿಕ ಹಂತದಿಂದಲೇ ಇಂಗ್ಲಿಷ್ ವಿಷಯವನ್ನು ಕೂಡ ಚೆನ್ನಾಗಿ ಕಲಿತಿದ್ದರಿಂದ ಕೆಎಎಸ್ ಪರೀಕ್ಷೆ ಪಾಸು ಮಾಡಲು ಸಾಧ್ಯವಾಯಿತು. ನೀವು ಕೂಡ ಅಷ್ಟೇ ಇಂಗ್ಲಿಷ್ ಅನ್ನು ಚೆನ್ನಾಗಿ ಕಲಿತರೆ, ಸಂವಹನ ಕೌಶಲ್ಯ ಚೆನ್ನಾಗಿದ್ದರೆ ಉದ್ಯೋಗಾವಕಾಶಗಳು ಸಿಗುತ್ತವೆ ಎಂದರು.

ಕಠಿಣ ಪರಿಶ್ರಮದ ಮುಂದೆ ಯಾವುದೂ ಇಲ್ಲ. ನೀವು ಚೆನ್ನಾಗಿ ಓದಿದರೆ ಯಾವುದೇ ಪರೀಕ್ಷೆಯನ್ನಾದರೂ ಕೂಡ ಪಾಸು ಮಾಡಬಹುದು. ಸದಾ ಮೊಬೈಲ್‌ನಲ್ಲಿ ಮುಳುಗಿದ್ದರೆ ಅದರಲ್ಲಿಯೇ ಕೆಲಸ ಹುಡುಕಿಕೊಳ್ಳಬೇಕಾಗುತ್ತದೆ. ಇಂಗ್ಲಿಷ್ ಪತ್ರಿಕೆಗಳನ್ನು ಓದಿ, ರೇಡಿಯೋದಲ್ಲಿ ಇಂಗ್ಲಿಷ್ ವಾರ್ತೆಗಳನ್ನು ಆಲಿಸಿ, ಟಿವಿಗಳಲ್ಲಿ ಇಂಗ್ಲಿಷ್ ಚರ್ಚೆಗಳನ್ನು ಗಮನಿಸಿ, ಇದರಿಂದ ಭಾಷೆಯನ್ನು ಕಲಿಯಲು ಸಹಕಾರಿಯಾಗಲಿದೆ ಎಂದು ಸಲಹೆ ನೀಡಿದರು.

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಸ್ವಾಯತ್ತ ಕಾಲೇಜು ಆಗಿರುವುದರಿಂದ ವಿಭಾಗದ ಪ್ರಾಧ್ಯಾಪಕರೇ ಸೇರಿ ವಿವಿಗಿಂತ ಭಿನ್ನವಾಗಿ ಪ್ರಥಮ ಹಾಗೂ ದ್ವಿತೀಯ ಸೆಮಿಸ್ಟರ್ ಬಿಸಿಎ, ಬಿ.ಎಸ್ಸಿ ವಿದ್ಯಾರ್ಥಿನಿಯರಿಗಾಗಿ ನಾಲ್ಕು ಪಠ್ಯಪುಸ್ತಕಗಳನ್ನು ಐಎಸ್‌ಬಿಎನ್ ಸಂಖ್ಯೆಯೊಂದಿಗೆ ರೂಪಿಸಿದ್ದಾರೆ. ಇಲ್ಲಿ ಮಹಿಳಾ ಕೇಂದ್ರಿತ ಕಥೆಗಳು, ಕವನಗಳು, ಪ್ರಬಂಧಗಳು, ಲೇಖನಗಳು ಹೆಚ್ಚಿವೆ. ಹೀಗಾಗಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದೇ ಬಿಡುಗಡೆ ಮಾಡಿದ್ದು ವಿಶೇಷ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮಾನಸ ಗಂಗೋತ್ರಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಪ್ರೊ ರಮೇಶ್ ಜಯರಾಮಯ್ಯ, ಜೆಎಸ್‌ಎಸ್ ಮಹಿಳಾ ಕಾಲೇಜಿನ ನಿವೃತ್ತ ಪ್ರಾಂಶುಪಾಲೆ ಡಾ.ಎಂ. ಪೂರ್ಣಿಮಾ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಪ್ರಾಂಶುಪಾಲ ಪ್ರೊ.ಅಬ್ದುಲ್ ರೆಹಿಮಾನ, ಶೈಕ್ಷಣಿಕ ಡೀನ್ ಡಾ.ಹೆಚ್. ಆರ್.ಶ್ರೀಪಾದ್, ಇಂಗ್ಲಿಷ್ ವಿಭಾಗದ ಬಿಒಎಸ್ ಅಧ್ಯಕ್ಷ ಡಾ.ಜಿ.ಪರಶುರಾಮಮೂರ್ತಿ, ಐಕ್ಯೂಎಸಿ ಸಂಚಾಲಕ ಡಾ.ವಿ.ನಂದಕುಮಾರ್, ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಗೋವಿಂದ ರಾಜು, ಸಹ ಪ್ರಾಧ್ಯಾಪಕ ವಿ.ಆರ್. ರಮೇಶ್ ಬಾಬು, ಸಹಾಯಕ ಪ್ರಾಧ್ಯಾಪಕರಾದ ಹೆಚ್.ಎಸ್. ರಂಗನಾಥ್, ಹೆಚ್.ಆರ್. ದಿನೇಶ್, ಟಿ.ವಿ.ಲೋಕೇಶ್ ಉಪಸ್ಥಿತರಿದ್ದರು.

'ನಮ್ಮ ಪೊಲೀಸ್ ನಮ್ಮ ಹೆಮ್ಮೆ': ಮೈಸೂರಲ್ಲಿ ಇಂದು ಮ್ಯಾರಥಾನ್

ಮೈಸೂರು, ಮಾ.8(ಆರ್‌ಕೆ)– ಮೈಸೂರಲ್ಲಿ ನಾಳೆ (ಮಾ.9) 'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಧ್ಯೇಯವಾಕ್ಯದೊಂದಿಗೆ ಮ್ಯಾರಥಾನ್ ಏರ್ಪಡಿಸಲಾಗಿದೆ. ಭಾನುವಾರ ಮುಂಜಾನೆ 5.30 ಗಂಟೆಗೆ ಮೈಸೂರು ಅರಮನೆ ಆವರಣದಿಂದ ಆರಂಭವಾಗುವ ಮ್ಯಾರಥಾನ್ (5 ಕಿ.ಮೀ) ಕೆಆರ್. ವೃತ್ತ ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ಜಂಕ್ಷನ್, ಮುಡಾ ಜಂಕ್ಷನ್, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಹಾರ್ಡಿಂಗ್ ವೃತ್ತದ ಮೂಲಕ ಸಾಗಿ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಅಂತ್ಯವಾಗಲಿದೆ.

10 ಕಿ.ಮೀ ಮ್ಯಾರಥಾನ್ ಕೂಡ ಅರಮನೆ ಆವರಣದಿಂದ ಆರಂಭವಾಗಿ ಕೆಆರ್. ಸರ್ಕಲ್, ಡಿ.ದೇವರಾಜ ಅರಸು ರಸ್ತೆ ಜೆಎಲ್‌ಬಿ ಜಂಕ್ಷನ್, ಮೆಟ್ರೋಪೋಲ್ ವೃತ್ತ ಹುಣಸೂರು ರಸ್ತೆ, ಪಡುವಾರಹಳ್ಳಿ ಸಿಗ್ನಲ್ ಲೈಟ್, ಮಾನಸ ಗಂಗೋತ್ರಿಯ ಬಯಲು ರಂಗಮಂದಿರ ಸೆನೆಟ್ ಭವನ, ಕ್ಲಾಕ್ ಟವರ್, ಕುವೆಂಪು ಪ್ರತಿಮೆ ಮೂಲಕ ಬೋಗಾದಿ ರಸ್ತೆ ತಲುಪಿ ಕುಕ್ಕರಹಳ್ಳಿ ಕೆರೆ ರಸ್ತೆ, ಸರಸ್ವತಿಪುರಂನ ಫೈರ್ ಬ್ರಿಗೇಡ್ ಸರ್ಕಲ್, ಏಕಲವ್ಯ ವೃತ್ತ ರಾಮಸ್ವಾಮಿ ವೃತ್ತ ಚಾಮರಾಜ ಜೋಡಿ ರಸ್ತೆ ಗನ್‌ಹೌಸ್ ವೃತ್ತ ಹಾರ್ಡಿಂಗ್ ವೃತ್ತದಲ್ಲಿ ಎಡಕ್ಕೆ ತಿರುಗಿ ಅರಮನೆ ಬಲರಾಮ ದ್ವಾರದ ಬಳಿ ಅಂತ್ಯಗೊಳ್ಳಲಿದೆ. ನಂತರ ಅರಮನೆ ಆವರಣದ ತ್ರಿನೇಶ್ವರ ದೇವಸ್ಥಾನದ ಬಳಿ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಏಕಾಏಕಿ ಮಹಿಳಾ ನೌಕರರ ಕೆಲಸದಿಂದ ವಜಾ ಮಾಡಿದಕ್ಕೆ ಪ್ರಜಾಪಾರ್ಟಿ ಖಂಡನೆ



ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಸಿಟಿ ಸಿಲ್ಕ್ ಎದುರು ನಡೆಸುತ್ತಿರುವ ಅಹೋರಾತ್ರಿ ಧರಣಿಗೆ ಕರ್ನಾಟಕ ಪ್ರಜಾಪಾರ್ಟಿ(ರೈತ ಪರ್ವ)ಬೆಂಬಲ ನೀಡಿತು.

ಮೈಸೂರು, ಮಾ.8(ಎಂಕೆ)– ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಚಾಮುಂಡಿ ಟೆಕ್ಸ್‌ಟೈಲ್ ಕಂಪನಿ ಘಟಕದ ಸಿಟಿ ಸಿಲ್ಕ್‌ನಲ್ಲಿ ಸುಮಾರು 16 ಜನ ಮಹಿಳಾ ನೌಕರರನ್ನು ಏಕಾಏಕಿ ಕೆಲಸದಿಂದ ತೆಗೆದಿರುವ ಕ್ರಮವನ್ನು ಖಂಡಿಸಿ ಕಳೆದೊಂದು ವಾರದಿಂದ ನಡೆಸುತ್ತಿರುವ ಅಹೋರಾತ್ರಿ ಧರಣಿಗೆ ಕರ್ನಾಟಕ ಪ್ರಜಾಪಾರ್ಟಿ(ರೈತ ಪರ್ವ) ಬೆಂಬಲ ನೀಡಿದೆ.

ಪ್ರತಿಭಟನಾ ಸ್ಥಳಕ್ಕೆ ಶನಿವಾರ ಭೇಟಿ ನೀಡಿದ ಕರ್ನಾಟಕ ಪ್ರಜಾಪಾರ್ಟಿ(ರೈತ ಪರ್ವ) ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಹಾಗೂ ಇನ್ನಿತರೆ ಮುಖಂಡರು, ಯಾವುದೇ ನೋಟಿಸ್ ನೀಡದೆ ಕೆಲಸದಿಂದ ತೆಗೆದಿರುವ ಮಹಿಳಾ ನೌಕರರನ್ನು ಕೂಡಲೇ ಕಂಪನಿಯ ಆಡಳಿತ ಮಂಡಳಿಯು ಪುನರ್ ನೇಮಕ ಮಾಡಿಕೊಳ್ಳಬೇಕೆಂದು ಆಗ್ರಹಿಸಿದರು.

ಕೆಪಿಸಿ ಮೈಸೂರು ಜಿಲ್ಲಾಧ್ಯಕ್ಷ ಪಿ.ಕುಮಾರಸ್ವಾಮಿ, ಕಾರ್ಮಿಕ ಘಟಕದ ಅಧ್ಯಕ್ಷ ಮಂಜುನಾಥ್, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಧ್ಯಕ್ಷೆ ಭಾಗ್ಯಮ್ಮ, ಪಕ್ಷದ ಜಿಲ್ಲಾ ಸಂಚಾಲಕರಾದ ಸುಧಾಮಣಿ, ವಕೀಲ ಎನ್.ಕೃಷ್ಣ, ಅಂದಾನಿ ಹಾಗೂ ಮೈಸೂರು ಮಾನಸ ಗಂಗೋತ್ರಿ ಸಂಶೋಧನಾ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶಿವಶಂಕರ್, ನಾಗೇಶ್ ಮತ್ತಿತರರು ಹಾಜರಿದ್ದರು.

ತುಂಗಭದ್ರಾ ನದಿಯಲ್ಲಿ ಮುಳುಗಿ ಮೂವರು ನೀರುಪಾಲು

ಗದಗ: ಸ್ನೇಹಿತರೊಂದಿಗೆ ತುಂಗಭದ್ರಾ ನದಿಯಲ್ಲಿ ಈಜಲು ಹೋಗಿದ್ದ ಮೂವರು ನೀರು ಪಾಲಾಗಿರುವ ಘಟನೆ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಕೊರಲಹಳ್ಳಿಯಲ್ಲಿ ನಡೆದಿದೆ. ಶರಣಪ್ಪ ಬಡಿಗೇರ (34), ಮಹೇಶ್ (36), ಗುರುನಾಥ್ (38) ನೀರುಪಾಲಾದವರು. ಗದಗ ಜಿಲ್ಲೆಯ ಶಿರಹಟ್ಟಿಯಿಂದ ಆಗಮಿಸಿದ್ದ ಐವರು ಸ್ನೇಹಿತರ ಗುಂಪು ಆಂಜನೇಯನ ದರ್ಶನ ಪಡೆದು ಬಳಿಕ ನದಿಗೆ ಈಜಲು ಹೋಗಿದ್ದರು. ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಸ್ನೇಹಿತರೊಂದಿಗೆ ಶರಣಪ್ಪ ದೇವಸ್ಥಾನಕ್ಕೆ ಬಂದಿದ್ದ. ಈಜಲು ಬಾರದಿದ್ದರೂ ಸ್ನೇಹಿತ ಮಹೇಶ್ ನದಿಗೆ ಇಳಿದಿದ್ದ. ಆತ ನೀರುಪಾಲಾಗುತ್ತಿದ್ದಂತೆ ಶರಣಪ್ಪ ಹಾಗೂ ಗುರುನಾಥ್ ಆತನನ್ನು ರಕ್ಷಿಸಲು ನದಿಗೆ ಇಳಿದಿದ್ದಾರೆ. ಮೂವರು ನದಿ ನೀರು ಪಾಲಾಗಿದ್ದಾರೆ. ನದಿಯಲ್ಲಿ ನಾಪತ್ತೆಯಾಗಿರುವ ಮೂವರಿಗಾಗಿ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಶೋಧ ನಡೆಸಿದೆ. ವಿಜಯನಗರ ಜಿಲ್ಲೆ ಹೂವಿನಹಡಗಲಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ

ಹೆಣ್ಣು ಸರ್ವಶಕ್ತಿ ಸ್ವರೂಪಿಣಿ, ಅವಳಿಲ್ಲದೆ ಏನೂ ಇಲ್ಲ

ವಿಶ್ವ ಮಹಿಳಾ ದಿನಾಚರಣೆಯಲ್ಲಿ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯ



ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷಾರ್ಥಿಗಳಿಗೆ ಶುಭ ಹಾರೈಸಿ, ಲೇಖನ ಸಾಮಗ್ರಿಗಳನ್ನು ವಿತರಿಸಿ, ಶಿಕ್ಷಕಿಯರಾದ ಕೆ.ಎಂ.ಮಂಗಳ, ಗೌರಮ್ಮ, ಉಷಾ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಮೈಸೂರು, ಮಾ.8(ಜಿಎ)–ಹೆಣ್ಣು ಸರ್ವಶಕ್ತಿ ಸ್ವರೂಪಿಣಿಯಾಗಿದ್ದು, ಒಂದಲ್ಲ ಒಂದು ರೀತಿಯಲ್ಲಿ ಸರ್ವ ಕ್ಷೇತ್ರಗಳಲ್ಲೂ ಹೆಣ್ಣಿನ ಪಾತ್ರ ಇದ್ದೇ ಇರುತ್ತದೆ. ಹೆಣ್ಣಿಂದಲೇ ಎಲ್ಲಾ ಅವಳಿಲ್ಲದೆ ಏನೂ ಇಲ್ಲ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ತಿಳಿಸಿದರು.

ಮೈಸೂರಿನ ನ್ಯೂ ಸಂಯ್ಯಾಜಿರಾವ್ ರಸ್ತೆಯಲ್ಲಿರುವ ಧರ್ಮಪ್ರಕಾಶ ರಾವ್ ಬಹದ್ದೂರ್ ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲೆ ಮತ್ತು ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗದ ವತಿಯಿಂದ ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷಾರ್ಥಿಗಳಿಗೆ ಶುಭ ಹಾರೈಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಲಿಂಗ ತಾರತಮ್ಯತೆಯಿಂದ ಮುಕ್ತವಾದ ಉತ್ತಮ ಸಮಾಜವನ್ನು ನಿರ್ಮಿಸಲು ಮತ್ತು ಲಿಂಗ ಸಮಾನತೆಯ ಸಂದೇಶವನ್ನು ಜಗತ್ತಿಗೆ ಸಾರಲು ಹಾಗೂ ಮಹಿಳೆಯರ ಕಲೆ, ಸಾಹಿತ್ಯ, ಸಂಗೀತ, ಶಿಕ್ಷಣ, ಸಾಂಸ್ಕೃತಿಕ, ರಾಜಕೀಯ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಗಳನ್ನು ಸ್ಮರಿಸಿ ಗೌರವಿಸಲು 1975 ರಿಂದ ಪ್ರತಿವರ್ಷ ಮಾರ್ಚ್ 8 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಶ್ವಾದ್ಯಂತ ಆಚರಿಸಲಾಗುತ್ತಿದ್ದು, ಈ ದಿನವನ್ನು ಸಮಸ್ತ ಮಹಿಳೆಯರ ಗೌರವಾರ್ಥ ಅರ್ಪಿಸಲಾಗುತ್ತಿದೆ ಎಂದರು.

ಜಗದಲ್ಲಿ ಬೇಕಾದಷ್ಟು ಮಂದಿ ಸಾಧಕರಿರಬಹುದು. ಅನೇಕರು ಅದ್ಭುತ ಸಾಧನೆಗಳನ್ನು ಮಾಡಿ ಅವರು ಜಗತ್ತಿನಲ್ಲಿ ಶಾಶ್ವತವಾಗಿ ಉಳಿದು ಭೌತಿಕವಾಗಿ ಅಳಿದು ಹೋಗಿರಬಹುದು. ಆದರೆ ಅವರ ಜೊತೆ ಸ್ತ್ರೀಶಕ್ತಿಯ ಪ್ರಭಾವ ಜಗತ್ತಿನಲ್ಲಿ ಯಾವತ್ತೂ ಅಮರವಾದುದು. ಉದಾಹರಣೆಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಲೋಕ ವಿಖ್ಯಾತ ಭಾರತ ಸಂವಿಧಾನ ಬರೆದರಾದರೂ ಅವರ ಬೆನ್ನ ಹಿಂದಿನ ಬೆಳಕಾಗಿ ಇದ್ದದ್ದು ಅವರ ಮಡದಿ, ರಮಾಬಾಯಿ ಅಂಬೇಡ್ಕರರೆಂಬುದನ್ನು ನಮ್ಮ ಭಾರತ ದೇಶ ಎಂದೆಂದಿಗೂ ಮರೆಯುವಂತೆಯೇ ಇಲ್ಲ. ರಮಾಬಾಯಿಯಂತಹ ತಾಯಿ ಹೃದಯದ ಮಡದಿ ಅಂಬೇಡ್ಕರ್ ಅವರಿಗೆ ಸಿಕ್ಕಿದ್ದರಿಂದಲೇ ಭಾರತಕ್ಕೊಂದು ಮಹತ್ವಪೂರ್ಣ ಸಂವಿಧಾನ ದೊರೆಯಿತು ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾರ್ಥಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ ಲೇಖನ ಸಾಮಗ್ರಿಗಳನ್ನು ವಿತರಿಸಿ, ಶಿಕ್ಷಕಿಯರಾದ ಕೆ.ಎಂ.ಮಂಗಳ, ಗೌರಮ್ಮ, ಉಷಾ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ. ಸಂಗಪ್ಪ, ಶಿಕ್ಷಕರಾದ ಶ್ರೀನಿವಾಸ ಮೂರ್ತಿ, ಹೆಚ್. ಪಿ.ಹರೀಶ್ ಹಾಗೂ ದಿವ್ಯ ಮತ್ತಿತರರು ಉಪಸ್ಥಿತರಿದ್ದರು.

'ಮಹಿಳೆ–ಕಹಳೆ' ಕಾರ್ಯಕ್ರಮದಲ್ಲಿ ಸಾಧಕಿಯರಿಗೆ ಸನ್ಮಾನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ಜನನಿ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಮಹಿಳೆ–ಕಹಳೆ' ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಸಾಧಕಿಯರನ್ನು ಅಭಿನಂದಿಸಲಾಯಿತು.

ಮೈಸೂರು, ಮಾ.8(ಜಿಎ)– ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ಜನನಿ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಮಹಿಳೆ–ಕಹಳೆ' ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಸಾಧಕಿಯರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಸಾಧಕಿಯರಾದ ದಾಸಪ್ಪ ವಿಚಾರ ಸಂಸ್ಥೆಯ ಕಾರ್ಯದರ್ಶಿ ಸರೋಜ ತುಳಸಿದಾಸ್, ಜೆಎಸ್‌ಎಸ್ ಮಹಿಳಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಡಾ.ಎಸ್.ಪಿ.ಉಮಾದೇವಿ, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್‌ನ ರಾಜ್ಯ ಉಪಾಧ್ಯಕ್ಷೆ ಡಾ.ಸುಜಾತ ಎಸ್.ರಾವ್ ಅವರನ್ನು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಸನ್ಮಾನಿಸಿದರು.

ನಂತರ ಜೆಎಸ್‌ಎಸ್‌ನ ನಿವೃತ್ತ ಪ್ರಾಧ್ಯಾಪಕಿ ಡಾ.ಎಸ್.ಪಿ.ಉಮಾದೇವಿ ಮಾತನಾಡಿ, ಮಹಿಳಾ ದಿನಾಚರಣೆ ದಿನದಂದು ಸಾಧನೆ ಮಾಡಿದವರನ್ನು ಗುರುತಿಸಿದಂತೆ ಶೋಷಣೆಗೆ ಒಳಗಾದ ಮಹಿಳೆಯರನ್ನು ಗುರುತಿಸಿ, ಅವರಿಗೆ ಧೈರ್ಯ ತುಂಬುವ ಕಾರ್ಯ ಮಾಡಬೇಕಿದೆ ಎಂದು ತಿಳಿಸಿದರು.

ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಜೊತೆಗೆ ಆರ್ಥಿಕ ಸಬಲೀಕರಣಕ್ಕೆ ಸೌಲಭ್ಯಗಳನ್ನು ಬಳಸಿಕೊಂಡಿರುವ ಹಿನ್ನೆಲೆಯಲ್ಲಿ ಸಾಕಷ್ಟು ಮಹಿಳೆಯರು ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗೆಯೇ ಮಹಿಳೆಯರಿಗೆ ಅನೇಕ ಜಲ್ವಂತ ಸಮಸ್ಯೆಗಳಿವೆ. ವಿಶ್ವಾದ್ಯಂತ ಧನಿ ಇಲ್ಲದವರಿಗೆ ಧನಿಯಾಗಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಈ.ಬನ್ನಮ್ಮ, ಸುಶೀಲ ನಂಜಪ್ಪ ರಾಜೇಶ್ವರಿ, ಕೆ.ಬಿ.ಜಯಂತಿ, ಹೆಚ್. ಪಿ.ಪವಿತ್ರ ಎಂ.ಬಿ.ಗೀತಾ, ಎಸ್.ಎಂ.ಉಮಾ, ಸೌಮ್ಯ, ಪುಷ್ಪಲತಾ, ಗಾಯತ್ರಿ ಅನಸೂಯ, ಎಂ.ಕೆ.ಶೋಭ, ಮಾಲಿನಿ ಅಯ್ಯರ್, ರಶ್ಮಿ ರಾಘವೇಂದ್ರ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಎಂ.ಕೆ. ಅಶೋಕ್, ಪದಾಧಿಕಾರಿಗಳಾದ ಆರ್.ಸೌಮ್ಯ ಅಶೋಕ್, ಆರ್.ನಂದಿನಿ, ಗೌರವ್ ಸುಧಾ ಮುರಳಿ ಉಪಸ್ಥಿತರಿದ್ದರು.

ತಾಯಂದಿರು, ಸಹೋದರಿಯರ ಆಶೀರ್ವಾದವೇ ನನ್ನ ದೊಡ್ಡ ಶಕ್ತಿ

ಲಕ್‌ಪತಿ ದೀದಿಯರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಮಾತು



ಗಾಂಧೀನಗರ, ಮಾ.8–ನನ್ನ ಜೀವನವು ಕೋಟ್ಯಾಂತರ ತಾಯಂದಿರು ಮತ್ತು ಸಹೋದರಿಯರ ಆಶೀರ್ವಾದ. ನಾನು ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿ. ತಾಯಂದಿರು ಮತ್ತು ಸಹೋದರಿಯರ ಆಶೀರ್ವಾದವೇ ನನ್ನ ದೊಡ್ಡ ಶಕ್ತಿ. ಮಹಿಳೆಯರನ್ನು ಗೌರವಿಸುವುದೇ ಅಭಿವೃದ್ಧಿ ಹೊಂದಿದ ಭಾರತಕ್ಕೆ ಮೊದಲ ಹೆಜ್ಜೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆ ಗುಜರಾತ್‌ನ ನವಸಾರಿಯಲ್ಲಿ ಲಕ್‌ಪತಿ ದೀದಿಯರೊಂದಿಗೆ ಸಂವಾದ ನಡೆಸಿದ ಅವರು, ವನಸಿ ಬೋರ್ಸಿ ಗ್ರಾಮದಲ್ಲಿ 25,000ಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳ 2.5 ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ 450 ಕೋಟಿ ರೂ.ಗಳ ಆರ್ಥಿಕ ಸಹಾಯವನ್ನು ವಿತರಿಸಿದರು. ಗುಜರಾತ್‌ಗೆ 2,587 ಕೋಟಿ ರೂ.ಗಳ ಯೋಜನೆಗಳನ್ನು ಉಡುಗೊರೆಯಾಗಿ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, 'ಗುಜರಾತ್ ಸಫಲ್' ಮತ್ತು 'ಗುಜರಾತ್ ಮೈತ್ರಿ' ಎಂಬ ಎರಡು ಯೋಜನೆಗಳನ್ನು ಇಂದು ಪ್ರಾರಂಭಿಸಲಾಗಿದೆ. ಸರ್ಕಾರದ ಅನೇಕ ಯೋಜನೆಗಳ ಹಣವನ್ನು ನೇರವಾಗಿ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ. ಇದಕ್ಕಾಗಿ ನಾನು ನಿಮ್ಮೆಲ್ಲರನ್ನೂ ಅಭಿನಂದಿಸುತ್ತೇನೆ ಎಂದರು.

ಇಂದು ಮಹಿಳೆಯರಿಗೆ ಮೀಸಲಾದ ದಿನ 'ಮುಸ್ಲಿಂ ಮಹಿಳೆಯರು ರಕ್ಷಣೆ ಕೋರಿದರು ಮತ್ತು ಅವರ ಜೀವನವು ಹಾಳಾಗದಂತೆ ಅವರ ವಿವಾಹದ ಹಕ್ಕುಗಳ ರಕ್ಷಣೆಯ ಹಕ್ಕು ಕಾಯ್ದೆ, 2019ರ ಅಡಿಯಲ್ಲಿ ರಕ್ಷಿಸಲಾಗಿದೆ. ಕಾಶ್ಮೀರದಲ್ಲಿ 370ನೇ ವಿಧಿ ಜಾರಿಯಲ್ಲಿದ್ದಾಗ ಅಲ್ಲಿನ ಮಹಿಳೆಯರು ಅನೇಕ ಹಕ್ಕುಗಳಿಂದ ವಂಚಿತರಾಗಿದ್ದರು. ಅವರು ರಾಜ್ಯದ ಹೊರಗೆ ಮದುವೆಯಾದರೆ, ಅವರಿಗೆ ಆಸ್ತಿಯ ಹಕ್ಕು ಸಿಗುತ್ತಿರಲಿಲ್ಲ. 370ನೇ ವಿಧಿಯನ್ನು ತೆಗೆದುಹಾಕಿದ ನಂತರ, ಈಗ ಅವರು ದೇಶದ ಇತರ ಮಹಿಳೆಯರಂತೆ ಸಮಾನ ಹಕ್ಕುಗಳನ್ನು ಹೊಂದಿದ್ದಾರೆ ಎಂದು ತಿಳಿಸಿದರು.

ಮಹಿಳೆಯರಿಗೆ ಶೌಚಾಲಯ (ಇಜ್ಜತ್ ಘರ್) ಕಲ್ಪಿಸುವ ಮೂಲಕ ನಾವು ಅವರಿಗೆ ಗೌರವ ನೀಡಿದ್ದೇವೆ ಎಂದು ಪ್ರಧಾನಿ ಮೋದಿ ತಮ್ಮ ಭಾಷಣದಲ್ಲಿ ಹೇಳಿದರು.